This PDF was created using the Sonic PDF Creator.
To remove this watermark, please license this product at www.investintech.com




894.814 400 803 72
TEJ N90
ಗ್ರಂಥ ಸ್ವಾಮ್ಯ ವಿಭಾಗ

This PDF was created using the Sonic PDF Creator.
To remove this watermark, please license this product at www.investintech.com

This PDF was created using the Sonic PDF Creator.
To remove this watermark, please license this product at www.investintech.com

# ಅಲೆಮಾರಿಯ ಅಂಡಮಾನ್

ಹಾಗೂ

# ಮಹಾನದಿ ನೈಲ್

ಕೆ. ಪಿ. ಪೂರ್ಣಚಂದ್ರ ತೇಜಸ್ವಿ

ಪರಿಸರ ಸಾಹಿತ್ಯ ಪ್ರಕಾಶನ
ಶಿವಮೊಗ್ಗ

This PDF was created using the Sonic PDF Creator.
To remove this watermark, please license this product at www.investintech.com

*ALEMARIYA ANDAMAN HAAGU MAHANADI NILE - A Collectio of two Articles by K. P. Poornachandra Tejaswi, Mudigere Printed by Pragathi Printers, III Cross, Garden Area, Shimoga an Published by Parisara Sahitya Prakashana, C/o Sri M. B Nataraj, National College of Commerce, Shimoga; pages 208 + IV 1990. Price Rs. 25/=*

© ಲೇಖಕ

ಚಿತ್ರಗಳು : ಪ್ರದೀಪ್ ರಾಯ್ಕರ್

ಬೆಲೆ ರೂ. 25—00

ಅಲೆಮಾರಿಯ
ಅಂಡಮಾನ್

ಮುದ್ರಣ :
ಪ್ರಗತಿ ಮುದ್ರಣಾಲಯ
ಶಿವಮೊಗ್ಗ

This PDF was created using the Sonic PDF Creator.
To remove this watermark, please license this product at www.investintech.com

## ಮೊದಲ ಮಾತು

ಒಂದು ಪ್ರವಾಸಾನುಭವ, ಮತ್ತೊಂದು ಅಭ್ಯಾಸ ಲೇಖನವನ್ನೊಳಗೊಂಡ ಈ ಕೃತಿಯನ್ನು ಓದುಗರಿಗೆ ಅರ್ಪಿಸಲು ಸಂತೋಷವಾಗುತ್ತದೆ.

ತಮ್ಮ ವಿಭಿನ್ನ ಧೋರಣೆ, ಸಾಹಿತ್ಯ ಧೋರಣೆಯಿಂದಾಗಿ ತೇಜಸ್ವಿ ಬರಹಗಳು ವಿಮರ್ಶಕರಿಗೆ ಮಹತ್ವಪೂರ್ಣವಾಗಿ ಕಾಣುತ್ತಿವೆ, ಸಾಮಾನ್ಯ ಓದುಗರೂ ಕುತೂಹಲ ಕಾತುರದಿಂದ ನಿರೀಕ್ಷಿಸುವಂತಾಗಿದೆ.

ತೇಜಸ್ವಿ ವಸ್ತು ಮತ್ತು ನಿರೂಪಣೆ – ಎರಡೂ ದೃಷ್ಟಿಗಳಲ್ಲಿ ಸ್ವಂತದ್ದೂ ಕನ್ನಡದ್ದೂ ಆದ ಒಂದು ಮಾರ್ಗವನ್ನು ಕಂಡುಕೊಂಡಿದ್ದಾರೆ. ಇವುಗಳಿಗೆ ಹೊಂದಿಕೆಯಾಗಿ ಬರುವ ಸಡಿಲರೂಪದ ಆದರೆ ಸಂಕೀರ್ಣ ವ್ಯಕ್ತಿತ್ವದ ಪಾತ್ರಗಳು, ನಮ್ಮ ಸಮಾಜದ ಕಟು ವಾಸ್ತವಗಳು, ತಳದಲ್ಲೆಲ್ಲೂ ಹರಿಯುವ ಹಾಸ್ಯದ ತಿಳಿ, ಧೋರಣೆಯಲ್ಲಿ ಹೇಗೂ ಹಾಗೆಯೇ ಕೃತಿಯಲ್ಲೂ ಕಾಣುವ ಒಂದು ತಾತ್ವಿಕ ನಿಲುವು – ಇವುಗಳಿಂದಾಗಿ ನಮ್ಮ ಇಂದಿನ ಬರಹಗಾರರಲ್ಲಿ ಪ್ರತ್ಯೇಕವಾಗಿ ಕಾಣುತ್ತಿದ್ದಾರೆ.

ಎಷ್ಟೋ ಸಂದರ್ಭಗಳಲ್ಲಿ ಒಬ್ಬ ವಿದ್ಯಾವಂತ ಅಥವಾ ಸಂವೇದನಾಶೀಲ ಬರಹಗಾರನ ಕಣ್ಣಿಗೂ ಹೊಳೆಯದ ಒಂದು ರೀತಿಯ ವಾಸ್ತವ ಚಿತ್ರಣ 'ಅಲೆಮಾರಿಯ ಅಂಡಮಾನ್'ನಲ್ಲಿ ದೊರೆಯುತ್ತದೆ. ಕೇವಲ ಅನ್ವೇಷಣೆಯ ದೃಷ್ಟಿಯಿಂದಲೇ ಕೈಗೊಳ್ಳುವ ವಿದ್ವಾಂಸರ ಪ್ರವಾಸವೂ ಎಲ್ಲರಿಗೂ ಪ್ರಿಯವಾಗುವುದಿಲ್ಲ, ಪ್ರಿಯವಾಗಬೇಕಾದುದೂ ಇಲ್ಲ. ಆದರೆ ಇಲ್ಲಿ ಅನ್ವೇಷಣೆಯ ಕುತೂಹಲವಿದೆ, ಪೂರ್ಣವಾಗಿ ದಕ್ಕದುದಕ್ಕೆ ಹಾಸ್ಯದ ಮೊನೆಯಿದೆ; ಒಂದು ಮಿತ ಪ್ರವಾಸದ ಅನುಭವವೂ ಸಾಹಿತ್ಯವಾಗುವುದಕ್ಕೆ ಇದೊಂದು ನಿದರ್ಶನ.

This PDF was created using the Sonic PDF Creator.
To remove this watermark, please license this product at www.investintech.com

ಈಜಿಪ್ಟಿನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ನೈಲ್ ಮಹಾನದಿ ತನ್ನ ಹುಟ್ಟಿನ ಗುಟ್ಟನ್ನು ಬಿಟ್ಟುಕೊಡದ ಮಹಾ ಪಾತ್ರವಾಗಿ ಪರಿಣಮಿಸಿದೆ. ನೂರಾರು ವರ್ಷಗಳಿಂದ ಇದರ ಮೂಲವನ್ನರಸಿ ಹೋದ ತಂಡಗಳೆಲ್ಲ ಅರೆಬರೆ ಸತ್ಯಗಳಿಂದ ಹಿಂದಿರುಗಿವೆ. ಇವರ ಸಾಹಸದ ಕಥೆ ನೈಲ್ ನದಿಯ ಹಿರಿಮೆಯಲ್ಲಿ ಅಂತರ್ಗತವಾಗಿ ಹರಿಯುತ್ತಿದೆ. ಈ ನದಿ ಬಗ್ಗೆ ಇಂತಹ ಒಂದು ಅಭ್ಯಾಸ ಲೇಖನ ಕನ್ನಡದಲ್ಲಿ ಮೊದಲೆಂದು ನಮ್ಮ ಭಾವನೆ.

ಭೂಮಿಯ ಪರಿಸರ ಮತ್ತು ಸಂಚಾರಕ್ಕಿಂತ ಭಿನ್ನವಾದ, 'ಜಲ'ಕ್ಕೆ ಸಂಬಂಧಿಸಿದ ವಿಸ್ಮಯಗಳು ಅಸಂಖ್ಯಾತ, ವೈಚಿತ್ರ್ಯಗಳಿಂದ ಕೂಡಿದುದು. ಸಮುದ್ರಯಾನವೇ ನಿಷಿದ್ಧ ಎಂದ ಒಂದು ಸಂಸ್ಕೃತಿಯಲ್ಲಿ ಅದರ ಸಾಹಸವಾಗಲಿ, ಕುತೂಹಲವಾಗಲಿ, ತಿಳುವಳಿಕೆಯಾಗಲಿ ಹೇಗೆ ಬರಬೇಕು? ಪ್ರವಾಸ ಲೇಖನದ ಮಾತಂತು ಇಂತಹ ಸಂದರ್ಭಗಳಲ್ಲಿ ಹಾಸ್ಯಾಸ್ಪದ ವಿಚಾರವಾಗುತ್ತದೆ.

ತೇಜಸ್ವಿ ತಾವು ಕಂಡ ಸಂತೋಷ–ಆಶ್ಚರ್ಯಗಳನ್ನು ಇಲ್ಲಿ ಸರಳವಾಗಿ ಗೆಲುವಾಗಿ ನಿರೂಪಿಸಿದ್ದಾರೆ.

ಇದನ್ನು ಪ್ರಕಟಿಸಲು ಒಪ್ಪಿದ ತೇಜಸ್ವಿ ಅವರಿಗೆ; ಲೇಖನಗಳಿಗೆ ಔಚಿತ್ಯ ಪೂರ್ಣವಾದ ಚಿತ್ರಗಳನ್ನು ತಾಳ್ಮೆಯಿಂದ ಬರೆದ ಪ್ರದೀಪ್ ರಾಯ್ಕರ್ ಅವರಿಗೆ; ಈ ಪುಸ್ತಕ ಪ್ರಕಟಣೆಗೆ ಸಹಕರಿಸಿದ ಜಿ. ಹಿ. ಬಸವರಾಜು ಮತ್ತು ಅಚ್ಚುಕಟ್ಟಾಗಿ ಮುದ್ರಿಸಿದ ಪ್ರಗತಿ ಮುದ್ರಣಾಲಯದ ಮಾಲಿಕರಾದ ಶ್ರೀ ನಾರಾಯಣ ರಾವ್ ಮತ್ತು ಅವರ ಸಿಬ್ಬಂದಿ ವರ್ಗಕ್ಕೆ ನಮ್ಮ ಕೃತಜ್ಞತೆಗಳು.

— ಪ್ರಕಾಶಕರು

This PDF was created using the Sonic PDF Creator.
To remove this watermark, please license this product at www.investintech.com

# ಅಲೆಮಾರಿಯ ಅಂಡಮಾನ್

This PDF was created using the Sonic PDF Creator.
To remove this watermark, please license this product at www.investintech.com

This PDF was created using the Sonic PDF Creator.
To remove this watermark, please license this product at www.investintech.com



# 1. ರನ್‌ವೇ

ರನ್‌ವೇನಲ್ಲಿ ವೇಗವಾಗಿ ಓಡುತ್ತಿದ್ದ ವಿಮಾನ ಒಮ್ಮೆ ಉಯ್ಯಾಲೆಯಲ್ಲಿ ತೂಗಿದಂತೆ ತೂಗಿ ಅಂಡಮಾನಿನ ನೆಲ ಬಿಟ್ಟು ಮೇಲೆದ್ದಿತು. ವಿಮಾನದ ಕಿಟಕಿಯಿಂದ ಇಣುಕಿ ನೋಡಿದೆ. ಅಂಡಮಾನ್ ಕೊನೆಯ ಬಾರಿಗೆ ಕಣ್ಣಿಗೆ ಬಿತ್ತು. ಹಸಿರು ನೀಲಿ ಬಣ್ಣದ ಸಮುದ್ರ ಅಂಡಮಾನಿನ ಹವಳದ ದಂಡೆಗಳ ತೀರದ ಮೇಲೆ ಉರುಳುತ್ತಾ ಇತ್ತು. ಮೇಲೆಮೇಲೇರುತ್ತಿದ್ದ ವಿಮಾನ ನಮ್ಮನ್ನು ಕುರ್ಚಿಗಳತ್ತ ಒತ್ತುತ್ತಾ ಇತ್ತು. ಇನ್ನು ಕೆಲವೇ ಹೊತ್ತಿನಲ್ಲಿ ನಾವಿಳಿಯುವ ಮದ್ರಾಸನ್ನು ನೆನೆಸುತ್ತಾ ವಿಮಾನದ ತೊಟ್ಟಿಲು ಕುರ್ಚಿಯ ಮೇಲೆ ಹಾಗೆ ಒರಗಿದೆ, ಅಂಡಮಾನಿನ ಪ್ರವಾಸದ ಅನುಭವಗಳೆಲ್ಲಾ ಸ್ಮೃತಿಪಟಲದಿಂದ ಮರೆಯಾಗ ತೊಡಗಿತು.

ಹೇಗಿತ್ತು ಅಂಡಮಾನ್? ಎಂದು ಯಾರಾದರೂ ಕೇಳಿದರೆ ಪರ್ವಾಗಿಲ್ಲ, ಚೆನ್ನಾಗಿತ್ತು! ಎಂದು ದೇಶಾವರಿ ಉತ್ತರ ಕೊಟ್ಟು ಸುಮ್ಮನಾಗಬೇಕಿತ್ತು. ಅದರ

This PDF was created using the Sonic PDF Creator.
To remove this watermark, please license this product at www.investintech.com

ಬಗ್ಗೆ ಬರೆಯಬೇಕೆಂದಾಗಲೀ ಅಥವಾ ಅದರ ಅನುಭವವನ್ನು ಇತರರಿಗೆ ಕೊರೆಯಬೇಕೆಂದಾಗಲೀ ಅನ್ನಿಸಲಿಲ್ಲ. ನಿಜಕ್ಕೂ ನನ್ನ ಪ್ರವಾಸಗಳಿಗೆ ಒಂದು ಉದ್ದೇಶವೇ ಇರುವುದಿಲ್ಲ. ಎಲ್ಲಿಗೆ ಹೋಗಿ ಏನನ್ನು ನೋಡಿ ಏನಾಗಬೇಕಾಗಿದೆ! ಎಂದೇ ನನಗೆ ಯಾವಾಗಲೂ ಅನ್ನಿಸುತ್ತಿರುತ್ತದೆ. ಅದರಲ್ಲೂ ಪ್ರವಾಸಿಕೇಂದ್ರಗಳಿಗೆ ಹೋಗುವುದೆಂದರಂತೂ ನನಗೆ ಎಲ್ಲಿಲ್ಲದ ಬೇಸರ.

ಕ್ಯಾಲೆಂಡರುಗಳಲ್ಲಿ, ಸಿನೆಮಾಗಳಲ್ಲಿ ಆಗಲೇ ಪ್ರಕಾಶನಗೊಂಡು ಕ್ಲೀಷೆಗಳಾಗಿರುವ ಪ್ರವಾಸಿ ಪ್ರಸಿದ್ಧಕ್ಷೇತ್ರಗಳನ್ನು ನೋಡಲು ನನಗೆ ಕೊಂಚವೂ ಉತ್ಸಾಹವಿಲ್ಲ. ಹಾಗಾಗಿ ತಾಜಮಹಲ್, ಕುತುಬ್ ಮೀನಾರು, ಆಗ್ರಾ ಇಲ್ಲಿಗೆಲ್ಲಾ ಹೋದಾಗ ಬೇಸರದಿಂದ ನಾನು ಗೆಳೆಯರಿಗೆ ದಯವಿಟ್ಟು ನೀವೇ ಒಳಗೆ ಹೋಗಿ ನೋಡಿಬನ್ನಿ, ನಾನು ಹೊರಗೇ ಕುಳಿತಿರುತ್ತೇನೆ ಎಂದು ಉಳಿದಿದ್ದೆ. ಯಾರಿಗೆ ತಾವಿರುವಲ್ಲೇ ಸಂತೋಷ ಉತ್ಸಾಹ ಕುತೂಹಲಗಳಿರುವುದಿಲ್ಲವೋ ಅವರು ಅದನ್ನು ಹುಡುಕಿಕೊಂಡು ಎಲ್ಲಿಗೆ ಪ್ರವಾಸ ಹೋಗುವುದೂ ವ್ಯರ್ಥ. ಆದ್ದರಿಂದ ನನಗೆ ನಾನು ಅಂಡಮಾನಿಗೆ ಹೋದುದಕ್ಕೂ ಹೋಗದಿದ್ದುದಕ್ಕೂ ಹೆಚ್ಚು ವ್ಯತ್ಯಾಸ ಕಾಣಲಿಲ್ಲ.

ವಿಮಾನದಲ್ಲಿ ನನ್ನ ಪಕ್ಕ ರಾಜೇಶ್ವರಿ ಕುಳಿತಿದ್ದಳು. ಹಿಂದೆಮುಂದೆ ಅಕ್ಕಪಕ್ಕ ಚಂದ್ರು, ಮಲ್ಲಿಕ್, ಬಸವರಾಜು, ಶಾಂತ, ನಿರ್ಮಲಾ, ರಾಮದಾಸ್ ಇತ್ಯಾದಿ ಇಡೀ ಕರ್ನಾಟಕದ ಟೀಮು ಕುಳಿತಿದ್ದರು. ನನ್ನೊಬ್ಬನನ್ನು ಬಿಟ್ಟರೆ ಅವರೆಲ್ಲಾ ಮೊದಲ ಬಾರಿಗೆ ವಿಮಾನದಲ್ಲಿ ಕುಳಿತಿದ್ದವರು. ಕಿಟಕಿಯಿಂದ ಇಣುಕಿದರೆ ಕೆಳಗೂ ನೀಲಿ, ಮೇಲೂ ನೀಲಿ, ಮಧ್ಯೆ ನಿಂತಹಾಗೆ ಹಾರುತ್ತಿರುವ ವಿಮಾನ. ವಾಯುಯಾನದ ಬಗ್ಗೆ ಬಹುಶಃ ಏನೇನೋ ಕಲ್ಪನೆಗಳನ್ನು ಕಟ್ಟಿಕೊಂಡಿದ್ದ ಇವರಿಗೆಲ್ಲಾ ವಿಮಾನದ ಈ ನಿಶ್ಚಲಯಾನ ನಿರಾಶೆಯನ್ನುಂಟು ಮಾಡಿದ್ದಿರಬೇಕು.

ಅಂಡಮಾನಿಗೆ ಹೋದಾಗ ಹಡಗಿನಲ್ಲಿ ಹೋಗಿದ್ದೆವು. ಆಗಿದ್ದ ಲವಲವಿಕೆ ಚಟುವಟಿಕೆಗಳು ವಿಮಾನದೊಳಗೆ ಕಾಣಲಿಲ್ಲ. ವಿಮಾನದಲ್ಲಿ ಅರ್ಧಕ್ಕರ್ಧ ಕುರ್ಚಿಗಳು ಖಾಲಿ ಬಿದ್ದಿದ್ದವು. ಅಂಡಮಾನಿನ ವಿಮಾನ ನಿಲ್ದಾಣದ ರನ್‌ವೇ ತೀರ ಚಿಕ್ಕದಿದ್ದುದರಿಂದ ವಿಮಾನಕ್ಕೆ ಪೂರ್ತಿ ಭಾರ ಹಾಕಿದರೆ ಅದು ರನ್‌ವೇ ಬಿಟ್ಟು ಮೇಲೆ ಹಾರಲು ಸಾಧ್ಯವಿಲ್ಲವೆಂದೇ ಅದಕ್ಕೆ ಅರ್ಧಕ್ಕಿಂತ ಹೆಚ್ಚಿಗೆ ತೂಕ ಹಾಕುತ್ತಿರಲಿಲ್ಲ.

This PDF was created using the Sonic PDF Creator.
To remove this watermark, please license this product at www.investintech.com

ವಿಮಾನ ಅಪಹರಣಕಾರರ ಹಿಡುಗಿನ ದೆಸೆಯಿಂದ ಈಗ ವಿಮಾನ ಯಾನ ತೀರ ಕ್ಲಿಷ್ಟಗೊಳ್ಳತೊಡಗಿದೆ. ವಿಮಾನಯಾನದ ಪೂರ್ವಭಾವಿ ತಪಾಸಣೆ ಹೆಚ್ಚು ಕಡಿಮೆ ಮಿಲಿಟರಿ ಅಪರೇಷನ್ನಿನಂತಿರುತ್ತದೆ. ಪ್ರತಿಯೊಬ್ಬರ ಸಾಮಾನು ಸರಂಜಾಮುಗಳನ್ನೂ ಉಡುಪುಗಳನ್ನೂ ಸವಿವರ ತನಿಖೆ ನಡೆಸುತ್ತಾರೆ. ನಾವು ಒಯ್ದಿದ್ದ ಮೀನು ಹಿಡಿಯುವ ರಾಡು ರೀಲುಗಳನ್ನಂತೂ ವಿಪರೀತ ಗುಮಾನಿ ಯಿಂದ ವಿಧ್ವಂಸಕ ಅಸ್ತ್ರಗಳಂತೆ ಪರಿಗಣಿಸಿ ಪರಿಶೀಲಿಸಿದ್ದರು.

ವಿಮಾನ ಹೆಚ್ಚುಕಡಿಮೆ ನಿಶ್ಯಬ್ದವಾಗಿ ಹಾರುತ್ತಿತ್ತು. ವಿಮಾನದ ಹೊರಗೆ ಕಿವಿಗಡಚಿಕ್ಕುವಂತೆ ಕೇಳುವ ಎಂಜಿನ್ನುಗಳ ಶಬ್ದ ವಿಮಾನದ ಒಳಗೆ ಯಾಕೆ ಚೂರೂ ಕೇಳುವುದೇ ಇಲ್ಲ! ಎಂದು ಆಶ್ಚರ್ಯವಾಯ್ತು. ಕಿಟಕಿಯಿಂದ ಮತ್ತೊಮ್ಮೆ ಹೊರಕ್ಕೆ ನೋಡಿದೆ. ವಿಮಾನದ ರೆಕ್ಕೆ ಕಾಣುತ್ತಿತ್ತು, ಕೆಳಗೆಲ್ಲೊ ಪಾತಾಳದಲ್ಲಿ ಒಂದೊಂದು ಬಿಳಿಯ ಮೋಡ ತೇಲುತ್ತಿದ್ದವು. ಊರುಬಿಟ್ಟು ಸುಮಾರು ಇಪ್ಪತ್ತು ದಿನಗಳು ಕಳೆದಿದ್ದವು. ಇಪ್ಪತ್ತು ದಿನಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಕಿಲೋಮೀಟರು ಅಲೆದಾಡಿದ್ದೆವು.

ನಾವು ಅಂಡಮಾನಿಗೆ ಹೋಗಲಿದ್ದೇವೆಂದು ಒಂದು ವರ್ಷದ ಹಿಂದೆಯೇ ತುತ್ತೂರಿ ಊದಿ ಎಲ್ಲರೂ ಅನೇಕ ದಿನಗಳಿಂದ "ಇದೇನ್ರಯ್ಯ ಇನ್ನೂ ಇಲ್ಲೇ ಇದ್ದೀರಿ? ಅಂಡಮಾನಿಗೆ ಹೋಗಿ ಬಂದ್ರೋ ಏನು ಕತೆ?'' ಎಂದು ಕೇಳತೊಡ ಗಿದ್ದರು. ಇನ್ನು ಅವರಿಗೆ ಸಮಾಧಾನಕರ ಉತ್ತರ ಕೊಡಬಹುದೆಂದನ್ನಿಸಿತು.

ಅಂಡಮಾನಿಗೆ ಹೋಗಿಬಂದವರು ಬಹಳ ಕಡಿಮೆ ಮಂದಿ ಭಾರತದಲ್ಲಿರ ಬಹುದು. ಏಕೆಂದರೆ ಅಲ್ಲಿ ಯಾವ ದೇವಸ್ಥಾನವೂ ಇಲ್ಲ, ಪವಿತ್ರಕ್ಷೇತ್ರವೂ ಇಲ್ಲ ಅಥವಾ ಸಿಂಗಪೂರದಂತೆ ಷಾಪಿಂಗ್ ಸೆಂಟರೂ ಇಲ್ಲ. ಆದರೆ ಅಂಡಮಾನಿನ ಹೆಸರು ತಿಳಿದವರು ಮಾತ್ರ ತುಂಬಾ ಜನ ಇದ್ದಾರೆ. ಇದಕ್ಕೆ ಮುಖ್ಯ ಕಾರಣ ಹಿಂದೆಲ್ಲಾ ಪಕ್ಕಾ ಕೇಡಿಗಳನ್ನು ಅಂಡಮಾನಿನ ಪ್ರಸಿದ್ಧ ಜೇಲುಗಳಿಗೆ ರವಾನಿಸುತ್ತಿದ್ದುದು. ಸಹಸ್ರಾರು ಮೈಲುಗಳ ಸಮುದ್ರದಿಂದ ಸುತ್ತುವರಿದಿದ್ದ ಈ ದ್ವೀಪದ ಜೇಲುಗಳಿಗೆ ಹೋಗುವುದು ಮರಣದಂಡನೆಗೆ ಸರಿಸಮನಾದುದಾಗಿತ್ತು. ಆ ಖೈದಿಗಳು ಜೇಲುಗಳಿಂದ ತಪ್ಪಿಸಿಕೊಂಡರೂ ಅಂಡಮಾನಿನ ಕಗ್ಗಾಡಿನ ಕಾಡುಮನುಷ್ಯರಿಗೆ ಆಹುತಿಯಾಗಬೇಕಿತ್ತು. ಇದರೊಡನೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಅನೇಕ ಅಪ್ರತಿಮ ಹೋರಾಟಗಾರರನ್ನೂ ಬ್ರಿಟಿಷರು ಅಂಡಮಾನಿನ ಜೇಲುಗಳಿಗೆ ರವಾನಿಸಿದ್ದರಿಂದ ಅಂಡಮಾನ್ ಹೆಸರಿಗೆ ಒಂದು ಚಾರಿತ್ರಿಕ

This PDF was created using the Sonic PDF Creator.
To remove this watermark, please license this product at www.investintech.com

ಮಹತ್ವವೂ ಬಂದಿತ್ತು. ಇದೆಲ್ಲ ಕಾರಣಗಳಿಂದಲೇ ಎಂದು ತೋರುತ್ತದೆ ಅಂಡಮಾನ್ ಹೆಸರು ಭಾರತದಲ್ಲಿ ಚಿರಪರಿಚಿತವಾಗಿರುವುದು.

ಚಿರಪರಿಚಿತ ಎಂದರೇನು? ಅನೇಕರು ಹೆಸರು ಕೇಳಿರುತ್ತಾರೆ. ಅನೇಕರು ಅಂಡಮಾನಿನ ಬಗ್ಗೆ ಅಲ್ಲಲ್ಲಿ ಓದಿರುತ್ತಾರೆ. ಈ ಎಲ್ಲದರ ಕಾರಣವಾಗಿ ಮನಸ್ಸಿನಲ್ಲಿ ಅಂಡಮಾನ್ ಅಂದೊಡನೆ ಒಂದು ಪೂರ್ವ ಕಲ್ಪನೆ ಮೂಡುತ್ತದೆ. ಉದಾಹರಣೆಗೆ ನನಗೆ ಅಂಡಮಾನಿನ ಹೆಸರು ಪರಿಚಯವಾದುದು ಈಗ್ಗೆ ಸುಮಾರು ಮೂವತ್ತೈದು ವರ್ಷಗಳ ಹಿಂದೆ. ಮಿಡ್ಲಸ್ಕೂಲ್‌ನಲ್ಲಿ ಓದುತ್ತಿದ್ದಾಗ ನಮ್ಮ ಭೂಗೋಳದ ಮೇಷ್ಟರಾದ ನರಸಿಂಹಾಚಾರ್ಯರು ಪಾಠ ಮಾಡುತ್ತಾ ಅಂಡಮಾನಿನ ಜೇಲುಗಳ ಬಗ್ಗೆ ಹೇಳಿದ್ದರು. ಅಲ್ಲಿಗೆ ಹೋದವರು ಮತ್ತೆ ಹಿಂದಿರುಗಿ ಬರುವುದೇ ಇಲ್ಲೆಂದು ಹೇಳಿದ್ದರು. ನನಗೋ ಆಗ ಅಂಡಮಾನ್ ಎಂದರೆ ಸಾಕ್ಷಾತ್ ಪರಲೋಕವಿದ್ದಂತೆಯೇ.

ಬಿರುಗಾಳಿಯಿಂದ ಕೂಡಿದ್ದ ಸಮುದ್ರದ ಹೆದ್ದರೆಗಳು ಬಂದಪ್ಪಳಿಸುವ ದೊಡ್ಡ ಬಂಡೆಯ ನಡುಗಡ್ಡೆಯ ಮೇಲೆ ಕಲ್ಲಿನಿಂದ ಕಟ್ಟಿದ ಕಾರಾಗೃಹಗಳಲ್ಲಿ ಬಂಧಿಸಿಟ್ಟ ಕಳ್ಳರು ಸಾವನ್ನೆದುರು ನೋಡುತ್ತಾ ಇರುವ ಕಲ್ಪನೆಯೊಂದನ್ನು ಮಾಡಿಕೊಂಡಿದ್ದೆ. ಆಗ ನಾನು ಕಳ್ಳರ ಬಗ್ಗೆ ಯೋಚಿಸುವುದಕ್ಕಿಂತಲೂ ಈ ಕಳ್ಳರಿಗೆ ದಿನಾ ಶಿಕ್ಷೆ ಕೊಡುವ ಜೈಲಿನ ಅಧಿಕಾರಿಗಳ ಬಗ್ಗೆ ಚಿಂತಿಸಿದ್ದೆ. ಅವರ ಕತೆಯೇನು? ಅವರಿಗೆ ಊಟ ತಿಂಡಿ ಎಲ್ಲಿಂದ? ಅವರಿಗೆ ಹೆಂಡಿರು ಮಕ್ಕಳು ಇರುತ್ತಾರಾ? ಕಳ್ಳರಿಗಾದರೂ ಶಿಕ್ಷೆ ಮುಗಿದ ಮೇಲೆ ಒಂದುದಿನ ಬಿಡುಗಡೆಯಾಗುವ ಸಾಧ್ಯತೆ ಇರುತ್ತದೆ. ಆದರೆ ಇವರ ಉಸ್ತುವಾರಿ ನೋಡಿಕೊಳ್ಳುವವರಿಗೆ ಇಲ್ಲಿಂದ ಬಿಡುಗಡೆಯೇ ಇಲ್ಲವಲ್ಲ! ಖೈದಿಗಳಿಗೆ ಖೈದಿಗಳಾಗಿರುವ ಇವರ ಬಗ್ಗೆ ಕನಿಕರದಿಂದ ಯೋಚಿಸುತ್ತಿದ್ದೆ.

ಇದಾದನಂತರ ಅಂಡಮಾನಿನಲ್ಲಿ ದಟ್ಟಡವಿಗಳೂ ಬೆಟ್ಟಗಳೂ ನರಭಕ್ಷಕ ಕಾಡುಜನರೂ ಇದ್ದಾರೆಂದು ತಿಳಿದನಂತರ ನನ್ನ ಹಳೆಯ ಪೂರ್ವಕಲ್ಪನೆ ಅಳಿಸಿ ಹೋಗಿ ಇನ್ನೊಂದು ಮೂಡಿತು. ಇಂದಿಗೂ ನಾನು ನನ್ನ ಈ ಪೂರ್ವ ಕಲ್ಪನೆಗಳಿಂದ ಬಿಡಿಸಿಕೊಳ್ಳಬೇಕಾದರೆ ನನ್ನ ಅಂಡಮಾನ್ ಅನುಭವವನ್ನು ಒಂದು ಸುಸಂಬದ್ಧ ಹೇಳಿಕೆಯಾಗಿ ಬರೆಯುವುದೊಂದೇ ಮಾರ್ಗವೆಂದು ಕಾಣುತ್ತದೆ. ವಿವರಗಳಲ್ಲಿ ಹರಡಿಕೊಂಡಿರುವ ಚದುರಿದ ಪ್ರತಿಮೆಗಳಾಗಿರುವ ನನ್ನ ಅಂಡಮಾನಿನ ಅನುಭವಗಳನ್ನು ಬರೆಯುವವರಗೂ ನಾನು ಸಮುದ್ರದ ನಡುಗಡ್ಡೆ

This PDF was created using the Sonic PDF Creator.
To remove this watermark, please license this product at www.investintech.com

ಯಿಂದ ಆವೃತವಾದ ಕಾರಾಗೃಹದಲ್ಲಿ ಕುಳಿತ ಖೈದಿಯಂತೆ ಸ್ವ ಕಲ್ಪನೆಗಳಲ್ಲೇ ಸಿಕ್ಕಿಕೊಂಡಿರಬೇಕಾಗುತ್ತದೆ.

* * *

ವಿಮಾನ ನಿಲ್ದಾಣಗಳಲ್ಲಿ, ರೈಲು ನಿಲ್ದಾಣಗಳಲ್ಲಿ, ಬಸ್ಸುಗಳಲ್ಲಿ ಈಚೆಗೆ ಜಗಳವಾಡದೆ ಸಂಚರಿಸುವುದು ದುರ್ಲಭವಾಗಿದೆ. ಮೊದಲೇ ಎಚ್ಚರಿಕೆ ತಗೊಂಡು ರಿಜರ್ವ್ ಮಾಡಿಸಿದ್ದರೂ ಸೀಟು ಸಿಗದೆ, ಎಲ್ಲೆಲ್ಲೋ ಹುಡುಕಾಡಿ, ನಿಮ್ಮ ಸೀಟಿನಲ್ಲಿ ಸುಖಾಸೀನನಾಗಿ ಆಗಲೇ ಕುಳಿತವನೊಡನೆ ಜಗಳವಾಡಿ ಒಟ್ಟಿನಲ್ಲಿ ಮನಃಕ್ಲೇಶವಿಲ್ಲದೆ ಪ್ರಯಾಣ ಮಾಡುವುದು ಕಷ್ಟವಾಗಿದೆ. ಅಂಡಮಾನಿನ ಪೋರ್ಟ್‌ಬ್ಲೇರ್ ನಿಲ್ದಾಣದಲ್ಲಿ ಆದುದೂ ಇದೇ. ಹಿಂದಿನ ದಿನವೇ ನಮಗೆ ಸೀಟು ಸಿಕ್ಕಿರುವುದನ್ನು ದೃಢಪಡಿಸಿಕೊಂಡು ಗಂಟುಮೂಟೆ ಕಟ್ಟಿ, ಗೆಳೆಯರಿಗೆಲ್ಲಾ ವಿದಾಯ ಹೇಳಿ, ವಿಮಾನ ನಿಲ್ದಾಣಕ್ಕೆ ಬಂದು ಕೌಂಟರಿನಲ್ಲಿ ನಮ್ಮ ಟಿಕೆಟ್ ಕೊಟ್ಟರೆ ನಿಮಗೆ ಸೀಟು ಇಲ್ಲವೇ ಇಲ್ಲ! ಎಂದು ಆ ಅಧಿಕಾರಿ ಟಿಕೆಟ್ ಹಿಂದಿರುಗಿಸಿದ. ಆ ಅಧಿಕಾರಿಯ ವರ್ತನೆಯಿಂದ ನಮಗೆ ರೇಗಿಹೋಯಿತ್ತು.

''ನಮಗೆ ಬುಕ್ಕಿಂಗ್ ಆಫೀಸಿನಿಂದ ನಿಮ್ಮ ಟಿಕೆಟ್‌ಗಳ ಬಗ್ಗೆ ಏನೂ ತಿಳಿಸಿಲ್ಲ'' ಎಂದ ಆತ.

''ಅರೆ ಇದೇನ್ರಿ ಹೀಗೆ ಹೇಳುತ್ತೀರ! ನಿನ್ನೆ ಸಾಯಂಕಾಲ ಎಲ್ಲ ಕೇಳಿ ದೃಢಪಡಿಸಿಕೊಂಡೆ ಇಲ್ಲಿಗೆ ಬಂದಿದ್ದೇವೆ? ಸ್ವಲ್ಪ ಸರಿಯಾಗಿ ನೋಡಿ.''

''ಅದೇನೋ ನಮಗೆ ಗೊತ್ತಿಲ್ಲ. ಬೇಕಾದರೆ ಬುಕ್ಕಿಂಗ್ ಆಫೀಸಿನಲ್ಲಿಯೇ ಕೇಳಿಕೊಳ್ಳಿ.''

''ಅಷ್ಟರೊಳಗೆ ವಿಮಾನ ಹೊರಟುಹೋಗುತ್ತಲ್ಲ.''

''ನಾನು ಹೇಳಿದೆನಲ್ಲ ನೀವು ಬುಕ್ಕಿಂಗ್ ಆಫೀಸ್‌ನಲ್ಲಿ ಹೋಗಿ ಕೇಳಿ ಎಂದು.''

''ನಾವ್ಯಾಕೆ ಹೋಗಬೇಕು. ನಾವು ಅಲ್ಲಿ ಹೋಗಿ ಕೇಳಿಯೇ ಇಲ್ಲಿ ಬಂದಿರೋದು. ಬೇಕಾದರೆ ನೀವು ಹೋಗಿ ಕೇಳಿಕೊಂಡು ಬನ್ನಿ.''

''ನಾನ್ಯಾಕೆ ಹೋಗಲಿ. ನಾನು ಕೌಂಟರ್ ಬಿಟ್ಟು ಅಲುಗುವ ಹಾಗೆ ಇಲ್ಲ.'

This PDF was created using the Sonic PDF Creator.
To remove this watermark, please license this product at www.investintech.com

"ನಾವು ಹೋಗಿ ಕೇಳಿಕೊಂಡು ಬರುವವರೆಗೆ ವಿಮಾನ ಕಾಯಲು ಹೇಳುತ್ತೀರ?"

"ನೋಡಿ, ಕೌಂಟರಿನಲ್ಲಿ ನಿಂತುಕೊಂಡು ಜಗಳ ಆಡಬೇಡಿ. ಪ್ರಯಾಣಿಕರಿಗೆ ತೊಂದರೆಯಾಗುತ್ತೆ."

"ಅರೆ ನಾವೂ ಪ್ರಯಾಣಿಕರೆ. ನಮಗೆ ತೊಂದರೆಯಾಗ್ತಿದೆ ಅಂತ ನಿಮಗೆ ತಿಳಿಸುತ್ತಿದ್ದೇವೆ."

"ನೋಡಿ ಈ ರೀತಿ ವಾದ ನಿಮಗೆ ಚೆನ್ನಾಗಿರೋದಿಲ್ಲ."

"ನೋಡಿ ಈ ರೀತಿ ವರ್ತನೆ ನಿಮ್ಮ ಇಲಾಖೆಗೆ ಮರ್ಯಾದೆ ತರೋಲ್ಲ."

ನಮ್ಮ ಮಾತಿನ ಚಕಮಕಿ ಮುಂದುವರೆದುದನ್ನು ನೋಡಿ ಇನ್ನಿಬ್ಬರು ಸಮವಸ್ತ್ರದ ಅಧಿಕಾರಿಗಳು ಬಂದರು. ಮತ್ತೆ ಅವರಿಗೂ ನಾವು ನಮ್ಮ ಬವಣೆಯನ್ನು ವಿವರಿಸತೊಡಗಿದೆವು. ನಮ್ಮ ಕಾತರ ಮತ್ತು ಜಗಳಗಳಲ್ಲಿ ನಾವೆಷ್ಟು ಮಗ್ನರಾಗಿದ್ದೆವೆಂದರೆ ನಮ್ಮ ಗುಂಪಿನ ಎಲ್ಲ ಹೆಸರನ್ನೂ ಅಲ್ಲಿಯೇ ಪಕ್ಕದಲ್ಲಿ ಒಬ್ಬ ಧ್ವನಿವರ್ಧಕದ ಮುಖಾಂತರ ಕೂಗುತ್ತಾ ಕೌಂಟರಿಗೆ ಬರಬೇಕೆಂದು ತಿಳಿಸುತ್ತಿದ್ದುದು ನಮಗೆ ಗಮನಕ್ಕೆ ಬರಲೇ ಇಲ್ಲ. ನಾಲ್ಕಾರು ಬಾರಿ ಕೂಗಿ ಕೊನೆಗೆ ಆತ ಆ ಪಟ್ಟಿಯನ್ನು ನಾವು ಜಗಳ ಕಾಯುತ್ತಿದ್ದ ಅಧಿಕಾರಿಯ ಬಳಿಗೆ ತಂದು ಇವರ್‍ಯಾರು ಬಂದಿಲ್ಲವೆಂದು ಹೇಳಿದ. ಆಗಲೇ ನಮಗೆ ಗೊತ್ತಾದುದು ಇವರು ನಮಗಾಗಿ ಹುಡುಕಾಡುತ್ತಿದ್ದಾರೆಂದು.

ಆ ಆಫೀಸರು ನಮ್ಮ ಟಿಕೆಟ್‌ಗಳನ್ನೂ ಆ ಪಟ್ಟಿಯನ್ನೂ ಸರಿಯಾಗಿ ನೋಡದೆ ನಮ್ಮನ್ನು ವಾಪಾಸ್ ಕಳಿಸುವ ಸನ್ನಾಹದಲ್ಲಿದ್ದ. ನಾವೆಲ್ಲಾ ಇನ್ನಷ್ಟು ಕೋಪದಿಂದ ಅವನನ್ನು ದುರುದುರು ನೋಡಿದೆವು. ಈ ರೀತಿ ಕೊನೆ ಗಳಿಗೆಯ ವಿಘ್ನಗಳಿಲ್ಲದೇ ನಾವು ಎಲ್ಲಿಗೂ ಯಾವತ್ತೂ ಪ್ರವಾಸ ಹೋಗಿ ಬಂದೇ ಇಲ್ಲವೆಂದು ಹೇಳಿದರೆ ಅತಿಶಯವಾಗಲಾರದು. ಅಂಡಮಾನ್ ಪ್ರವಾಸದ ಪ್ರತಿಹಂತದಲ್ಲೂ ನಾವು ಈ ರೀತಿಯ ಕ್ಷಣ ಗಂಡಾಂತರಗಳನ್ನು ಎದುರಿಸುತ್ತಲೇ ಮೂರುಸಾವಿರ ಮೈಲಿ ತಿರುಗಿದೆವು. ಅದೆಲ್ಲಾ ಮುಂದೆ ನಿಮಗೆ ಹೇಳುತ್ತೇನೆ.

* * *

ವಿಮಾನದಲ್ಲಿ ನಮಗೆ ಕೊಟ್ಟ ಆಹಾರ ಮುಗಿಸಿ ಟೀ ಕುಡಿದು ಬಾಯಿ ಒರೆಸಿಕೊಳ್ಳುವ ವೇಳೆಗಾಗಲೇ ವಿಮಾನ ಮೆಲ್ಲಗೆ ಕೆಳಗೆ ಕುಸಿಯುತ್ತಿರುವ ಅನುಭವ

This PDF was created using the Sonic PDF Creator.
To remove this watermark, please license this product at www.investintech.com

ವಾಗತೊಡಗಿತು. ದೂರದಲ್ಲಿ ಮೇಘಾಚ್ಛಾದಿತ ಭಾರತದ ಭೂಖಂಡ ಕಾಣತೊಡಗಿತು. ಸಾಗರದ ಮೇಲೆ ತೇಲುತ್ತಿರುವ ಹಡಗುಗಳೂ ಕಾಣತೊಡಗಿದವು. ಸಾಸಿವೆಯ ಕಾಳಿನಂತೆ ಕಾಣುತ್ತಿದ್ದ ಮನೆಗಳು ರಸ್ತೆಗಳು, ಮರಗಳು, ಸರ್ರನೆ ದೊಡ್ಡದಾಗ ತೊಡಗಿದವು.

ಕಣ್ಮುಚ್ಚಿ ಬಿಡುವುದರೊಳಗೆ ನಮ್ಮ ವಿಮಾನ ಮದ್ರಾಸ್ ವಿಮಾನ ನಿಲ್ದಾಣದ ರನ್‌ವೇನಲ್ಲಿ ಜಾರಿ ಇಳಿದಿತ್ತು. ದೂರದ ಅಂಡಮಾನಿನಿಂದ ನಮ್ಮನ್ನು ಚಕ್ಕನೆ ತಂದಿಳಿಸಿ ವಿಮಾನ ನಮ್ಮ ಪ್ರಜ್ಞೆಗೆ ದೊಡ್ಡ ಆಘಾತ ವನ್ನುಂಟುಮಾಡಿತ್ತು.

ನಮ್ಮ ಆಧುನಿಕ ಜೆಟ್ ವಿಮಾನಗಳು ನೆಲಬಿಟ್ಟು ಹಾರುವಾಗ ಮತ್ತು ಇಳಿಯುವಾಗ ಮಾತ್ರ ನಮಗೆ ವಿಮಾನಯಾನದ ಆಹ್ಲಾದಕರ ಅನುಭವ. ಒಮ್ಮೆ ಆಕಾಶದಲ್ಲಿ ಮೇಲೇರಿತೆಂದರೆ ಆರಾಮ ಕುರ್ಚಿಯೊಂದರಲ್ಲಿ ರೂಮಿನಲ್ಲಿ ಕುಳಿತಂತಿರುತ್ತದೆ. ಗಗನದಲ್ಲಿ ಹಾರುವುದರ ಬಗ್ಗೆ ಏನೇನೋ ಕಲ್ಪನೆಗಳನ್ನು ಇಟ್ಟುಕೊಂಡಿದ್ದವರಿಗೆ ವಿಮಾನದ ಅಪಾರ ವೇಗ ಮತ್ತು ಎತ್ತರಗಳು, ಅನುಭವ ಗಮ್ಯವಾಗುವುದೇ ಇಲ್ಲ. ನೀಲ ಗಗನದಲ್ಲಿ ನಮ್ಮ ಎತ್ತರ ವೇಗಗಳನ್ನು ಸಾದೃಶ್ಯದಿಂದ ಅರಿಯಲು ಏನೂ ಇಲ್ಲದಿರುವುದರಿಂದ ವಿಮಾನ ಮುಂದೆ ಚಲಿಸುತ್ತಿದೆಯೋ ಸುಮ್ಮನೆ ನಿಂತಿದೆಯೋ ಎಂಬುದೂ ತಿಳಿಯುವುದಿಲ್ಲ.

ಅಂಡಮಾನಿಗೆ ಹೋಗುವಾಗ ಹಡಗಿನಲ್ಲಿ ನಮಗೆ ನಾಲ್ಕು ದಿನ ಹಿಡಿದಿತ್ತು. ನ್ಯಾವಿಗೇಟರ್ ರೂಮಿಗೆ ದಿನಾ ಹೋಗಿ ನಮ್ಮ ಹಡಗು ಯಾವ ಅಕ್ಷಾಂಶ ರೇಖಾಂಶದಲ್ಲಿ ಚಲಿಸುತ್ತಿದೆಯೆಂದು ಭೂಪಟದಲ್ಲಿ ನೋಡಿ ಯಾವ ದಿನ ಎಷ್ಟು ಹೊತ್ತಿಗೆ ಅಂಡಮಾನಿನಲ್ಲಿರುತ್ತೇವೆಂದು ಲೆಕ್ಕ ಹಾಕುತ್ತಿದ್ದೆವು. ಅದಕ್ಕೆ ತದ್ವಿರುದ್ಧವಾಗಿ ವಿಮಾನ, ನಾವು ನೀರು ಕುಡಿದು ಬಾಯಿ ಒರೆಸಿಕೊಳ್ಳುವುದರೊಳಗೆ ಅಂಡಮಾನಿನಿಂದ ತಂದು ಮದ್ರಾಸಿಗೆ ಬಿಟ್ಟಿತ್ತು.

ನಮ್ಮ ಸಾಮಾನು ಸರಂಜಾಮುಗಳನ್ನು ಹೊತ್ತುಕೊಂಡು ಮದ್ರಾಸ್ ವಿಮಾನ ನಿಲ್ದಾಣದ ಹೊರಗೆ ಬಂದು ರಣಬಿಸಿಲಿನಲ್ಲಿ ಬೆವರುತ್ತ ಮುಂದೆಲ್ಲಿಗೆ ಎಂದು ನಿಂತು ಯೋಚಿಸಿದೆವು.

ನನ್ನ ಪಕ್ಕ ನಿಂತಿದ್ದ ರಾಮದಾಸ್ ಕಡೆಗೆ ನೋಡಿದೆ.

"ನಾವು ವಿಮಾನದಲ್ಲಿ ಬರಬಾರದಿತ್ತು" ಎಂದರು.

This PDF was created using the Sonic PDF Creator.
To remove this watermark, please license this product at www.investintech.com

"ಯಾಕ್ರೀ? ವಿಮಾನದಲ್ಲಿ ಒಮ್ಮೆ ಹಾರಬೇಕು ಎಂದು ಹೇಳಿದ್ರಲ್ಲಾ" ಎಂದೆ.

"ನಾವೆಷ್ಟೊಂದು ತೂಂದರೆ ತಗೂಂಡು ಎಲ್ಲೆಲ್ಲಾ ಹೋಗಿದ್ದವು!"

"ನೋಡಿದಿರಾ ಹೇಗಿದೆ ಆಧುನಿಕ ಸಾರಿಗೆ ವ್ಯವಸ್ಥೆ! ಕೇವಲ ಎರಡೇ ಗಂಟೆಗಳ ಹಿಂದೆ ನಾವು ಅಂಡಮಾನಿನ ವಿಮಾನ ನಿಲ್ದಾಣದಲ್ಲಿ ಜಗಳ ಕಾಯುತ್ತಾ ನಿಂತಿದ್ದವೆಂದು ನಮಗೇ ನಂಬುವುದಕ್ಕೆ ಆಗುತ್ತಿಲ್ಲ. ಆಧುನಿಕ ಜೆಟ್ ವಿಮಾನಗಳು ಎಂದರೆ ಹೀಗೆ ಸುಮ್ಮನೆ ಬಾಗಿಲು ತೆಗೆದು ಒಳಗೆ ಕುರ್ಚಿಯಲ್ಲಿ ಕುಳ್ಳಿರಿಸಿ ಬಾಗಿಲು ಮುಚ್ಚುತ್ತಾರೆ. ಮತ್ತೆ ಬಾಗಿಲು ತೆಗೆದಾಗ ನೀವು ಖಂಡ ಖಂಡಗಳನ್ನೇ ದಾಟಿರುತ್ತೀರಿ"

"ಥತ್! ಮೈಸೂರಿನಿಂದ ನಂಜನಗೂಡಿಗೆ ಹೋಗಿ ಬಂದ ಹಾಗಾಯ್ತಲ್ಲಾ. ನಾವು ಹಡಗಿನಲ್ಲೇ ಬರಬೇಕಿತ್ತು ಕಣ್ರೀ" ಎಂದು ಗೊಣಗಿದರು ರಾಮದಾಸ್. ಅವರೊಡನೆ ನಮ್ಮ ಟೀಮಿನ ಮಹಿಳಾ ಸದಸ್ಯರೆಲ್ಲರೂ ವಿಮಾನಕ್ಕೆ ಬಯ್ದು ತಮ್ಮ ಅಸಮಾಧಾನ ಸೂಚಿಸಿದರು. ಇಷ್ಟು ಬೇಗ ತಂದುಬಿಟ್ಟಿತಲ್ಲ ಎಂದೇ ಅವರ ಅಸಮಧಾನ.

ಅಲ್ಲಿಂದಿಲ್ಲಿಗೆ ಬರಲು ವಿಮಾನ ತೆಗೆದುಕೊಂಡ ಅಲ್ಪ ಕಾಲಕ್ಕಿಂತ ಮಿಗಿಲಾಗಿ ನಮಗಾದ ಪರಿಸರದ ಬದಲಾವಣೆಯೇ ನಮಗೆ ಹೆಚ್ಚಿನ ಆಘಾತವನ್ನುಂಟು ಮಾಡಿತ್ತು. ಹವಳದ ನಿರ್ಜನ ಸಮುದ್ರ ತೀರಗಳ, ದಟ್ಟಕಾಡಿನ, ಬೆಟ್ಟಗುಡ್ಡಗಳ, ನಿಧಾನವಾಗಿ ಸರಿಯುವ ಕಾಲದ ಕಿನ್ನರಲೋಕ ಒಂದರಿಂದ ಮದರಾಸಿನ ಗಲಿ ಬಿಲಿ ಗಲಾಟೆಯ, ಧೂಳಿನ, ಹೊಗೆಯ, ಹರಿಯುವ ಕೊಚ್ಚೆಯ ನರಕಕ್ಕೆ ಧೊಪ್ಪನೆ ವಿಮಾನ ತಂದಿಳಿಸಿತ್ತು.

ಎಲ್ಲರಿಗೂ ಆದಷ್ಟು ಬೇಗ ಇಲ್ಲಿಂದ ಪಾರಾಗಿ ಊರು ಸೇರಿದರೆ ಸಾಕೆನ್ನಿಸತೊಡಗಿತ್ತು.

This PDF was created using the Sonic PDF Creator.
To remove this watermark, please license this product at www.investintech.com



# 2. ಅಂಡಮಾನಿನ ಕನಸುಗಳು

ಅಂಡಮಾನಿಗೆ ಹೋಗುವ ನಮ್ಮ ಕನಸು ಬಹಳ ದಿನಗಳದ್ದು. ಅದೇಕೆ ಅಂಡಮಾನಿಗೆ ಹೋಗಬೇಕೆಂದು ನಮಗೆ ಯೋಚನೆ ಬಂತೋ ನನಗಿನ್ನೂ ಸ್ಪಷ್ಟವಾಗಿ ಗೊತ್ತಿಲ್ಲ. ನನಗಂತೂ ಪುಣ್ಯಕ್ಷೇತ್ರಗಳಿಗೆ, ಪವಿತ್ರ ತೀರ್ಧಗಳಿಗೆ, ಚಾರಿತ್ರಿಕ ಸ್ಥಳಗಳಿಗೆ, ಪ್ರವಾಸಿ ಧಾಮಗಳಿಗೆ ಭೇಟಿ ಕೊಡುವ ಹಂಬಲವಂತೂ ಕೊಂಚವೂ ಇಲ್ಲ. ಅಷ್ಟೇ ಅಲ್ಲ ಅಂಧ ಜಾಗಗಳಿಗೆ ಮುಖ ಹಾಕಲೂ ನನಗೆ ಸಾಧ್ಯವಿಲ್ಲ. ಅನಿವಾರ್ಯವಾಗಿ ಅಂಧ ಒಂದೆರಡು ಜಾಗಗಳ ಮುಖಾಂತರ ಹೋಗಬೇಕಾಗಿ ಅಲ್ಲಿನ ಅರ್ಚಕರ, ದೇವಸ್ಥಾನದ ಏಜಂಟರುಗಳ, ವಸತಿಗೃಹಗಳ ಜನರ ಕಾಟ ಗಲಭೆಗಳನ್ನು ಕಂಡು ಹೇಸಿಹೋಗಿದ್ದೇನೆ.

ಪರಮಾರ್ಧ ಚಿಂತನೆಗೆ ಮಾನವನಿಗೆ ಅವಶ್ಯವಿರುವ ಏಕಾಂತವಾಗಲೀ ಗಂಭೀರ ಪರಿಸರವಾಗಲೀ ಈ ಕ್ಷೇತ್ರಗಳಲ್ಲಿ ಒಂದು ಚೂರಾದರೂ ಇರುತ್ತದೆಯೋ? ತಲೆ ಬೋಳಿಸಿಕೊಂಡು, ಕಿಟಕಿಗಳಿಗೆಲ್ಲಾ ತಮ್ಮ ಒದ್ದೆ ಬಟ್ಟೆಗಳನ್ನು

This PDF was created using the Sonic PDF Creator.
To remove this watermark, please license this product at www.investintech.com

ನೇತುಹಾಕಿಕೊಂಡು, ಬಸ್ಸಿನೊಳಗೆಲ್ಲಾ ವಾಂತಿ ಮಾಡಿಕೊಳ್ಳುತ್ತಾ ಸಾಗುವ ಈ ಪ್ರವಾಸಿಗಳ ಜೊತೆ ಕಣ್ಣು ಮೂಗು ಇರುವ ನರ ಮನುಷ್ಯ ಪ್ರವಾಸ ಹೋಗಲು ಸಾಧ್ಯವೇ? ಪಕ್ಕಾ ಐಹಿಕವಾದಿಗಳಾದ ಈ ಅರ್ಚಕರು, ಏಜಂಟರುಗಳು ಇವರ ಸ್ಪೆಷಲ್ ಪೂಜೆ, ಸೂಪರ್ ಪೂಜೆಗಳಿಂದ ಇವರ ಹುಂಡಿಗಳಿಗೆ ಹಣ ಹಾಕುವುದರಿಂದ ಯಾರಿಗಾದರೂ ಪುಣ್ಯಪ್ರಾಪ್ತಿ ಸಾಧ್ಯವೇ?

ಈ ನರಕಗಳಿಗೆ ಹೋಗುವುದರಿಂದ ದೊರೆಯುವ ಸ್ವರ್ಗವನ್ನು ನಾನೆಂದೋ ತ್ಯಜಿಸಿ ತಿಲಾಂಜಲಿ ಕೊಟ್ಟಿದ್ದೇನೆ. ಹಾಗೆ ನೋಡಿದರೆ ಹಿಂದೂಗಳದಕ್ಕಿಂತ ಇತರ ಧರ್ಮಗಳವರ ಪುಣ್ಯಕ್ಷೇತ್ರಗಳೇ ಎಷ್ಟೋ ಮೇಲಾಗಿರುವುದು ನನಗೆ ಕಂಡಿದೆ. ಮಸೀದಿಗಳು ಎಷ್ಟೋ ಗಂಭೀರವಾಗಿ ಶುಭ್ರವಾಗಿ ಮೌನವಾಗಿ ಇರುವುದನ್ನು ನೋಡಿದ್ದೇನೆ. ಮಾನವ ಪ್ರತಿಯೊಬ್ಬನೂ ಕೊನೆಗೂ ಸಾವಿನಲ್ಲಿ ಏಕಾಂಗಿ ಎನ್ನುವ ಕಠೋರ ಸತ್ಯವನ್ನು ಮರೆಸಲು ಹಿಂದೂಧರ್ಮ ಈ ರೀತಿ ಗಲಾಟೆ ಗದ್ದಲ ದೊಂಬಿ ಮೈಕುಗಳ ಮರೆ ಹೊಕ್ಕಿದೆಯೆ ಎನ್ನುವ ಅನುಮಾನ ಬರುತ್ತದೆ.

ನಮ್ಮ ಅನೇಕ ತೀರ್ಥಕ್ಷೇತ್ರಗಳ ಉಗಮ ನೋಡಿದರೆ ಅದು ಅವುಗಳ ಸದ್ಯದ ಪರಿಸ್ಥಿತಿಗಿಂತ ತದ್ವಿರುದ್ಧವಾಗಿರುತ್ತದೆ. ದೈನಂದಿನ ಜಂಜಡಗಳಿಂದ ಬೇಸತ್ತ ಮಹಾಪುರುಷರು ಪರ್ವತದ ತಪ್ಪಲುಗಳಿಗೋ ನದೀ ತೀರದ ಏಕಾಂತಗಳಿಗೋ ಹೋಗಿ ಅಲ್ಲಿ ಜನಗಳಿಗೆ ವೈರಾಗ್ಯ ಬೋಧನೆ ಮಾಡುತ್ತಾ ಏಕಾಂತದಲ್ಲಿ ಕಾಲಕಳೆದಿರುವ ಜಾಗಗಳೇ ಇಂದಿನ ತೀರ್ಥಕ್ಷೇತ್ರಗಳಾಗಿರುವುದು. ಅವರು ಸತ್ತಕೂಡಲೇ ಅಲ್ಲೆಲ್ಲಾ ಮಠ ಕಟ್ಟಿ, ಹುಂಡಿಗಳನ್ನು ನಿರ್ಮಿಸಿ ತಲೆಬೋಳಿಸಲು ಹಜಾಮರನ್ನು ಪ್ರತಿಷ್ಠಾಪಿಸಿ ಆ ಜಾಗದ ಏಕಾಂತವನ್ನೂ ಗಾಂಭೀರ್ಯವನ್ನೂ ಸಂಪೂರ್ಣ ನಾಶಮಾಡಿ, ಜಾಗದ ಮಹಿಮೆಯನ್ನು ಮಾತ್ರ ಕೊಂಡಾಡತೊಡಗುತ್ತಾರೆ. ಈಗಿನ ಅವತಾರಪುರುಷರು ಬಿಡಿ, ಹುಟ್ಟುವಾಗಲೆ ಹುಂಡಿ ಕಾಣಿಕೆ ಡಬ್ಬಿಗಳನ್ನು ಕೈಯಲ್ಲಿ ಹಿಡಿದುಕೊಂಡೇ ಹುಟ್ಟುತ್ತಾರೆ.

ಇನ್ನು ವಿದೇಶೀವಿನಿಮಯ ಗಳಿಸಲು ಮತ್ತು ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ನಮ್ಮ ಸರ್ಕಾರಗಳೇ ಅನೇಕ ಕಡೆ ಪ್ರವಾಸೀ ಕೇಂದ್ರಗಳನ್ನು ತೆರೆದಿವೆ. ಇವುಗಳಲ್ಲಿ ಬಹುಪಾಲು ನಮ್ಮ ರಾಜಕಾರಣದ ಪುಢಾರಿಗಳಿಗೆ ವೇಶ್ಯಾವಾಟಿಕೆಗಳಾಗಿವೆ. ಮೂರು ಹೊತ್ತೂ ಮಂತ್ರಿಗಳಿಗೋ ಅಥವಾ ಮಾಜಿ ಮಂತ್ರಿಗಳಿಗೋ ಎಮ್ಮೆಲ್ಯೆಗಳಿಗೋ ಎಂಪಿಗಳಿಗೋ ರಿಜರ್ವ್ ಆಗಿರುತ್ತದೆ. ಇವುಗಳಲ್ಲೆಲ್ಲಾ ಈ ದುರಾತ್ಮರ ಅವ್ಯವಹಾರಗಳು ಯಾವರೀತಿ ನಡೆಯುತ್ತದೆಂದರೆ

This PDF was created using the Sonic PDF Creator.
To remove this watermark, please license this product at www.investintech.com

ಮರ್ಯಾದೆ ಇರುವ ದಂಪತಿಗಳಾರೂ ಇತ್ತ ಸುಳಿಯಲು ಭಯಪಡುವ ಸ್ಥಿತಿ ಇದೆ. ಈ ಪ್ರವಾಸಿ ಧಾಮಗಳ ಒಳಚರಂಡಿ ವ್ಯವಸ್ಥೆಗಳೆಲ್ಲಾ ನಿರೋಧ್‌ಗಳು ಸಿಕ್ಕಿಕೊಂಡು ನೀರು ಹೋಗದಂತೆ ಕಟ್ಟಿಕೊಂಡಿರುತ್ತವೆ.

ಮೈಸೂರಿನ ಕಾವೇರಿ ನದಿ ಬಳಿ ಇರುವ ಪ್ರವಾಸಿ ಕೇಂದ್ರ ಒಂದರ ಹತ್ತಿರ ಒಮ್ಮೆ ರಾಮದಾಸ್ ಮೀನು ಹಿಡಿಯಲು ಗಾಳ ಹಾಕಿದಾಗ ಮೀನಿಗೆ ಬದಲು ಅವರ ಗಾಳಕ್ಕೆ ಒಂದು ದೊಡ್ಡ ನಿರೋಧ್ ಕಂತೆ ಸಿಕ್ಕಿಕೊಂಡು ಹೊರ ಬಂತು. ಇದೇನಯ್ಯಾ ಹೀಗೆ? ಎಂದು ತೋಟದ ಮಾಲಿಯನ್ನು ಕೇಳಿದಾಗ ಅವನು ಹೇಳಿದ ಕೆಲವು ಸಂಗತಿಗಳನ್ನು ಕೇಳಿ ನನಗೆ ಪ್ರವಾಸೋದ್ಯಮದ ಭಯಜನಕ ಪರಿಸ್ಥಿತಿಯ ಅರಿವು ಮೂಡತೊಡಗಿತು. ಅವ್ಯವಹಾರಗಳ ಆಗರಗಳಾಗಿರುವ ಈ ವಿಹಾರಧಾಮಗಳಿಗೆ ಹೋಗಿ ನಮ್ಮನ್ನು ಅವರೂ ಅವರನ್ನು ನಾವೂ ಪರಸ್ಪರ ಶಂಕೆಯಿಂದ ನೋಡುವುದರ ಬದಲು ಅಲ್ಲಿಗೆ ಹೋಗದಿರುವುದೇ ಮೇಲಲ್ಲವೆ?

ಒಮ್ಮೆ ಎತ್ತಲೋ ಪ್ರವಾಸ ಹೊರಟಿದ್ದ ಗೆಳೆಯನೊಬ್ಬನಿಗೆ ಅಂಡಮಾನಿಗೆ ಯಾಕೆ ಪ್ರವಾಸ ಹೋಗಬಾರದು? ಎಂದು ಕೇಳಿದೆ. ಅದಕ್ಕೆ ಆತ "ಅಲ್ಲೇನಿದೆ ಬರೇ ಕಾಡು, ಸಮುದ್ರ. ಉಳಿಯಲು ಒಂದು ಒಳ್ಳೆ ಹೋಟೆಲು ಸಹ ಇಲ್ಲ. ತುಂಬಾ ಹಿಂದುಳಿದ ಪ್ರದೇಶ'' ಎಂದು ಹೇಳಿದ. ಅಲ್ಲಿ ಕೆಲಸ ಮಾಡುತ್ತಿದ್ದ ಅವನ ಗೆಳೆಯ ಆತನಿಗೆ ಈ ವಿಷಯ ತಿಳಿಸಿದ್ದನಂತೆ. ಹಾಗಾದರೆ ಈ ಪುಣ್ಯಕ್ಷೇತ್ರಗಳು ದೇವಸ್ಥಾನಗಳು ಯಾವುವೂ ಇಲ್ಲದ ಜಾಗ ಅಂಡಮಾನ್ ಆಗಿದ್ದರೆ ನನ್ನಂಥ ಅಲೆಮಾರಿಗೆ ಅದೇ ಸರಿ ಎಂದೆನ್ನಿಸಿತು. ಅನೇಕಸಾರಿ ನಾವು ರಾಮದಾಸ್ ಲಂಕೇಶ್ ಮುಂತಾದವರ ಜೊತೆ ಮಾತನಾಡುತ್ತಾ ನಮ್ಮಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಕಾಡುಗಳು ಈಗ ಅಂಡಮಾನಿನಲ್ಲಿ ಮಾತ್ರ ಇರುವುದಂತೆ! ಒಮ್ಮೆ ಅಲ್ಲಿಗೆ ಯಾವಾಗಲಾದರೂ ಹೋಗಿಬರಬೇಕು ಎಂದು ಮಾತನಾಡುತ್ತಿದ್ದೆವು. ಆದರೆ ನಮ್ಮ ಅನೇಕ ಹಂಬಲಗಳಂತೆ ಇದೂ ಕೂಡ ಕೇವಲ ಒಂದು ಹಂಬಲವಾಗೇ ಉಳಿದಿತ್ತು.

ನಮ್ಮ ಮಿತ್ರರಲ್ಲೊಬ್ಬರಾದ ಪ್ರಶಾಂತ್ ತಮ್ಮ ಪಿ. ಎಚ್‌ಡಿ., ಮುಗಿಸಿ ಅಂಡಮಾನಿಗೆ ಕೃಷಿವಿಜ್ಞಾನಿಯಾಗಿ ಕೆಲಸಕ್ಕೆ ಹೋದುದು ನಮಗೆ ಗೊತ್ತೇ ಇರಲಿಲ್ಲ. ಪ್ರಶಾಂತ್ ಕೀಟ ಶಾಸ್ತ್ರದಲ್ಲಿ ಸಂಶೋಧನೆ ಮಾಡುತ್ತಿದ್ದಾಗ ಅನೇಕ ಬಾರಿ ಕೀಟ ಸಂಗ್ರಹಣೆ ಮತ್ತು ಸಂಶೋಧನೆಗಳಿಗೆ ಮೂಡಿಗೆರೆಯ ಸಂಶೋಧನ ಕೇಂದ್ರಕ್ಕೆ ಬರುತ್ತಿದ್ದರು. ಪ್ರಶಾಂತ್, ಚಕ್ರವರ್ತಿ, ನಾನು ಕೂಡಿ ಭದ್ರಾನದಿಯ

This PDF was created using the Sonic PDF Creator.
To remove this watermark, please license this product at www.investintech.com

ಕಾಡುಗಳಿಗೆ ಅನೇಕಬಾರಿ ಹೋಗಿದ್ದವು. ಹರಟೆ ಕೊಚ್ಚುತ್ತಾ ಗೊತ್ತುಗುರಿ ಇಲ್ಲದೆ ಕಾಡಲೆಯಲು ಅನೇಕಬಾರಿ ಪ್ರಶಾಂತ್ ನಮ್ಮೊಡನೆ ಬಂದು ಮುಳ್ಳು ಚುಚ್ಚಿಸಿಕೊಂಡು, ಮೈ ತರಚಿಸಿಕೊಂಡು, ಬಿದ್ದು ಗಾಯಮಾಡಿಕೊಂಡು "ಕಂಪನಿ" ಕೊಟ್ಟಿದ್ದರು. ಭದ್ರಾ ಕಾಡಿನಲ್ಲಿ ಒಮ್ಮೆ ಕಣಜದ ಗೂಡಿಗೆ ಡಿಕ್ಕಿ ಹೊಡೆದು ಅದರಿಂದೆದ್ದ ಕಣಜಗಳು ನಮಗೆ ಮೈಯೆಲ್ಲ ಬಾತುಕೊಳ್ಳುವಂತೆ ಕಚ್ಚಿದ್ದು ನನ್ನ ನೆನಪಿನಲ್ಲಿ ಇನ್ನೂ ಹಸುರಾಗಿದೆ.

ಮಲ್ಲಿಕ್ ಒಂದು ದಿನ ಬಂದು ಆಶ್ಚರ್ಯಾನಂದಗಳಿಂದ 'ಪ್ರಶಾಂತ್ ಕಾಗದ ಬರೆದಿದ್ದಾರೆ. ಅದೂ ಅಂಡಮಾನಿನಿಂದ!' ಎಂದು ಗೆಳೆಯರ ಗುಂಪಿನ ನಡುವೆ ಘೋಷಿಸಿದರು. ತಕ್ಷಣ ನಮ್ಮೆಲ್ಲರ ಕಣ್ಣುಗಳೂ ಹೊಸ ಆಸೆಯಿಂದ ಮಿನುಗಿದವು. ಪ್ರಶಾಂತ್ ತಮ್ಮ ಪತ್ರದಲ್ಲಿ ಅಂಡಮಾನಿನಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವ ಅನೇಕ ಬೆಂಗಳೂರಿನ ಮಿತ್ರರ ಹೆಸರನ್ನು ತಿಳಿಸಿದ್ದರು. ಚಂದ್ರು, ಮಲ್ಲಿಕ್, ಚಕ್ರವರ್ತಿ ಎಲ್ಲರೂ ಸ್ಥಳದಲ್ಲೇ ಒಂದು ಸಮಾಲೋಚನೆ ನಡೆಸಿ ಈ ಸಾರಿ ಹೇಗಾದರೂ ಮಾಡಿ ನಾವು ಅಂಡಮಾನಿಗೆ ಹೋಗಲೇಬೇಕೆಂದು ನಿರ್ಧಾರ ತಗೊಂಡೆವು. ಆದರೆ ನಮ್ಮ ಅನೇಕ ನಿರ್ಧಾರಗಳಿಗೆ ಆದ ಗತಿಯೇ ಇದಕ್ಕೂ ಬಂದೀತೆಂದು ಹೆದರಿ ಈ ಜವಾಬ್ದಾರಿಗಳನ್ನು ಗೆಳೆಯ ಮಲ್ಲಿಕ್‌ರಿಗೆ ವಹಿಸಿದೆವು. ಏಕೆಂದರೆ ತಾಳ್ಮೆಯಿಂದ ಪತ್ರವ್ಯವಹಾರ ನಡೆಸುವುದು, ಅರ್ಜಿಗಳನ್ನು ಬರೆಯು ವುದು, ಕೊಟ್ಟ ಕೆಲಸವನ್ನು ಪಟ್ಟು ಹಿಡಿದು ಸಾಧಿಸುವುದು ಮುಂತಾದ ಸದ್ಗುಣ ಗಳು ಅವರಲ್ಲಿ ನಮಗಿಂತ ಸ್ವಲ್ಪ ಹೆಚ್ಚಿಗೆ ಇದೆ ಎಂದು ನಮಗೆ ಅನ್ನಿಸಿತು.

ಗೆಳೆಯ ಚಂದ್ರು ಈ ವಿಷಯವನ್ನು ನಾವು ಹೊರಡುವ ಕೊನೆಯ ದಿನದವರೆಗೂ "ಟಾಪ್ ಸೀಕ್ರೆಟ್ಟಾಗಿ" ಇಡಬೇಕೆಂದು ಹೇಳಿದರು. ಏಕೆಂದರೆ ನಮ್ಮಂಥರ ಅಭಿರುಚಿಗಳಿಲ್ಲದವರು ನಾವೂ ಬರುತ್ತೇವೆಂದು ಹೇಳಿ, ಕೊನೆಗೆ ಅಂಡಮಾನಿನಲ್ಲಿ ಯಾವ ದೇವಸ್ಥಾನ ಪುಣ್ಯಕ್ಷೇತ್ರಗಳೂ ಇಲ್ಲದುದನ್ನು ನೋಡಿ ಹಿಂದಿರುಗೋಣ ಎಂದು ನಮ್ಮನ್ನು ನಿರುತ್ಸಾಹಗೊಳಿಸುತ್ತಾರೆಂದು ಅವರ ಊಹೆ. ನಾವೂ ಅದಕ್ಕೆ ಹೌದೆಂದು ಸಮ್ಮತಿಸಿ ನಮ್ಮ ಅಂಡಮಾನಿನ ಪ್ರವಾಸಕ್ಕೆ ಘನತೆ ಗೌರವಗಳನ್ನು ಆರೋಪಿಸಿಕೊಂಡೆವು.

ದುರದೃಷ್ಟವಶಾತ್ ಮಾರನೆದಿನ ಸಾಯಂಕಾಲವೇ ನನಗೆ ಯಾರೋ ಸಿಕ್ಕು "ಓ ಇಲ್ಲೆ ಇದ್ದೀರಲ್ಲ!" ಎಂದು ಆಶ್ಚರ್ಯ ಸೂಚಿಸಿ "ನೀವೆಲ್ಲಾ ಫಾರಿನ್ನಿಗೆ ಹೊರಟ್ಟಿದ್ದೀರಾ ಅಂತ ಯಾರೋ ಹೇಳಿದರು" ಎಂದರು. ನನಗೆ

This PDF was created using the Sonic PDF Creator.
To remove this watermark, please license this product at www.investintech.com

ಮೊದಲು ಅವರ ಮಾತು ಸರಿಯಾಗಿ ಅರ್ಥವಾಗಲಿಲ್ಲ. ಆದರೆ ಕೊನೆಗೆ ನಮ್ಮ ಅಂಡಮಾನ್ ಯಾತ್ರೆಯನ್ನೇ ಇವರು ಫಾರಿನ್ ಟೂರೆಂದು ಹೇಳುತ್ತಿರಬಹುದು ಎಂಬು ಊಹಿಸಿದೆ.

ಆದರೆ ಹಿಂದಿನ ದಿನ ಬೆಳಿಗ್ಗೆ ನಿರ್ಣಯಿಸಿದ ನಮ್ಮ "ಟಾಪ್ ಸೀಕ್ರೆಟ್" ಔಟಾಗಿದ್ದು ಹೇಗೆ? ಬೆರಳೆಣಿಕೆಯಷ್ಟಿದ್ದ ನಮ್ಮ ಟೀಮಿನ ಸದಸ್ಯರನ್ನು ಕೇಳಿದರೆ ಒಬ್ಬರ ಮೇಲೆ ಒಬ್ಬರು ಹೇಳಿದರು. ಕೊನೆಗೆ ನೋಡಿದರೆ ಪ್ರತಿಯೊಬ್ಬರೂ ಆದಷ್ಟು ಜನಕ್ಕೆ ಹೇಳಿದ್ದರು. ಅದಕ್ಕೆ ಕಾರಣ ನಾವು ಆದನ್ನು ಟಾಪ್ ಸೀಕ್ರೆಟ್ ಎಂದು ಪರಿಗಣಿಸಿದ್ದೇ ಇರಬಹುದು. ಇದನ್ನು ಕೇಳಿದವರೂ ಆದಷ್ಟು ಜನದ ಕಿವಿಗೆ ಉರುಟಿದ್ದರು. ಸೀಕ್ರೆಟ್ಟಿನ ಟಾಪು ಬಾಟಮ್ಮು ಎಲ್ಲಾ ಔಟಾಗಿ ಹೋಯ್ತು. ಆದರೆ ನಾವು ಊಹಿಸಿದಂತೆ ಎಲ್ಲರೂ ನಾವೂ ಬರುತ್ತೇವೆಂದು ನಮ್ಮನ್ನು ಕೇಳಲೇ ಇಲ್ಲ. ಏಕೆಂದರೆ ದಿನಾ ನಾವು ಇಂಥ ಯೋಚನೆಗಳನ್ನು ಪ್ರಕಟಿಸುತ್ತಿದ್ದುದರಿಂದ ನಮ್ಮ ಹೇಳಿಕೆಗಳನ್ನು ಯಾರೂ ಸೀರಿಯಸ್ಸಾಗಿ ತಗೊಳ್ಳಲಿಲ್ಲ.

ಎಲ್ಲಿಗಾದರೂ ಯಾರಾದರೂ ಪ್ರವಾಸ ಹೊರಡುತ್ತಾರೆಂದರೆ ಊರಲ್ಲೆ ಇರುವವರಿಗೆ ಅನೇಕ ತರದ ತುರಿಕೆಗಳು ಆರಂಭವಾಗುತ್ತವೆ. ಕೆಲವರು ನಾವು ಶಾಶ್ವತವಾಗಿ ಅಂಡಮಾನಿಗೆ ಹೋಗುತ್ತಿದ್ದೇವೆನ್ನುವಂತೆ ವ್ಯಸನ ಕಾತರಗಳಿಂದ ನಮ್ಮನ್ನು ಪ್ರಶ್ನಿಸಿದರು. ಕೆಲವರು ಅಂಡಮಾನ್ ಸಮುದ್ರದ ನಡುವಿನ ದ್ವೀಪವಾದ್ದರಿಂದ ಅಸಾಧ್ಯ ಸೆಖೆ ಇರುತ್ತದೆ ಎಂದು ಎಚ್ಚರಿಸಿದರು. ಕೆಲವರು "ನಿಮಗೇನಪ್ಪಾ ಆರಾಮವಾಗಿದ್ದೀರ, ಯಾವಾಗ ಬೇಕೆಂದರೆ ಆವಾಗ ಎಲ್ಲಿಗೆ ಬೇಕೆಂದರೆ ಅಲ್ಲಿಗೆ ಹೋಗಬಹುದು" ಎಂದು ಜಗತ್ತಿನ ಜವಾಬ್ದಾರಿಯನ್ನೆಲ್ಲಾ ತಮ್ಮೊಬ್ಬರ ತಲೆಯ ಮೇಲೆ ಇರುವಂತೆ ಉದ್ಗಾರ ತೆಗೆದರು.

ಕೆಲವರು "ಹಡಗಿನಲ್ಲಿ ಹೋಗುತ್ತಿದ್ದೀರ, ಆದರ ಕಷ್ಟ ನಿಮಗೆ ಗೊತ್ತಾಗುತ್ತೆ ಹೋಗಿ. ಹೊಟ್ಟೆ ತೊಳಸಿ ವಾಂತಿ ಮಾಡಿಕೊಂಡು ಅಂಡಮಾನಿಗೆ ಹೋಗೋದರೊಳಗೆ ಅರ್ಧಜೀವ ಆಗೋಗ್ತೀರ" ಎಂದು ಬೆದರಿಕೆ ಹಾಕಿದರು. "ಅಯ್ಯೋ ಎಲ್ಲಾ ಬಿಟ್ಟು ಅಲ್ಲಿಗ್ಯಾಕ್ರಿ ಹೋಗ್ತೀರ? ಆ ಮುರ್ಕ್ಾಳ ಮುಂಡೇ ಗಂಡ್ರು ರಿಸರ್ಚ್‌ನೋರ ಮಾತುಕೇಳಿ ನಿಮಗೆ ತಲೆಕೆಟ್ಟಿದೆ, ಅವರೇನೋ ಹುಳಪಳ ಹಿಡಿಯೋದಕ್ಕೆ ಅಲ್ಲಿಗೆ ಹೋಗ್ತಾರೆ ಅಂದರೆ ನಿಮಗೇನಾಗಿದೆ ಹೇಳಿ" ಎಂದು ಕೆಲವರು ನನ್ನ ಮನಃಸ್ವಾಸ್ಥ್ಯವನ್ನು ಶಂಕಿಸಿದರು. ನಾವು ಯಾರ ಮಾತು

This PDF was created using the Sonic PDF Creator.
To remove this watermark, please license this product at www.investintech.com

ಗಳನ್ನೂ ಕಿವಿಗೆ ಹಾಕಿಕೊಳ್ಳಲಿಲ್ಲ. ಏಕೆಂದರೆ ಪ್ರತಿ ವಿಷಯಕ್ಕೂ ಉಚಿತ ಸಲಹೆ ವಿಮರ್ಶೆಗಳನ್ನು ದಯಪಾಲಿಸುವ ಧಾರಾಳಿಗಳು ನಮ್ಮೂರಲ್ಲಿ ಬೇಕಾದಷ್ಟು ಜನ

ನಾವು ಅಂಡಮಾನಿಗೆ ಹೋಗಲಿ ಬಿಡಲಿ, ಅಲ್ಲಿಗೆ ಹೋಗಬೇಕೆಂದಿರುವ ಟಾಪ್ ಸೀಕ್ರೆಟ್ಟಿಗೆ ಸಾಕಷ್ಟು ಪಬ್ಲಿಸಿಟಿ ಸಿಗುತ್ತಿರುವುದರಿಂದ ಸಮಾಧಾನವೇ ಆಯ್ತು. ನನಗಂತೂ ಅಲ್ಲಿಗೆ ಹೋಗಿಬಂದಂತೆಯೇ ಎನ್ನಿಸಿ ಆ ವಿಷಯವನ್ನೇ ಮರೆತುಬಿಟ್ಟೆ.

ಪ್ರಶಾಂತರಿಂದ ಬಂದ ಮತ್ತೊಂದು ಪತ್ರ ನಮ್ಮ ಅಂಡಮಾನ್ ಯಾನಕ್ಕೆ ಸಾಕಷ್ಟು ಘನತೆ ಗೌರವವನ್ನು ತಂದುಕೊಟ್ಟಿತು. ಅಂಡಮಾನಿಗೆ ಹೋಗುವುದು ಯಾವುದೇ ಭಾರತದ ಭಾಗಕ್ಕೆ ಹೋಗುವಷ್ಟು ಸಲೀಸಲ್ಲವೆಂದು ಈ ಪತ್ರದಿಂದ ಸ್ಪಷ್ಟವಾಯ್ತು.

ಅಂಡಮಾನಿನ ಅಧಿಕಾರಿಗಳಿಗೆ ಮೊದಲು ಪತ್ರಬರೆದು, ನಮ್ಮ ಫೋಟೋ, ಬಯೋಡೇಟಾ ಇತ್ಯಾದಿ ಜಾತಕ ಕಳಿಸಿ ನಮ್ಮ ಪ್ರವಾಸದ ಉದ್ದೇಶಗಳನ್ನೆಲ್ಲ ವಿವರಿಸಿ ಅಲ್ಲಿಂದ ವೀಸಾ ಮಾದರಿಯ ಪರವಾನಗಿ ಪಡೆಯಬೇಕಿತ್ತು. ಅಲ್ಲಿಂದ ಒಪ್ಪಿಗೆ ಬಂದನಂತರವೇ ಅವರು ತಿಳಿಸಿದ ಹಡಗಿನಲ್ಲಿ ನಮಗೆ ಟಿಕೆಟ್ ದೊರೆಯುತ್ತಿತ್ತು. ನಮ್ಮದೇ ದೇಶದ ಒಂದು ಭಾಗವಾದ ಅಂಡಮಾನಿಗೆ ಹೋಗಲು ಇದೇಕೆ ಇಷ್ಟೊಂದು ನಿಯಮಗಳನ್ನು ವಿಧಿಸಿದ್ದಾರೋ ನನಗೆ ಗೊತ್ತಾಗಲಿಲ್ಲ. ಅಂತೂ ಅಂಡಮಾನಿಗೆ ಹೋಗಲು ಇಷ್ಟೆಲ್ಲಾ ವಿಧಿ ವಿಧಾನಗಳಿರುವುದನ್ನು ನೋಡಿ ನಮಗೆ ಇದು ಸ್ವಲ್ಪ ಫಾರಿನ್ನಿಗೆ ಹೋಗುವ ಹಾಗೇ ಎಂದೆನ್ನಿಸಿ ಸಮಾಧಾನವಾಗಿದ್ದಂತೂ ನಿಜ.

ಕೆಲದಿನಗಳ ಅನಂತರ ಮಲ್ಲಿಕ್ ನಾವು ಅಲ್ಲಿಗೆ ಹೋಗಲು ಹಾಕಿಕೊಳ್ಳಬೇಕಾದ ಅರ್ಜಿಗಳನ್ನು ತಂದೊದಗಿಸಿದರು. ಜೊತೆಗೆ ನಾವೆಲ್ಲಾ ಸ್ಟುಡಿಯೋಗಳಿಗೆ ಹೋಗಿ ಎರಡು ಕಿವಿಗಳೂ ಕಾಣುವಂತೆ ಕ್ಯಾಮರಾದೆದುರು ನಿಂತ ಪಾಸ್‌ಪೋರ್ಟ್ ಫೋಟೋಗಳನ್ನು ತೆಗೆಸಿಕೊಳ್ಳಬೇಕಾಯ್ತು. ನಮ್ಮ ಫೋಟೋಗಳನ್ನು ನೋಡಿದವರೊಬ್ಬರು “ಏನ್ರೀ ಎಲ್ಲಾ ಢಕಾಯಿತರ ತರ ಕಾಣ್ತಿದ್ದೀರಲ್ರೀ, ನಿಮಗೆ ವೀಸಾ ಸಿಕ್ಕೋದು ಅನುಮಾನ ಕಣ್ರೀ'' ಎಂದು ಗಾಬರಿ ಮಾಡಿದರು. ನಮಗೂ ಸಹ ನಮ್ಮ ಫೋಟೋಗಳು ನಮ್ಮ ಸೌಂದರ್ಯವನ್ನು ಸೆರೆಹಿಡಿಯುವಲ್ಲಿ ವಿಫಲವಾಗಿದೆ ಎನ್ನುವ ಅಸಂತೃಪ್ತಿ ಇತ್ತು ಎನ್ನಿ! ಸ್ಟುಡಿಯೋದವನಿಗೆ

This PDF was created using the Sonic PDF Creator.
To remove this watermark, please license this product at www.investintech.com

ಕಲಾತ್ಮಕವಾಗಿ ಫೋಟೋ ತೆಗೆಯುವುದು ಗೊತ್ತಿಲ್ಲವೆಂದು ಅವನನ್ನು ದೂಷಿಸಿದೆವು.

ನಮ್ಮ ಕಲ್ಪನೆಯ ನಮಗೂ ನಿಜವಾದ ನಮಗೂ ಬಹಳ ವ್ಯತ್ಯಾಸವಿರುವುದರಿಂದಲೇ ನಮ್ಮ ಫೋಟೋಗಳು ನಮ್ಮ ಸರಿಯಾದ ಪ್ರತಿಬಿಂಬಿತವಾಗಿಲ್ಲವೆಂದು ಅದನ್ನು ದೂಷಿಸುತ್ತೇವೆ. ಇದನ್ನೆಲ್ಲ ತಿಳಿದೇ ಸ್ಟುಡಿಯೋದವರು ನೆಗೆಟಿವ್‌ಗಳನ್ನು ಟಚ್‌ಅಪ್ ಮಾಡಿ ಕೆನ್ನೆಯ ಮೇಲಿನ ಗುಳಿಗಳನ್ನೆಲ್ಲ ಒರೆಸಿ ಹಸುಗೂಸಿನ ಗಲ್ಲದಂತೆ ಮಾಡಿ ಬೈತಲೆ ತಿದ್ದಿ, ಮೆಳ್ಳೆಗಣ್ಣನ್ನು ನೆಟ್ಟಗೆ ಮಾಡಿ, ಉಬ್ಬಿದ ಹಲ್ಲನ್ನು ಮತ್ತೆ ತುಟಿಯೊಳಗೆ ಸೇರಿಸಿ ನಮ್ಮ ಮುಸುಡಿಯನ್ನು ಕೊಂಚವಾದರೂ ಪ್ರದರ್ಶನ ಯೋಗ್ಯವನ್ನಾಗಿ ಮಾಡಲು ಯತ್ನಿಸುತ್ತಾರೆ. ಇಷ್ಟಾದರೂ ಅವರ ವಿರುದ್ಧ ದುಡ್ಡು ಕೊಡುವಾಗ ಪ್ರತಿಯೊಬ್ಬರೂ ಅಸಮಧಾನದಿಂದ ಗೊಣಗುತ್ತಾರೆ.

ದೂರದ ಊರುಗಳಿಂದ ನಮ್ಮೊಡನೆ ಬರಲಿದ್ದ ಶಾಂತ, ಬಸವರಾಜು, ನಿರ್ಮಲಾ, ರಾಮದಾಸ್ ಇವರೆಲ್ಲಾ ತಮ್ಮ ಫೋಟೋಗಳನ್ನು ಕಳಿಸುತ್ತಾ ದಯವಿಟ್ಟು ಹೊರಡುವ ದಿನವನ್ನು ಮೊದಲೇ ತಿಳಿಸಿ ಎಂದು ಕೇಳಿಕೊಂಡಿದ್ದರು. ನಮ್ಮ ಯರ್‍ರಾಬಿರ್‍ರಿ ವ್ಯವಹಾರಗಳ ಪರಿಚಯ ಇದ್ದುದರಿಂದ ನಮ್ಮ ಹಠಾತ್ ಪ್ರೋಗ್ರಾಮುಗಳಿಗೆ ಅನೇಕಸಾರಿ ಅವರಿಗೆ ಬರಲಾಗಿರಲಿಲ್ಲ. ಆದ್ದರಿಂದ "ಟೂರಿಗೆ ಹಣ ಹೊಂದಿಸುವುದು, ರಜೆ ಪಡೆಯುವುದು, ಕೆಲಸಗಳನ್ನು ಮುಗಿಸುವುದು, ಇವೆಲ್ಲ ಇರುತ್ತದೆ. ಆದ್ದರಿಂದ ಕೊಂಚ ಮೊದಲೇ ತಿಳಿಸಿರಿ" ಎಂದು ಆಗ್ರಹ. ನಾವೆಲ್ಲಾ ಕುಳಿತುಕೊಂಡು ಬಹಳ ಜವಾಬ್ದಾರಿಯಿಂದ ಲೆಕ್ಕಾಚಾರ ಹಾಕಿ ಫೆಬ್ರವರಿ ತಿಂಗಳ ಮೊದಲ ವಾರದಲ್ಲಿ ಎಂದು ನಿರ್ಧರಿಸಿ ಅವರಿಗೆ ತಿಳಿಸಿದೆವು. ಆದರೆ ನಾವು ತಿಳಿದಂತೆ ನಮ್ಮ ಪ್ರೋಗ್ರಾಮುಗಳು ಯಾವುವೂ ಲೆಕ್ಕಾಚಾರದ ಪ್ರಕಾರ ನಡೆಯದೇ ತಲೆಕೆಳಗಾಗುತ್ತಿದ್ದವು.

ಈ ನಡುವೆ ಯಾರೋ ನಮಗೆ ಹೇಳಿದರು, "ಅಂಡಮಾನಿಗೆ ರಾಜೀವ್ ಗಾಂಧಿ ಹೋಗ್ತಿರೋದ್ರಿಂದ ಯಾರಿಗೂ ವೀಸ ಕೊಡುತ್ತಿಲ್ಲವಂತೆ! ಅಲ್ಲಿಗೆ ಹೋದ ಒಬ್ಬೊಬ್ಬನ ಹಿಂದೆಯೂ ಇಬ್ಬಿಬ್ಬರು ಸಿಐಡಿಗಳು ಇರುತ್ತಾರಂತೆ! ದೇಶದ ಎಲ್ಲಾ ಕಡೆ ಉಗ್ರಗಾಮಿಗಳು ಚದುರಿರೋದರಿಂದ ಈ ಕ್ರಮ" ಎಂದು. ಇದನ್ನು ಕೇಳಿ ನಮಗೆ ಕೊಂಚ ನಿರುತ್ಸಾಹವಾಯ್ತು. ನನಗಂತೂ ಆಗಲೇ ಸಿಐಡಿಗಳು ಬೆನ್ನುಬಿದ್ದ ಅನುಭವ ಆಗತೊಡಗಿತು. ಅಂಡಮಾನಿಗೆ ಅಪ್ಲಿಕೇಶನ್ ಕಳಿಸಿ,

This PDF was created using the Sonic PDF Creator.
To remove this watermark, please license this product at www.investintech.com

ಸೆಂಟ್ರಲ್ ಸಿಐಡಿಗಳಿಗೆ ನಮ್ಮ ಫೋಟೋ ವಿಳಾಸ ಕೊಟ್ಟಂತಾಯ್ತು ಎಂದು ಗೊಣಗಿದೆ.

"ನಿಮಗೆ ಹಡಗಿನ ಟಿಕೇಟ್ ಸಿಕ್ಕಿದರೂ ನೀವು ಅಂಡಮಾನಿಗೆ ಹೋಗ್ತೀರೆಂದು ತಿಳಿಯಬೇಡಿ. ಬಂಗಾಳಕೊಲ್ಲಿಯಲ್ಲಿ ಚಂಡಮಾರುತಗಳು ಪದೇ ಪದೇ ಏಳುವುದರಿಂದ ಹವಾಮಾನ ಇಲಾಖೆ ಆ ವರ್ತಮಾನವನ್ನೇನಾದರೂ ಕೊಟ್ಟರೆ ಹಡಗು ಹೊರಡೋದೆ ರದ್ದಾಗುತ್ತೆ" ಎಂದು ಮತ್ತೊಬ್ಬರು ಜಾಪಾಳ ಮಾತ್ರೆ ಕೊಟ್ಟರು.

ಫೆಬ್ರವರಿ ಬಂತು. ದೂರದ ಊರಿನ ಗೆಳೆಯರಿಗೆಲ್ಲ ಕೊಂಚ ಮೊದಲೇ ತಿಳಿಸೋಣೆಂದರೆ ಆವರೆಗೂ ಕಾಲಕ್ಕೆ ಸರಿಯಾಗಿ ಉತ್ತರಿಸುತ್ತಿದ್ದ ಪ್ರಶಾಂತ್‌ರಿಂದ ಕಾಗದವೇ ಇಲ್ಲ. ನಾವು ಹೊರಡಬಹುದೆಂದು ಊಹಿಸಿದ ದಿನವೂ ಬಂತು. ಆದರೂ ಕಾಗದವಿಲ್ಲ. ಅಷ್ಟರಲ್ಲಿ ಭಾರತ ಪಾಕಿಸ್ತಾನ ಯುದ್ಧ ಸಂಭವವಿದೆ ಎಂದು ವರ್ತಮಾನ ಹರಡಿತು. ಪಾಕಿಸ್ತಾನದ ಗಡಿಗಳ ಬಳಿ ಸೇನಾ ಜಮಾವಣೆ ಯಾಗುತ್ತಿದೆಯೆಂದೂ ಈ ಸೇನಾ ಸ್ಥಳಾಂತರಕ್ಕಾಗಿ ಅನೇಕ ರೈಲು ಸಂಚಾರವನ್ನು ರದ್ದು ಮಾಡಲಾಗಿದೆಯೆಂದು ಸುದ್ದಿ ತಿಳಿಯಿತು. ಸರಿ ಅಂಡಮಾನಿನ ಹಡಗುಗಳ ಯಾನವೂ ರದ್ದಾಗಬಹುದೆಂದುಕೊಂಡೆವು. ಆದರೆ ಕೆಲವು ದಿನಗಳಲ್ಲೇ ಉಭಯ ಪಕ್ಷಗಳ ಮಾತುಕತೆಯಿಂದ ಯುದ್ಧ ಅಸಂಭವವೆಂದು ದೃಢಪಟ್ಟಿತು.

ಇಷ್ಟೆಲ್ಲ ಆದರೂ ಪ್ರಶಾಂತರ ಕಾಗದವಾಗಲೀ, ಅಂಡಮಾನ್ ಅಧಿಕಾರಿಗಳ ಅನುಮತಿಯಾಗಲೀ ಬರಲೇ ಇಲ್ಲ. ದೂರದ ಊರಿನ ಗೆಳೆಯರೆಲ್ಲ ನಮ್ಮ ಅನೇಕ ಉಡಾಫೆ ಬೊಗಳೆಗಳಂತೆ ಇದೂ ಒಂದು ಎಂದು ತಿಳಿದು ಮತ್ತೆ ಕಾಗದ ಬರೆದು ಯಾವಾಗ ಹೊರಡುವುದು ಎಂದು ಕೇಳಲೂ ಇಲ್ಲ. ಎಲ್ಲ ಅಂಡಮಾನಿಗೆ ನೋಡಬೇಟಿ ಕೊಟ್ಟು ಬೇರೆ ಬೇರೆ ಯೋಜನೆಗಳನ್ನು ಹಾಕ ತೊಡಗಿದೆವು.

This PDF was created using the Sonic PDF Creator.
To remove this watermark, please license this product at www.investintech.com



# 3. ಮೂಡಿಗೆರೆಯಿಂದ ಮದ್ರಾಸಿಗೆ

ಒಂದು ದಿನ ಸಂಜೆ, ಲೈಟು ಬೆಳಕಿನಲ್ಲಿ ಗೆಳೆಯರ ಗುಂಪು ಬ್ಯಾಡ್ಮಿಂಟನ್ ಆಟದಲ್ಲಿ ಮುಳುಗಿತ್ತು. ಯಾರೋ ಓಡಿಬಂದು ಮನೆಯೊಳಗೆ ಫೋನ್ ರಿಂಗ್ ಆಗ್ತಾ ಇದೆ ಎಂದರು. ಓಡಿ ಹೋಗಿ ಫೋನ್ ಎತ್ತಿದೆ.

"ಹಲೋ"

"ಹಲೋ ಯಾರು? ಮೂಡಿಗೆರೆ 153 ನಾ?"

"ಹೌದು"

"ನಾನು ಮಲ್ಲಿಕ್ ತಮ್ಮ, ಬೆಂಗಳೂರಿಂದ ಮಾತಾಡ್ತಿದ್ದೀನಿ"

"ಏನು ಸಮಾಚಾರ?"

"ಅಂಡಮಾನಿನಿಂದ ಟೆಲಿಗ್ರಾಂ ಬಂದಿದೆ. .....ನೇ ತಾರೀಖು ಹಡಗು ಹೊರಡುತ್ತಂತೆ. ಮಲ್ಲಿಕ್ ಇವತ್ತೇ ಬೆಂಗಳೂರಿಗೆ ಬಂದು ನಾಳೆ ಮದ್ರಾಸಿಗೆ ಹೋಗಿ ಟಿಕೆಟ್ ತಗೋಬೇಕು."

This PDF was created using the Sonic PDF Creator.
To remove this watermark, please license this product at www.investintech.com

ಫೋನ್ ಕಿರಿಕಿರಿಯಲ್ಲಿ ಅವರು ಹೇಳಿದ ತಾರೀಖು ಗೊತ್ತಾಗಲಿಲ್ಲ.

"ಹಡಗು ಹೊರಡೋದು ಯಾವತ್ತು?"

".......ನೇ ತಾರೀಖು."

"ಯಾವ ತಾರೀಖು?"

"........ನೇ ತಾರೀಖು?"

ಪ್ರತಿಸಾರಿಯೂ ಫೋನು ತಾರೀಖು ಹೇಳುವಾಗ ಗಲಾಟೆ ಮಾಡುತ್ತಿತ್ತು. ಮತ್ತೆ ಕೇಳೋಣವೆನ್ನುವುದರ ಒಳಗೆ ಲೈನ್ ಔಟ್! ಮಲ್ಲಿಕ್‌ರ ಬೆಂಗಳೂರು ಮನೆಗೆ ಫೋನ್ ಇರಲಿಲ್ಲ. ಅವರು ಯಾವ ನಂಬರಿನಿಂದ ಮಾತಾಡಿದರೆಂದು ಗೊತ್ತಿಲ್ಲ! ಅವರು ಇವತ್ತೇ ಮಲ್ಲಿಕ್ ಬರಲೆಂದು ಹೇಳಿದ್ದರಿಂದ ನಾಳಿದ್ದು ಎಂದರೆ 5ನೇ ತಾರೀಖು ಹಡಗು ಹೋಗುತ್ತದೆ! ಎಂದರೆ ಒಂದೇ ಒಂದು ದಿನ ನಮಗೆ ಸಮಯ. ದುಡ್ಡು ಎಲ್ಲಿ ಕೂಡಿಸಿಕೊಳ್ಳೋಣ! ಅರೆಬರೆ ಮಾಡಿರುವ ಕೆಲಸಗಳನ್ನೆಲ್ಲಾ ಯಾರಿಗೆ ವಹಿಸೋಣ? ರಜೆ ಹಾಕಲು ಏರ್ಪಾಡು ಮಾಡಬೇಕು! ಮದ್ರಾಸಿಗೆ ಹೋಗುವಷ್ಟಾದರೂ ಸಮಯವಿದೆಯೇ? ಮೈಸೂರು ಮಂಗಳೂರಿನ ಮಿತ್ರರಿಗೆ ಇಷ್ಟು ಕಡಿಮೆ ಕಾಲಾವಕಾಶದಲ್ಲಿ ಬರಲಾಗುತ್ತದೆಯೇ? ತಲೆಯ ಮೇಲೆ ಆಕಾಶ ಬಿದ್ದಂತಾಯಿತು.

ಹೊರಗಿನ್ನೂ ಆಟ ಭರದಿಂದ ಸಾಗಿತ್ತು. ನಾನು ಹೊರಬಂದು ಫೋನಿನ ಸಮಾಚಾರ ತಿಳಿಸಿದೆ. ಮೊದಲು ಜೋಕ್ ಮಾಡುತ್ತಿದ್ದೇನೆಂದು ಅವರಾರೂ ನಂಬಲಿಲ್ಲ. ಅನಂತರ ನಿಜವೆಂದು ತಿಳಿದ ಮೇಲೆ ತಲೆ ಮೇಲೆ ಕೈಹೊತ್ತು ಕುಳಿತರು. ಕಿಂಕರ್ತವ್ಯಮೂಢರಾಗಿ ಯೋಚಿಸುತ್ತಾ ಕುಳಿತ ನಮಗೆ ಆಗಲೇ ಒಂಭತ್ತು ಗಂಟೆ ಯಾದುದು ಗೊತ್ತಾಗಲಿಲ್ಲ ಇನ್ನು ಎರಡು ಗಂಟೆಗಳಲ್ಲಿ ಮಲ್ಲಿಕ್ ಬಸ್ಸು ಹತ್ತಬೇಕಿತ್ತು. ಎಲ್ಲರ ಟಿಕೇಟ್ ಹಣ ಐದುಸಾವಿರ ರೂಪಾಯಿಯನ್ನು ಕೂಡಲೇ ನಾವು ಅವರಿಗೆ ಒದಗಿಸಬೇಕಿತ್ತು. ಇದರೊಡನೆ ನಾವು ಹೊರಡುವುದಿದ್ದರೆ ಕೂಡಲೇ ರಾಮದಾಸ್‌ಗೂ, ಬಸವರಾಜ್‌ಗೂ ಫೋನಿನಲ್ಲಿ ತಿಳಿಸಬೇಕಿತ್ತು. ಇಬ್ಬರಿಗೂ ಟ್ರಂಕಾಲ್ ಬುಕ್ ಮಾಡಿದೆ.

ಇನ್ನೂ ನಾವು ಹೊರಡಬೇಕೋ ಬೇಡವೋ ಎಂಬ ಯೋಚನೆಯಲ್ಲಿ ಮುಳುಗಿದ್ದೆವು. ಅಷ್ಟರಲ್ಲಿ ಮತ್ತೆ ಫೋನ್ ರಿಂಗಾಯಿತು. ಹಲೋ ಎಂದೆ. ಆಚೆ

This PDF was created using the Sonic PDF Creator.
To remove this watermark, please license this product at www.investintech.com

ತುದಿಯಲ್ಲಿ ಬಸವರಾಜ್ ಹಲೋ ಎನ್ನುತ್ತಿದ್ದರು! ಅಂತಿಮ ತೀರ್ಮಾನದ ಗಳಿಗೆ ಇದ್ದಕ್ಕಿದ್ದಂತೆ ನನ್ನ ತಲೆಯ ಮೇಲೆ ಬಿದ್ದಿತ್ತು!

ಒಂದು ಸೆಕೆಂಡಿನಲ್ಲಿ ಯೋಚಿಸಿದೆ. ಅಂಡಮಾನಿಗೆ ಹೊರಟಾಗಿದೆ! ಮದ್ರಾಸಿನಲ್ಲಿ ಹಡಗು ಸಿಕ್ಕದಿದ್ದರೆ ಕೂಡ ಪರ್ವಾಗಿಲ್ಲ. ಇನ್ನೆತ್ತಲಾದರೂ ಹೋಗಿ ಅಲೆದಾಡಿಕೊಂಡು ಬರುವುದು. ಈಗ ಹಿಂಜರಿಯುವುದು ಬೇಡ ಎಂದು.

"ಇವತ್ತು ರಾತ್ರಿ ಬೆಂಗಳೂರಿನ ಬಸ್‌ಹತ್ತಿ ಹೊರಟು ನಾಳೆ ಹನ್ನೆರಡು ಗಂಟೆಗೆ ಬೆಂಗಳೂರು ರೈಲುನಿಲ್ದಾಣದಲ್ಲಿ ನೀವು ನಮ್ಮನ್ನು ಕೂಡಿಕೊಳ್ಳಬೇಕು. ನಾಳಿದ್ದು ಅಂಡಮಾನಿನ ಹಡಗು ಹೊರಡುತ್ತದೆ." ಇದನ್ನು ಆಚೆ ತುದಿಯಲ್ಲಿ ಆಲಿಸಿದ ಬಸವರಾಜ್‌ರ ದಿಗ್ಭ್ರಾಂತಿಯನ್ನು ಊಹೆಗೆ ಬಿಟ್ಟಿದ್ದು. "ನಮಗೆ ತುಂಬಾ ತೊಂದರೆಯಾಗುತ್ತದಲ್ಲಾ! ಈ ರಾತ್ರಿಯಲ್ಲಿ ಹಣ ಹೊಂದಿಸುವುದೆಲ್ಲಿಂದ. ಹೋಗಲಿ ಬಿಡಿ, ಇದೊಂದು ಸಾರಿ ನಮ್ಮನ್ನು ಬಿಟ್ಟೇ ಹೋಗಿಬನ್ನಿ" ಎಂದು ತೊದಲುತ್ತಾ ಹೇಳಿದರು. ನಾನು ನಿರ್ಧರಿಸಿದ್ದೆ, ಹೋದರೆ ನಾವೆಲ್ಲಾ ಹೋಗ ಬೇಕೆಂದು. ಆದಕ್ಕೇ ಹೇಳಿದೆ "ನಿಮ್ಮ ಟಿಕೇಟ್ ಹಣ ಒಂದು ಸಾವಿರ ರೂಪಾಯಿ ಕೊಟ್ಟಾಗಿದೆ. ನೀವು ಬರದಿದ್ದರೆ ನೀವು ಅದನ್ನು ಕೊಡಬೇಕಾಗುತ್ತೆ" ಬಸವ ರಾಜು ಮಾತು ಇನ್ನಷ್ಟು ತೊದಲಿತು. "ಒಳ್ಳೇ ಗೋಳಾಯ್ತಲ್ಲ! ಇರ್ಲಿಬಿಡಿ. ಪ್ರಯತ್ನ ಮಾಡ್ತೀವಿ. ಹಾಗೂ ಆಗದಿದ್ದರೆ ಏನು ಮಾಡೋದು" ಎಂದರು.

* * *

ಮಾರನೆಯ ದಿನ ಈ ಗೆಳೆಯರನ್ನೆಲ್ಲಾ ಇದಿರುಗೊಂಡಾಗ ಅವರ ಮುಖದಲ್ಲಿನ ಕೋಪಾಭಿವ್ಯಕ್ತಿ ಅವರಿಗೆ ನಾವು ಕೊಟ್ಟ ತೊಂದರೆಯನ್ನು ವಿವರಿಸುತ್ತಿತ್ತು.

"ನಿಮ್ಮ ಮೂಡಿಗೆರೆಯವರಂಥ ಬೇಜವಾಬ್ದಾರಿ ಜನರನ್ನು ನಾನು ಕಂಡೇ ಇಲ್ಲ! ನಿಮಗೇನಾದರೂ ಬುದ್ಧಿಗಿದ್ದಿ ಇದೆಯೇನ್ರಿ. ರಾತ್ರೋರಾತ್ರಿ ನಾವು ಹಣ ಹೊಂದಿಸಿಕೊಂಡು ರಜ ಹಾಕಿ ಬರಬೇಕೆಂದು ಹೇಳಿದ್ದೀರಲ್ಲ, ನಾವೂ ನಿಮ್ಮಂತೆ ಅನ್ನಾ ತಿನ್ನೋ ಮನುಷ್ಯರಲ್ಲವ? ರಾತ್ರಿ ಕಂಡಕಂಡೋರ ಮನೆ ಬಾಗಿಲು ಬಡಿದು, ಎಷ್ಟಿದೆಯೋ ಅಷ್ಟು ಕೊಡಿ ಅಂತ ಭಿಕ್ಷಾ ಬೇಡಿ ನಿಮ್ಮ ಜೊತೆ ಯಾತ್ರೆ ಬರ ಬೇಕಾಯ್ತು. ಧುತ್‌ತ್ತೇರಿ! ನಮ್ಮ ವೈರೀಗೂ ಬ್ಯಾಡ ನಿಮ್ಮ ಸಾವಾಸ" ಎಂದು ರಾಮದಾಸ್ ಕೂಗಿದರು.

This PDF was created using the Sonic PDF Creator.
To remove this watermark, please license this product at www.investintech.com

ಆದರೆ ಅವರಿಗೆ ನಮ್ಮ ಕಷ್ಟ, ಗಡಿಬಿಡಿ, ನಾವು ರಾತ್ರೋರಾತ್ರಿ ದುಡ್ಡು ಹೊಂಚಲು ಪಟ್ಟಪಾಡು ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದ ಮೇಲೆ ಕೊಂಚ ಸಮಾಧಾನವಾಯ್ತು. ಶಾಂತ ಮತ್ತು ಬಸವರಾಜುರವರನ್ನು ಮಲ್ಲಿಕ್ ನೋಡೇ ಇರಲಿಲ್ಲ. ಮೊದಲು ಬೆಂಗಳೂರಿಗೆ ಹೋದ ಮಲ್ಲಿಕ್‌ರಿಗೆ ಅವರನ್ನು ಸಂಧಿಸಿ ನಮ್ಮ ಮುಂದಿನ ಕಾರ್ಯಕ್ರಮಗಳನ್ನು ತಿಳಿಸಬೇಕಾದ ಜವಾಬ್ದಾರಿ ಬಿದ್ದಿತ್ತು. ಪಾಸ್‌ಪೋರ್ಟಿಗೆಂದು ಕಳಿಸಿದ್ದ ಅವರ ಫೋಟೋಗಳ ಕಾಪಿ ಹಿಡಿದುಕೊಂಡು ಮಲ್ಲಿಕ್ ರೈಲ್ವೇ ಸ್ಟೇಷನ್ನಿನಲ್ಲಿ ಹೋಗಿಬರುವವರ ಮುಖಗಳನ್ನೆಲ್ಲಾ ಪೋಲೀಸರ ತರ ತಾಳೆ ನೋಡುತ್ತಾ ಪತ್ತೆ ಮಾಡಿದ್ದನ್ನು ವಿವರಿಸಿದರು. ಅಂತೂ ಗೊಂದಲ ಗಡಿಬಿಡಿ ರೇಗಾಟಗಳ ನಡುವೆಯೇ ನಮ್ಮ ಅಂಡಮಾನ್ ಸಿನೆಮಾ ವಿನೋದಪೂರ್ಣವಾಗಿ ಆರಂಭವಾಗಿತ್ತು.

* * *

ಮಲ್ಲಿಕ್‌ರವರು ಮದ್ರಾಸಿನ ಬಂದರಿನಲ್ಲಿ ಹೋಗಿ ಟಿಕೆಟ್‌ಗಾಗಿ ವಿಚಾರಿಸಿದಾಗ ನಮಗೆ ಟಿಕೆಟ್ಟಿಗೆ ಪರವಾನಗಿ ಕೊಟ್ಟಿದ್ದ "ಹರ್ಷವರ್ಧನ" ಹಡಗು ಹಿಂದಿನ ದಿನವೇ ಬಂದರು ಬಿಟ್ಟು, ಅಂಡಮಾನಿಗೆ ಪ್ರಯಾಣ ಬೆಳೆಸಿತ್ತು!

ಅವರು ಕಂಗಾಲಾಗಿ ಕುಳಿತಿರಬೇಕಾದರೆ "ನಾನ್‌ಕೌರಿ" ಎನ್ನುವ ಇನ್ನೊಂದು ಹಡಗು ಆ ದಿನವೇ ಅಂಡಮಾನಿಗೆ ಮದ್ರಾಸು ಬಿಡುವುದರಲ್ಲಿದೆ ಎಂದು ತಿಳಿದುಬಂತು. ನಾವು ಅಂಡಮಾನಿಗೆ ಹೋಗಲು ಪರವಾನಗಿ ಸಿಕ್ಕವರೆಂದು ಬಂದರಿನ ಅಧಿಕಾರಿಗಳಿಗೆ ತಿಳಿಸಿ ಹರ್ಷವರ್ಧನ ಹಡಗಿನ ಪ್ರಯಾಣಿಕರ ಪಟ್ಟಿಯಲ್ಲಿ ನಮ್ಮ ಹೆಸರುಗಳನ್ನು ತೋರಿಸಿಯಾದ ಮೇಲೆ ನಾನ್‌ಕೌರಿ ಹಡಗಿನಲ್ಲಿ ಅಂಡಮಾನಿಗೆ ಹೋಗಲು ಟಿಕೆಟ್ ಸಿಕ್ಕಿತು. ಅಲ್ಲಿಗೆ ಅಂಡಮಾನಿಗೆ ನಾವು ನಿಜವಾಗಿಯೂ ಹೋಗುತ್ತೇವೆಂದು ಎಲ್ಲರಿಗೂ ನಂಬಿಕೆ ಬರತೊಡಗಿತು.

ನಾವೆಲ್ಲಾ ನಮ್ಮ ಸೂಟ್‌ಕೇಸ್‌ಗಳನ್ನು ಹೊತ್ತುಕೊಂಡು ಬಂದರು ಕಟ್ಟೆಯಲ್ಲಿ ನಮ್ಮ ಹಡಗು ಯಾವುದೆಂದು ಹುಡುಕುತ್ತಾ ಹೊರಟೆವು. ದೂರದಲ್ಲಿ ಒಂದು ಹಡಗಿನ ಮೇಲೆ ನಾನ್‌ಕೌರಿ ಎಂದು ಬರೆದುದು ಕಾಣಿಸಿತು. ಅದರ ಪಕ್ಕ ತುಂಬ ಜನ ಸಾಮಾನು ಸರಂಜಾಮುಗಳೊಂದಿಗೆ ಕಾಯುತ್ತ ಕುಳಿತಿದ್ದುದು ಕಾಣಿಸಿತು.

ಆ ಹಡಗನ್ನು ನೋಡಿ ನಮಗೆ ಕೊಂಚ ಆಶಾಭಂಗವಾಯ್ತು. ಬಣ್ಣ ಬಣ್ಣಗಳಲ್ಲಿ ಮಿರುಗುವ ಪುಟ್ಟ ಪಟ್ಟಣಗಳಂತೆ ಕಾಣುವ ಹಡಗುಗಳನ್ನು ನಾವು

This PDF was created using the Sonic PDF Creator.
To remove this watermark, please license this product at www.investintech.com

ಚಿತ್ರಗಳಲ್ಲಿ ನೋಡಿದ್ದೆವು. ತುಕ್ಕು ಹಿಡಿದು ಗಲೀಜಾಗಿ ಕಾಣುತ್ತಿದ್ದ ಈ ಮುದಿ ಹಡಗನ್ನು ನೋಡಿ ನಾವು ಗಾಬರಿಯಾದೆವು.

"ರೀ! ಜಂಕಾಗಿ ಹೋಗಿದೆಯಲ್ರೀ ಈ ಹಡಗು? ಇದಕ್ಕೆ ಧೈರ್ಯವಾಗಿ ಹತ್ತಬಹುದೇನಪ್ಪಾ" ಎಂದರು ರಾಮದಾಸ್.

ನಾನಂತೂ "ಇದು ಸಪ್ತಸಾಗರಗಳ ನಡುವೆ ಕಳಚಿಕೊಂಡು ಒಂದು ದಿನ ಮುಳುಗೇ ಹೋಗುತ್ತದೆ" ಎಂದು ತೀರ್ಮಾನ ಘೋಷಿಸಿದೆ. ಒಟ್ಟಿನಲ್ಲಿ ಇದು ನಮಗೆ ಬಹಳ ಅಪಾಯಕಾರಿ ಹಡಗಿನಂತೆ ಕಂಡಿತು. ಏನು ಮಾಡುವುದು? ಐದು ಸಾವಿರ ರೂಪಾಯಿ ಕೊಟ್ಟು ಟಿಕೆಟ್ ತಗೊಂಡು ಆಗಿದ. ಅದೂ ಅಲ್ಲದೆ ರಾಜೇಶ್ವರಿ ಮುಂತಾದ ಮಹಿಳಾ ಸದಸ್ಯರಂತೂ ಬೇಕಾದ್ದಾಗಲಿ ನಮ್ಮ ಜೀವಮಾನದಲ್ಲಿ ಒಮ್ಮೆ ಹಡಗಿನ ಪ್ರಯಾಣ ಮಾಡಲೇಬೇಕೆಂದು ನಿರ್ಧರಿಸಿದ್ದರು.

ನಾನು ಅಲ್ಲಿಯೇ ಹಡಗು ಹತ್ತಲು ನಿಂತಿದ್ದ ಯಾರೋ ಓರ್ವ ಸರ್ಕಾರಿ ಅಧಿಕಾರಿಯ ಬಳಿ ಈ ಹಡಗಿನ ಇತ್ಯೋಪರಿಗಳನ್ನು ಕೇಳಲು ಹೋದೆ. ಆತ ಕಾರ್ ನಿಕೋಬಾರ್ ದ್ವೀಪಗಳಲ್ಲಿ ಕೆಲಸ ಮಾಡುತ್ತಿರುವವನಂತೆ. ಅವರ ಮಾತಿನ ಪ್ರಕಾರ ಈ ಹಡಗು ಗುಜರಿ ಮಾಲು ಆಗಿದೆ ಎನ್ನುವುದು ನಿಜವಾಗಿತ್ತು. ಇನ್ನು ಕೆಲವು ದಿನ ಓಡಿಸಿ ಈ ಹಡಗನ್ನು "ಕಂಡೆಮ್" ಮಾಡಲಾಗುತ್ತದೆ ಎಂದು ತಿಳಿಸಿದರು. ಇಪ್ಪತ್ತು ವರ್ಷಗಳ ಹಿಂದೆ ಬ್ರಿಟನ್ನಿನಲ್ಲಿ "ಕಂಡೆಮ್" ಮಾಡಲಾದ ಈ ಹಡಗನ್ನು ಕೇವಲ ಎರಡೇ ವರ್ಷಗಳವರೆಗೆ ಓಡಿಸಲು ಭಾರತ ಕೊಂಡು ಕೊಂಡು ದುರಸ್ತಿ ಮಾಡಿತಂತೆ. ಇದನ್ನು ಓಡಿಸಲು ಉದ್ದೇಶಿಸಿದ್ದ ಎರಡು ವರ್ಷ ಇಪ್ಪತ್ತು ವರ್ಷಗಳಿಗೆ ವಿಸ್ತರಿಸಿತ್ತು. ಇದು ಈಗ ಇನ್ನು ಓಡಿಸಬಾರದ ಪರಿಸ್ಥಿತಿಗೆ ಬಂದಿದೆ. ಉಗಿಯಂತ್ರದಿಂದ ಚಲಿಸುವ ಹಡಗು ಭಾರತದಲ್ಲಿ ಇದೊಂದೇ ಇರುವುದು. ಇದರ ಇಂಧನ ವೆಚ್ಚ ತುಂಬ ಹೆಚ್ಚು. ವಾಸ್ತವವಾಗಿ ಸರ್ಕಾರ ಮೂರು ಲಕ್ಷ ರೂಪಾಯಿಗಳ ನಷ್ಟವನ್ನು ಪ್ರತಿ ಟ್ರಿಪ್ಪಿಗೂ ಭರಿಸುತ್ತಿದೆ ಎಂದು ಅವರು ಹೇಳಿದರು. ಅವರು ಹೇಳಿದ ನಾನ್‌ಕೌರಿ ಹಡಗಿನ ಸ್ಥಿತಿಗತಿಗಳು ನನಗೆ ಇನ್ನಷ್ಟು ದಿಗಿಲಿಕ್ಕಿಸಿತು.

"ನೋಡಿ, ಈ ಹಡಗಿನ ವಿಷಯ ತಿಳಿಯದೆ ನಾವು ಇದರಲ್ಲಿ ಪ್ರಯಾಣ ಮಾಡಲು ಟಿಕೆಟ್ ತಗೊಂಡುಬಿಟ್ಟೆವು" ಎಂದು ನಮ್ಮ ಅಜಾಗರೂಕತೆಯನ್ನು ಹೇಳಿಕೊಂಡು ವಿಷಾದ ಸೂಚಿಸಿದೆ. ಆತ ನಸುನಕ್ಕು "ಹಾಗೇನೂ ಹೆದರುವ ಅಗತ್ಯವಿಲ್ಲ. ಅಂಡಮಾನಿಗೆ ಹೋಗುವ ಹಡಗುಗಳಲ್ಲೆಲ್ಲ ನಾನ್‌ಕೌರಿಯೇ

This PDF was created using the Sonic PDF Creator.
To remove this watermark, please license this product at www.investintech.com

ಅತ್ಯುತ್ತಮವಾದ ಹಡಗು, ಪ್ರಯಾಣಿಕರ ಸೌಲಭ್ಯಗಳ ದೃಷ್ಟಿಯಿಂದ. ಇದು ಅತಿ ದೊಡ್ಡ ಹಡಗಾದುದರಿಂದ ಇದು ಸಮುದ್ರದ ಏರಿಳಿತಕ್ಕೆ ಹೆಚ್ಚು ಕುಲುಕಾಡುವುದಿಲ್ಲ. ಮತ್ತು ಇಲ್ಲಿಯ ಊಟ ತಿಂಡಿ ವ್ಯವಸ್ಥೆ ಬೇರೆಲ್ಲಾ ಹಡಗುಗಳಿಗಿಂತ ಉತ್ತಮ ಮಟ್ಟದಲ್ಲಿದೆ. ಆದ್ದರಿಂದ ನಾನಂತೂ ಈ ಹಡಗು ಎಷ್ಟೇ ತುಕ್ಕು ಹಿಡಿದಿರಲಿ ಅದು ಕಂಡೆಮ್ ಆಗುವವರೆಗೂ ಇದರಲ್ಲೇ ಓಡಾಡುವವ'' ಎಂದು ಆ ಹಡಗನ್ನು ಹೊಗಳತೊಡಗಿದ. ಆತ ಊಟ ತಿಂಡಿ ವ್ಯವಸ್ಥೆಯನ್ನು ಹೊಗಳಿದ ಕೂಡಲೇ ನಮಗೆ ಆ ಹಡಗು ಸಾಕಷ್ಟು ಸುಂದರವಾಗಿ ಕಾಣತೊಡಗಿತು.

''ಸಮುದ್ರದ ಹವ ನೋಡಿ! ಎಲ್ಲಾ ಹಡಗುಗಳೂ ಬಹುಶಃ ಹೀಗೇ ಕಾಣ್ತವೆ'' ಎಂದು ಒಬ್ಬರು ಹೇಳಿದರು.

''ಫೋಟೋಗಳಲ್ಲಿ ನೋಡಿದ ಹಡಗುಗಳಿಗೆ ಇದನ್ನು ಹೋಲಿಸ ಬಾರದು ಬಿಡಿ. ಹಾಗೆ ನೋಡಿದರೆ ಇದನ್ನೂ ಫೋಟೋ ತೆಗೆದು ಅಚ್ಚು ಮಾಡಿದರೆ ಚೆನ್ನಾಗೇ ಕಾಣುತ್ತೆ!'' ಎಂದರು ಇನ್ನೊಬ್ಬರು.

ಸಾಮಾನು ಸರಂಜಾಮುಗಳನ್ನು ಹಿಡಿದುಕೊಂಡ ನೂರಾರು ಪ್ರಯಾಣಿಕ ರೊಡನೆ ಕಾಯುತ್ತಾ ನಿಂತಿದ್ದ ನನಗೆ ಈ ಹಡಗನ್ನು ಎಲ್ಲಿಂದ ಹತ್ತುವುದು ಎಂಬ ಆಲೋಚನೆ ಬಂತು. ಎಲ್ಲೋ ಅಂತರಿಕ್ಷದಲ್ಲಿ ಹಡಗಿನ ಡೆಕ್ ಕಾಣಿಸು ತ್ತಿತ್ತು. ಕ್ರೇನ್ ಮುಖಾಂತರ ಹಡಗಿಗೆ ಸಾಮಾನುಗಳನ್ನು ಹೊರಗಿನಿಂದ ಎತ್ತಿ ಎತ್ತಿ ಇಳಿಸುತ್ತಿದ್ದರು. ಪ್ರಯಾಣಿಕರನ್ನೂ ಕ್ರೇನಿನಲ್ಲಿಯೇ ಎತ್ತಿ ಒಳಗೆ ಇಳಿಸು ತ್ತಾರೆಯೆ? ಅಥವಾ ತೂಕ ಹಾಕಿದ ನಂತರ ಭಾರಕ್ಕೆ ಹಡಗಿನ ಕೆಳಭಾಗ ಮುಳುಗುತ್ತಾ ಡೆಕ್ ನಮ್ಮ ಮಟ್ಟಕ್ಕೆ ಬರುತ್ತದೆಯೆ? ಅಥವಾ ಈ ಕೆಳಭಾಗ ದಲ್ಲಿ ಕಾಣುತ್ತಿರುವ ಕಿಂಡಿಗಳಿಂದ ನಾವು ಒಳಕ್ಕೆ ತೂರಿಕೊಳ್ಳಬೇಕೆ? ಈ ಹಡಗಿನ ಪ್ರವೇಶ ಯಾಕೋ ಕೌರವರ ಚಕ್ರವ್ಯೂಹದಂತೆ ಕಾಣತೊಡಗಿತು. ಏನಾದರಾಗಲಿ ಹತ್ತುವ ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತಲ್ಲಾ? ಎಂದುಕೊಂಡು ಸುಮ್ಮನಾದೆ.

ಮದ್ರಾಸಿನ ಬಿಸಿಲಿನಲ್ಲಿ ನೆರಳೇ ಇಲ್ಲದ ಬಂದರುಕಟ್ಟೆಯಲ್ಲಿ ತುಂಬ ಸಮಯ ಕುಳಿತಿದ್ದವು. ಚಂದ್ರು ರಾಮದಾಸ್ ಇಬ್ಬರೂ ನಮ್ಮನ್ನು ಅಲ್ಲೇ ಬಿಟ್ಟು ಕಲ್ಲಂಗಡಿ ಹಣ್ಣು ಕೊಂಡು ತರುತ್ತೇವೆಂದು ಮದ್ರಾಸಿನ ಸಿಟಿ ಮಾರ್ಕೆಟ್ ಕಡೆಗೆ ಹೋದರು. ನಾವು ಬಂದರಿನ ನಲ್ಲಿಗಳಲ್ಲಿ ಬರುತ್ತಿದ್ದ ಐಸ್‌ಕೋಲ್ಡ್ ನೀರು

This PDF was created using the Sonic PDF Creator.
To remove this watermark, please license this product at www.investintech.com

ಕುಡಿಯುತ್ತಾ ಸೆಳೆಯ ವಿರುದ್ಧ ಹೋರಾಡುತ್ತಿದ್ದೆವು. ಹಡಗಂತೂ ಅಚಲವಾಗಿ ಎಂದೂ ಚಲಿಸದ ಬೆಟ್ಟದಂತೆ ನನಗೆ ಕಾಣತೊಡಗಿತು.

"ಹಡಗಿನ ಕ್ಯಾಪ್ಟನ್ನಿಗೂ ಬಂದರಿನ ಮುಖ್ಯಾಧಿಕಾರಿ ಹಾರ್ಬರ್ ಮಾಸ್ಟರಿಗೂ ಏನೋ ಬಿಸಿಬಿಸಿ ವಾಗ್ವಾದ ನಡೆಯುತ್ತಿದೆ. ಅದಕ್ಕೇ ಹಡಗು ಹೊರಡುವುದು ಇನ್ನೂ ತಡವಾಗಬಹುದು'' ಎಂದು ಯಾರೋ ಇಬ್ಬರು ನನ್ನ ಪಕ್ಕ ಪರಸ್ಪರ ಮಾತಾಡಿದರು.

"ಈ ಹೊಸಬ ಹಾರ್ಬರ್ ಮಾಸ್ಟರ್ ತುಂಬ ಜಗಳಗಂಟನೆಂದು ಕಾಣುತ್ತದೆ. ಈತನ ಜಗಳದ ದೆಸೆಯಿಂದ ಪ್ರತಿ ಹಡಗೂ ಈಗೀಗ ನಿಧಾನವಾಗಿ ಹೊರಡುತ್ತಿದೆ'' ಎಂದ ಇನ್ನೊಬ್ಬ.

ಚಂದ್ರು ರಾಮದಾಸ್ ಕಲ್ಲಂಗಡಿ ಹಣ್ಣು ತರಲು ಹೋದವರು ಇನ್ನೂ ಪತ್ತೆ ಇರಲಿಲ್ಲ. ಅವರು ಬರುವವರೆಗೂ ನಮ್ಮ ಕ್ಯಾಪ್ಟನ್ ಜಗಳ ಮುಂದುವರಿದರೇ ಒಳ್ಳೆಯದೆಂದೆನ್ನಿಸಿತು.

ಹಡಗಿಗೆ ಬರುವ ಪ್ರಯಾಣಿಕರು ಘೇರಾಯಿಸುತ್ತಲೇ ಇದ್ದರು. ತರತರದ ಗಂಟುಮೂಟೆಗಳು, ಮಕ್ಕಳು ಮರಿಗಳು, ಕೋಳಿಪಿಳ್ಳೆಗಳು, ಗಲೀಜು ಜೋಳಿಗೆಗಳು ರಾಶಿರಾಶಿ. ಇಡೀ ಇಂಡಿಯಾದ ಸಂಕ್ಷಿಪ್ತ ಸ್ವರೂಪವನ್ನೇ ಅಲ್ಲಿ ನೋಡಬಹುದಾಗಿತ್ತು.

This PDF was created using the Sonic PDF Creator.
To remove this watermark, please license this product at www.investintech.com

# 4. ನಾನ್‌ಕೌರಿ

ಮೊದಲೆಲ್ಲಾ ವಿದೇಶಗಳಿಗೆ ಹೋಗುವವರು ಹೆಚ್ಚಾಗಿ ಹಡಗುಗಳಲ್ಲಿ ಪ್ರಯಾಣ ಮಾಡುತ್ತಿದ್ದರು. ತಿಂಗಳುಗಟ್ಟಲೆ ಹಿಡಿಯುವ ಆ ಪ್ರಯಾಣಗಳಲ್ಲಿ ಹೇಗೆ ಕಾಲ ಹಾಕುತ್ತಿದ್ದರೋ ಆಶ್ಚರ್ಯವಾಗುತ್ತೆ. ಹಡಗು ಒಮ್ಮೆ ಮಧ್ಯ ಸಮುದ್ರಕ್ಕೆ ಹೋದಮೇಲೆ ಡೆಕ್ ಮೇಲೆ ಕುಳಿತು ಸುಮ್ಮನೆ ಸಮುದ್ರ ದಿಟ್ಟಿಸುತ್ತಾ ಇರುವುದೂ ಬೇಜಾರು ತರಿಸುತ್ತದೆ.

ಇಂಕಿನಷ್ಟು ಕಡುನೀಲಿಯ ಬಂಗಾಳಕೊಲ್ಲಿ ಸಮುದ್ರ ಸುತ್ತೆಲ್ಲಾ. ಹಡಗು ನಿಧಾನಕ್ಕೆ ತೆರೆಗಳ ಮೇಲೆ ಏರಿಳಿಯುತ್ತಾ ಅಂಡಮಾನಿನ ಕಡೆಗೆ ಸಾಗಿತ್ತು. ಕಾರು, ವಿಮಾನ, ರೈಲುಗಳಿಗೆ ಹೋಲಿಸಿದರೆ ಹಡಗಿನ ವೇಗ ತೀರ ನಿಧಾನ. ಸುಮಾರು ಗಂಟೆಗೆ ಹದಿನೈದು ಮೈಲು ವೇಗ. ಅಂಡಮಾನಿಗೆ ನೆಲದ ಮೇಲೆ ಸೈಕಲ್ಲಿನಲ್ಲಿ ಹೋದಂತೆ. ಹರಟೆ ಕೊಚ್ಚಲು ಗೆಳೆಯರ ಗುಂಪೊಂದು ಇಲ್ಲದಿದ್ದರೆ ಹಡಗಿನ ಪ್ರಯಾಣ ಭಯಂಕರ ಬೋರು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ ಹಡಗಿನಲ್ಲಿ ವಿಮಾನದಂತೆ ಕುರ್ಚಿಗೆ ಕಚ್ಚಿಕೊಂಡು ಬೆಲ್ಟು ಬಿಗಿದುಕೊಂಡು ಕುಳಿತುಕೊಳ್ಳಬೇಕಾಗಿಲ್ಲ. ಅಲ್ಲಿ ಓಡಾಡಲೂ ವಿಶಾಲವಾದ ಡೆಕ್‌ಗಳೂ, ಹತ್ತಿಳಿಯಲು ಅನೇಕಾನೇಕ ಪಾವಟಿಕೆಗಳೂ, ಪರೀಕ್ಷಿಸಲು ನೇತು ಬಿದ್ದಿದ್ದ ಲೈಫ್ ಬೋಟುಗಳು, ಚಕ್ರಗಳೂ, ಸರಪಳಿಗಳೂ, ಹ್ಯಾಂಡಲ್‌ಗಳೂ ನಮಗೆ ನಾಲ್ಕು ದಿನಕ್ಕೆ ಸಾಕಾಗುವಷ್ಟು ಇದ್ದವು.

ನಾನ್‌ಕೌರಿ ಹಡಗನ್ನು ಎರಡು ಪೈಲಟ್ ದೋಣಿಗಳು ಮದ್ರಾಸ್ ಬಂದರಿನಿಂದ ಏದುಸಿರು ಬಿಡುತ್ತಾ ಹೊರಗಿನ ವಿಶಾಲ ಸಮುದ್ರಕ್ಕೆ ಎಳೆತಂದು ಬಿಟ್ಟವು. ನಾನ್‌ಕೌರಿಯ ಎಂಜಿನ್ನುಗಳು ತಿರುಗತೊಡಗಿದವು. ಆದರ ಪ್ರೊಪೆಲ್ಲರ್

This PDF was created using the Sonic PDF Creator.
To remove this watermark, please license this product at www.investintech.com

ತಿರುಗುವ ಹೊಡೆತಕ್ಕೆ ಹಿಂಭುದಿಯಲ್ಲಿ ಸಮುದ್ರ ಕಡೆದಂತಾಗಿ ದೂರ ಬೀಳತೊಡಗಿತು. ಭಾರತದ ಮುಖ್ಯ ಭೂಮಿ ದೂರಾಗತೊಡಗಿತು. ಸರಿಯುತ್ತಿದ್ದ ಭಾರತವನ್ನು ಸುಮಾರು ಹೊತ್ತು ವೀಕ್ಷಿಸಿದ ಚಂದ್ರು ನನ್ನತ್ತ ತಿರುಗಿ ನನ್ನ ಕೈ ಕುಲುಕಿದರು. ನಾನು ಅವರತ್ತ ತಿರುಗಿ ಏಕೆನ್ನುವಂತೆ ನೋಡಿದೆ.

"ಈ ದೇಶವನ್ನು ಒಂದು ಸಾರಿಯಾದರೂ ನಮ್ಮ ಜೀವಿತದಲ್ಲಿ ಬಿಟ್ಟು ಹೋಗುತ್ತಿದ್ದೆವಲ್ಲ" ಎಂದರು

ನನಗೆ ಭಾರತದ ಭಯಾಜನಕ ಸ್ವರೂಪ ಒಮ್ಮೆಲೆ ಕಣ್ಣಿಗೆ ಕಟ್ಟಿತು "ದರಿದ್ರ ದೇಶ! ನೋಡಿ ಹೇಗಿದೆ. ಆ ಬಡತನ! ಆ ರಾಜಕಾರಣಿಗಳು! ಆ ಭ್ರಷ್ಟಾಚಾರ! ಆ ಜನಸಂಖ್ಯೆ! ಆ ಪರಿಸರ ನಾಶ ಸಾಕಪ್ಪ! ಈ ಶನಿಯನ್ನು ಬಿಟ್ಟು ದೂರ ಹೋಗುವುದಕ್ಕೆ ನನಗೇನೋ ಸಂತೋಷವೇ ಆಗುತ್ತಿದೆ" ಎಂದೆ.

ಇಬ್ಬರೂ ಸೇರಿಕೊಂಡು ಭಾರತವನ್ನು ಮನಸ್ಸು ತೃಪ್ತಿಯಾಗುವವರೆಗೂ ಬಯ್ದೆವು. ನಾವು ಇಷ್ಟೊಂದು ದೇಶಪ್ರೇಮವೇ ಇಲ್ಲದವರೆಂದು ಗೊತ್ತಾದುದು ಆಗಲೇ, ಅಲ್ಲೇ ಪಕ್ಕ ರಾಜೇಶ್ವರಿ, ಉಷಾ, ಶಾಂತ, ನಿರ್ಮಲಾ ಎಲ್ಲ ನಿಂತಿದ್ದರು. ಭಾವುಕರಾಗಿ ನಿಂತಿದ್ದ ಅವರಿಗೆ ನಮ್ಮ ಅಭಿಪ್ರಾಯ ತಿಳಿಸಲಿಲ್ಲ. ವೃಥಾ ವಾಗ್ವಾದ ಯಾಕೆ ಎಂದು. ರಿಪೇರಿ ಮಾಡಲಾಗದಂತೆ ಹಾಳಾಗುತ್ತಿರುವ ಮತ್ತು ಹಾಳು ಮಾಡುವವರಿಗೇ ಪ್ರೋತ್ಸಾಹ ಕೊಡುತ್ತಿರುವ ಭಾರತದ ಮೇಲೆ ಎಲ್ಲಿಲ್ಲದ ಸಿಟ್ಟು ಬಂದಿತ್ತು. ಆ ಕ್ಷಣ ನಾವು ದೇಶದ್ರೋಹಿಗಳಲ್ಲದಿದ್ದರೂ ದೇಶಪ್ರೇಮಿಗಳಂತೂ ಆಗಿರಲಿಲ್ಲ. ಕಂತ್ರಿ ರಾಜಕಾರಣಿಗಳ ಮುಖಾಂತರ, ಭ್ರಷ್ಟ ಅಧಿಕಾರಶಾಹಿಯ ಮುಖಾಂತರ, ಲಂಪಟ ಓಟುದಾರರ ಮುಖಾಂತರ ಕ್ಷಣಕ್ಷಣಕ್ಕೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಈ ದೇಶವನ್ನು ಪ್ರೇಮಿಸುವುದು ನಮಗೆ ಅಸಾಧ್ಯವಾಗಿ ಕಂಡಿತು.

ಆದರೆ ಭಾರತಕ್ಕೆ ಕೆಲವು ದಿನಗಳ ತರುವಾಯ ಹಿಂದಿರುಗುತ್ತಿದ್ದೇವೆಂದು ನಮಗೆ ಚೆನ್ನಾಗಿ ಗೊತ್ತಿತ್ತು. ಅದರ ಬದಲು ಭಾರತವನ್ನು ನಮ್ಮ ಜೀವನದಲ್ಲಿ ಕೊನೆಯಬಾರಿಗೆ ನೋಡುತ್ತಿದ್ದೇವೆಂದಾಗಿದ್ದರೆ! ಆಗ ಹೇಗನ್ನಿಸುತ್ತಿತ್ತೊ ಗೊತ್ತಿಲ್ಲ.

ಸಹಸ್ರಾರು ಮೈಲಿ ದೂರದ ಅಂಡಮಾನಿಗೆ ಶಿಕ್ಷೆ ಅನುಭವಿಸಲು ಅಥವಾ ಮರಣದಂಡನೆಗೆ ಹಿಂದೆಲ್ಲಾ ಹೋಗುತ್ತಿದ್ದ ಖೈದಿಗಳಿಗೆ ಏನನ್ನಿಸಿರಬಹುದು?

This PDF was created using the Sonic PDF Creator.
To remove this watermark, please license this product at www.investintech.com

ಭಾರತಕ್ಕಾಗಿ ಹೋರಾಡಿ ಪ್ರಾಣಾರ್ಪಣೆ ಮಾಡಿದ ಸ್ವಾತಂತ್ರ್ಯ ಹೋರಾಟಗಾರರಿಗೆ ಏನೆನ್ನಿಸಿರಬಹುದು?

ವೀರಸಾವರ್ಕರ್‌ಗೆ ಈ ಕ್ಷಣಗಳು ಹೇಗೆ ಕಂಡಿರಬಹುದು?

ಆ ಇತಿಹಾಸದ ಕ್ಷಣಗಳು ಭಾರತದ ಬಗ್ಗೆ ತಿರಸ್ಕಾರದಿಂದ ಬಯ್ಯುತ್ತಿದ್ದ ನಮಗೆ ಗೊತ್ತಾಗುವುದಾದರೂ ಹೇಗೆ. ನಮಗೆ ಸಿಟ್ಟುಬಂದು ಬಯ್ದದ್ದು ಮಾತ್ರ ನಿಜ.

* * *

ಮದ್ರಾಸ್ ದೂರ ಸರಿದು ದಿಗಂತದಲ್ಲಿ ಲೀನವಾಯ್ತು. ಸೂರ್ಯ ಕೆಂಪಗೆ ಸಮುದ್ರದಲ್ಲಿ ಮುಳುಗತೊಡಗಿದ. ಸಮುದ್ರ ಎತ್ತೆತ್ತಲೂ ಆವರಿಸತೊಡಗಿತು.

ನಿರಂತರವಾದ ವೈವಿಧ್ಯಗಳಿಲ್ಲದ ಸಮುದ್ರದ ಮೇಲ್ಮೈ ಸುಮ್ಮನೆ ನೋಡುತ್ತಾ ಇದ್ದರೆ ಆಕಾಶದ ಶೂನ್ಯದಂತೆ ಅರ್ಥಹೀನವಾಗತೊಡಗುತ್ತದೆ. ದಡದಿಂದ ನಾವು ಸಮುದ್ರವನ್ನು ನೋಡುವುದಕ್ಕೂ ಮಧ್ಯ ಸಮುದ್ರದಲ್ಲಿ ನಾವು ಹಡಗಿನಿಂದ ನೋಡುವುದಕ್ಕೂ ತುಂಬಾ ವ್ಯತ್ಯಾಸವಿದೆ. ಕ್ಷಣಕ್ಕೊಮ್ಮೆ ಒಂದೊಂದು ರೀತಿಯಾಗಿ ಬಂದಪ್ಪಳಿಸುವ ಅಲೆಗಳು ನೋಡುವವರಿಗೆ ಕುತೂಹಲದಾಯಕವಾಗಿರುತ್ತದೆ. ಆದರೆ ಮಧ್ಯಸಾಗರದಲ್ಲಿ ಹಾಗಿರುವುದಿಲ್ಲ.

ಬಂಗಾಳಕೊಲ್ಲಿ ನಾವು ಹೊರಟ ಸಮಯದಲ್ಲಿ ಯಾವ ಚಂಡಮಾರುತವೂ ಇಲ್ಲದೆ ತುಂಬ ಪ್ರಶಾಂತವಾಗಿತ್ತು. ಆದರೂ ಅಲೆಗಳ ಏರಿಳಿತಕ್ಕೆ ಹಡಗು ಮೆಲ್ಲಗೆ ಓಲಾಡುತ್ತಲೇ ಇತ್ತು.

ಊರಿನಲ್ಲಿ ಕೆಲವರು ಮೊದಲೇ ಹೆದರಿಸಿ ದಿಗಿಲಿಕ್ಕಿಸಿದಂತೆ ಯಾರಿಗೂ ಹೊಟ್ಟೆ ತೊಳೆಸಿ ವಾಂತಿಯಾಗಲಿಲ್ಲ. ಆದರೂ ರಾಜೇಶ್ವರಿ ಮುಂಜಾಗ್ರತಾ ಕ್ರಮವಾಗಿ ಒಂದೊಂದು ಅವಾಮಿನ್ ಮಾತ್ರೆ ನುಂಗಿ ಉಷಾ, ಶಾಂತಾ ಇವರಿಗೂ ನುಂಗಿಸಿದ್ದಳು.

ನನಗೆ ಮೊದಲು ಹಡಗಿನ ಓಲಾಟ ಅನುಭವಕ್ಕೆ ಬಂದಾಗ ವಿಚಿತ್ರ ಎನ್ನಿಸಿತ್ತು. ಹಡಗಿನ ಓಲಾಟ ಎಂದು ನನ್ನ ಗಮನಕ್ಕೆ ಬರದೇ ನನಗೆ ತಲೆ ತಿರುಗುತ್ತಿದೆ ಎನ್ನಿಸಿ ಹಲವಾರು ಬಾರಿ ತಲೆ ಕೊಡವಿಕೊಂಡೆ. ಮೊದಮೊದಲಂತೂ ಮಾದಕ ಪದಾರ್ಥಗಳ ಮತ್ತಿನಲ್ಲಿ ಓಡಾಡುತ್ತಿರುವಂತೆಯೇ ಭಾಸವಾಗುತ್ತದೆ. ಚಿಕ್ಕ ದೋಣಿಗಳಲ್ಲಾದರೆ ಅಲೆಗಳ ಕುಣಿತಕ್ಕೆ ದೋಣಿ ಓಲಾಡುವುದು ನಮಗೆ

This PDF was created using the Sonic PDF Creator.
To remove this watermark, please license this product at www.investintech.com

ದೃಷ್ಟಿಗಮ್ಯವಿರುವುದರಿಂದ ಅಲ್ಲಿ ನಮಗೆ ಹೀಗನ್ನಿಸುವುದಿಲ್ಲ. ದೊಡ್ಡ ಹಡಗುಗಳಲ್ಲಿ ಹಡಗು ನೆಟ್ಟಗೇ ಇದ್ದು ನಾವು ಮಾತ್ರ ತೂಗಾಡುತ್ತಿರುವಂತೆ ಭಾಸವಾಗುತ್ತದೆ. ಈ ಭ್ರಮೆಗಳೆಲ್ಲಾ ಮೊದಲ ದಿನ ಅಷ್ಟೆ. ಅನಂತರ ನಮ್ಮ ಮನಸ್ಸು ದೇಹ ಎರಡೂ ಅದರ ಓಲಾಟಕ್ಕೆ ಹೊಂದಿಕೊಂಡು ಬಿಡುತ್ತೆ.

ನಾನ್‌ಕೌರಿ ಹಡಗು ಒಂದು ಕಾಲಕ್ಕೆ ಸುಂದರವಾದ ಹಡಗೇ ಆಗಿದ್ದಿರಬಹುದೆನ್ನುವುದನ್ನು ನಾವು ಈಗಲೂ ಊಹಿಸಬಹುದಾಗಿತ್ತು. ಅದರಲ್ಲಿ ಕಲ್ಪಿಸಿದ್ದ ಪ್ರಯಾಣಿಕರ ಸೌಲಭ್ಯಗಳು ಇವೆಲ್ಲಾ ನಮ್ಮ ಫೈವ್‌ಸ್ಟಾರ್ ಹೋಟೆಲುಗಳ ಮಾದರಿಯಲ್ಲಿ ನಿರ್ಮಿಸಿದ್ದರು. ಆದರೆ ಆ ಹಡಗಿನ ಅಲಂಕಾರಿಕ ವಸ್ತುಗಳಲ್ಲಿ ಬಹುಪಾಲನ್ನು ಪ್ರಯಾಣಿಕರು ಕದ್ದೊಯ್ದಿದ್ದರು. ಕಕ್ಕಸುಗಳಲ್ಲಿ ಸ್ನಾನದ ಮನೆಗಳಲ್ಲಿ ಇಟ್ಟಿದ್ದ ತಂಬಿಗೆಗಳು, ಹಿತ್ತಾಳೆಯ ನಲ್ಲಿಗಳು, ಷವರ್ ಬಾತ್ ಸಲಕರಣೆಗಳು ಎಲ್ಲವೂ ಅಪಹರಿಸಲ್ಪಟ್ಟಿದ್ದವು. ಅನೇಕ ಕದಿಯಲಾಗದಂಥ ವಸ್ತುಗಳನ್ನು ಒಡೆದು ವಿರೂಪಗೊಳಿಸಲಾಗಿತ್ತು.

* * *

ಕ್ಯಾಪ್ಟನ್ ಬಳಿ ನಾವು ಸ್ನಾನದ ಮನೆಯಲ್ಲಿದ್ದ ತುಕ್ಕುಹಿಡಿದ ತಗಡಿನ ಡಬ್ಬಿಗಳ ಬಗ್ಗೆ ದೂರಿದೆವು. ಪ್ಲಾಸ್ಟಿಕ್ ಮಗ್ಗುಗಳನ್ನಾದರೂ ಇವುಗಳ ಬದಲು ಇಡಬಾರದೇ ಎಂದು ಕೇಳಿದಾಗ ಅವರು ಪ್ರಯಾಣಿಕರ ಕಳ್ಳತನದ ವಿಷಯಗಳನ್ನೆಲ್ಲಾ ತಿಳಿಸಿ ನಿಮ್ಮ ಕ್ಯಾಬಿನ್‌ಗಳಿಗೆ ಬೀಗ ಹಾಕಿಕೊಳ್ಳದೆ ಎಲ್ಲಿಗೂ ಹೋಗಬೇಡಿ. ಕೊಲೆ ಖೂನಿ ಮಾಡುವಂಥವರೂ ಸಹ ಪ್ರಯಾಣಿಕರಾಗಿ ಬಂದಿರುತ್ತಾರೆ ಎಂದು ಎಚ್ಚರಿಕೆ ಕೊಟ್ಟರು. ಈ ರೀತಿ ದುಷ್ಕೃತ್ಯಗಳಲ್ಲಿ ತೊಡಗುವವರು ಸಾಧಾರಣವಾಗಿ ಬಂಕರ್‌ಗಳಲ್ಲಿ ಪ್ರಯಾಣ ಮಾಡುವ ಪ್ಯಾಸೆಂಜರ್‌ಗಳೆಂದೂ ಅವರನ್ನು ಡೆಕ್‌ಮೇಲೆ ಕ್ಯಾಬಿನ್‌ಗಳ ಜಾಗಕ್ಕೆ ಬರದಂತೆ ಪ್ರತಿಬಂಧಿಸಲಾಗಿದೆ ಎಂದೂ ಹೇಳಿದರು.

ಇದನ್ನೆಲ್ಲಾ ಕೇಳಿ ನಾನು ಬಂಕರ್ ನೋಡಿ ಬರೋಣ ಎಂದು ಒಂದು ಸಾರಿ ಬಂಕರ್ ವಿಭಾಗಕ್ಕೆ ಹೋದೆ. ಅಲ್ಲಿನ ಗಲೀಜು, ಅವ್ಯವಸ್ಥೆ, ಅವರಲ್ಲೇ ನಡೆಯುತ್ತಿದ್ದ ಜಗಳ ಹೊಡೆದಾಟಗಳನ್ನು ನೋಡಿ ಹೆದರಿ ಹೋದೆ. ಒಬ್ಬ ಹೆಂಡತಿಯ ಜುಟ್ಟು ಹಿಡಿದುಕೊಂಡು ತಮಿಳಿನಲ್ಲಿ ಬಯ್ಯುತ್ತಿದ್ದ. ಇತರರು ಮೌನಪ್ರೇಕ್ಷಕರಾಗಿ ಕುಳಿತಿದ್ದರು. ಅದರ ನರಕಸದೃಶ ಶೌಚಗೃಹಗಳನ್ನು ನೋಡಿಯಂತೂ ಇನ್ನು ಇತ್ತ ಬರಬಾರದೆಂದು ನಿರ್ಧರಿಸಿದೆ. ಶೌಚಗೃಹದ ಬಾಗಿಲನ್ನು

This PDF was created using the Sonic PDF Creator.
To remove this watermark, please license this product at www.investintech.com

ಸಹ ಸಮೀಪಿಸಲಾಗದಷ್ಟು ಅದರ ಸುತ್ತೆಲ್ಲಾ ಪಾಯಿಖಾನೆಯ ರಾಶಿ ಬಿದ್ದಿತ್ತು. ಒಂದೇ ರಾತ್ರಿಯೊಳಗೆ ಇಷ್ಟೊಂದು ಗಲೀಜಾಗಿರಬೇಕಾದರೆ ಇನ್ನು ನಾಲ್ಕು ದಿನದೊಳಗೆ ಏನಾಗಬಹುದೆಂದು ಚಿಂತಿಸಿದೆ. ನನ್ನ ಸಮಾಜವಾದ ಎಲ್ಲಾ ಹಾರಿ ಹೋಗಿ ಅವರನ್ನು ಕಂಡರಾಗದಷ್ಟು ಸಿಟ್ಟು ಬಂತು. ಈ ಗಲೀಜಿನ ನಡುವೆಯೂ ಅವರು ನಿರ್ಯೋಚನೆಯಿಂದ ನಿರಾತಂಕವಾಗಿ ಕುಳಿತಿದ್ದರು.

ಬಂಕರ್ ವರ್ಗಕ್ಕೂ ಮಲಗಲು ಸ್ಥಳ, ಓಡಾಡಲು ಜಾಗ, ಸಾಮಾನುಗಳನ್ನು ಇಟ್ಟುಕೊಳ್ಳಲು ರ್‍ಯಾಕುಗಳು, ಸ್ನಾನ, ನೀರು ಎಲ್ಲ ಒದಗಿಸಿದ್ದರು. ಆದರೆ ಅವೆಲ್ಲವನ್ನೂ ದೂಂಕಿಸಿ, ಮುರಿದು, ವಿರೂಪಗೊಳಿಸಿ ಹೊಲಸೆಬ್ಬಿಸಿದ್ದರು. ರ್‍ಯಾಕುಗಳ ಮೇಲೆ ಸಿಕ್ಕಿಸುವ ಕೊಕ್ಕೆಗಳೂ, ಚಿಲಕಗಳೂ ನಾಪತ್ತೆಯಾಗಿದ್ದವು. ಈ ರೀತಿ ಹಡಗಿನಿಂದ ಕದ್ದೊಯ್ಯುವ ಯಾವ ಸಾಮಾನುಗಳೂ ಬೆಲೆಬಾಳುವುವಾಗಲೀ ಉಪಯುಕ್ತವಾದವಾಗಲೀ ಆಗಿರಲಿಲ್ಲ. ಆದರೂ ಹಡಬಿಟ್ಟಿ ಸಿಕ್ಕಿದುದನ್ನು ಹೊಡೆದುಕೊಳ್ಳುವ ನೀಚಬುದ್ಧಿಯಿಂದಲೇ ಇದನ್ನೆಲ್ಲ ಮಾಡಿದ್ದರು.

ನಾನು ಬಂಕರುಗಳಿಂದ ಹೊರಬಂದಾಗ ಇಬ್ಬರು ಡೆಕ್ಕಿನ ಮೇಲೇ ಹೊಟ್ಟೆಯಲ್ಲಿದ್ದುದನ್ನೆಲ್ಲಾ ಕಕ್ಕುತ್ತಿದ್ದರು. ಅಲ್ಲಿಯೇ ಪಕ್ಕದಲ್ಲಿದ್ದ ಸಮುದ್ರದೊಳಕ್ಕೆ ಬಗ್ಗಿ ಉಗಿಯುವಷ್ಟು ಇವರಿಗೆ ಪರಿಜ್ಞಾನವಿಲ್ಲವೆ? ಕೇವಲ ನಾಲ್ಕೇ ದಿನದ ಮಟ್ಟಿಗೆ ಸಹಪ್ರಯಾಣ ಮಾಡುವ ಇತರರೊಡನೆ ಜಗಳ ಹೊಡೆದಾಟ ಮಾಡದ ಇರುವಷ್ಟು ಇವರಿಗೆ ಸಹನೆ ಇಲ್ಲವೆ?

ಮಾರ್ಕ್ಸ್ ಬಡತನ ಕೇಂದ್ರೀಕರಣವಾಗುತ್ತಾ ಹೋದಂತೆಲ್ಲ ತಮ್ಮ ಸಮಾನ ಸಮಸ್ಯೆಗಳ ಮುಖಾಂತರ ಬಡವರ ಸಮುದಾಯದಲ್ಲಿ ಭ್ರಾತೃತ್ವ ಮೂಡುತ್ತದೆ; ಅವರೆಲ್ಲಾ ಬಂಡವಾಳಶಾಹಿಯ ವಿರುದ್ಧ ಹೋರಾಡುವುದಕ್ಕೆ ಒಗ್ಗಟ್ಟಾಗುತ್ತಾ ಹೋಗುತ್ತಾರೆ ಎಂದು ಬಂಡವಾಳಶಾಹಿ ವಿಕಾಸದ ಒಂದು ಮುಖ್ಯ ನಿಯಮವನ್ನು ಹೇಳಿದ. ಆದರೆ ಮಾರ್ಕ್ಸ್ ಅನಂತರ ಮುಂದುವರಿದ ಚರಿತ್ರೆ ಬೇರೆಯದೇ ಕತೆ ಹೇಳುತ್ತದೆ.

ಬಡವರು ಬಡವರಾದಂತೆಲ್ಲಾ ದುರಾಸೆಯುಳ್ಳವರೂ ಸ್ವಾರ್ಥಕ್ಕಾಗಿ ತಮ್ಮ ಸಹಬಾಂಧವರಿಗೆ ಸುಲಭ ದ್ರೋಹ ಬಗೆಯುವವರೂ ಪರಸ್ಪರ ಕ್ಷುಲ್ಲಕ ಕಾರಣಗಳಿಗೆ ಕಚ್ಚಾಡುವವರೂ ಆಗುತ್ತಾರಲ್ಲ ಏಕೆ? ಕೌಟುಂಬಿಕ ಮಟ್ಟದಲ್ಲಿ ದಿನಾ ಹೊಡೆದಾಡುವ ಗಂಡ, ಹೆಂಡತಿ, ಮಕ್ಕಳು, ಸಾಮಾಜಿಕ ಮಟ್ಟದಲ್ಲಿ ತಮ್ಮ ಸಂಘಟನೆಗಳಿಗೇ ದ್ರೋಹ ಬಗೆದು ಮಾಲೀಕರಿಂದ ಲಂಚ ತೆಗೆದುಕೊಳ್ಳುವ

This PDF was created using the Sonic PDF Creator.
To remove this watermark, please license this product at www.investintech.com

ಟ್ರೇಡ್ ಯೂನಿಯನ್ ಲೀಡರುಗಳು. ಅಂತರರಾಷ್ಟ್ರೀಯ ಮಟ್ಟದಲ್ಲೂ ಸಹ ಇದೇ ಗತಿ. ಮುಂದುವರಿದ ರಾಷ್ಟ್ರಗಳು ಯೂರೋಪಿಯನ್ ಕಾಮನ್ ಮಾರ್ಕೆಟ್ ಇತ್ಯಾದಿಗಳನ್ನು ಮಾಡಿಕೊಂಡು ಒಂದು ದೇಶವಾಗುವ ಹವಣಿಕೆಯಲ್ಲಿದ್ದರೆ, ಎಲ್ಲ ಹಿಂದುಳಿದ ರಾಷ್ಟ್ರಗಳೂ ಪರಸ್ಪರ ಪೂರ್ಣಪ್ರಮಾಣದ ಯುದ್ಧದಲ್ಲಿ ತೊಡಗಿ ಯೂರೋಪಿನ ಆಯುಧ ತಯಾರಕರ ಗಿರಾಕಿಗಳಾಗಿ ಹೋಗಿವೆ. ಟ್ರೇಡ್ ಯೂನಿಯನ್ ಲೀಡರುಗಳಂತೆಯೇ ಈ ದೇಶದ ರಾಜಕಾರಣಿಗಳು ಆಯುಧ ತಯಾರಕರಿಂದ ಕೋಟಿಗಟ್ಟಲೆ ಲಂಚ ಹೊಡೆಯುತ್ತಾ ಅದನ್ನು ರಾಜಕೀಯ ಶಕ್ತಿಯನ್ನಾಗಿ ಪರಿವರ್ತಿಸಿ ತಮ್ಮ ದೇಶಬಾಂಧವರನ್ನೇ ವಂಚಿಸುತ್ತಿದ್ದಾರೆ!

ಬಂಕರ್‌ಗಳಿಂದ ಹೊರಬರುತ್ತ ನನ್ನ ಯೋಚನೆ ಎತ್ತೆತ್ತಲೋ ಹರಿಯತೊಡಗಿತು..

ಹಡಗಿನಲ್ಲಿ ಮೊದಲೇ ನಾವು ಊಹಿಸಿದಂತೆ ಊಟ ತಿಂಡಿ ವ್ಯವಸ್ಥೆ ತಕ್ಕಮಟ್ಟಿಗೆ ಚೆನ್ನಾಗೇ ಇತ್ತು. ಬೆಳಿಗ್ಗೆ ಖಳುತ್ತಿದ್ದಂತೆಯೇ ಆರು ಗಂಟೆಗೇ ಒಂದು ಕಪ್ ಟೀ, ಅನಂತರ ಎಂಟು ಗಂಟೆಗೇ ಒಂದು ಕಪ್ ಟೀ, ಅನಂತರ ಎಂಟು ಗಂಟೆಗೆ ಎರಡು ಮೊಟ್ಟೆ, ಉಪ್ಪಿಟ್ಟು ಹಣ್ಣು ಇತ್ಯಾದಿಗಳ ಉಪಾಹಾರ. ಆಮೇಲೆ ಹನ್ನೆರಡು ಗಂಟೆಗೆ ತಿನ್ನಲಸಾಧ್ಯವಾದಷ್ಟು ಧಾರಾಳವಾದ ಊಟ. ಕಂಟ್ರೋಲ್ ರೂಮಿನಿಂದ ಹಡಗಿನ ಎಲ್ಲ ಕಡೆಗೂ ಸ್ಪೀಕರ್‌ಗಳಿದ್ದುದರಿಂದ ಊಟದ ಮತ್ತು ಉಪಾಹಾರದ ಸಮಯಕ್ಕೆ ಸರಿಯಾಗಿ ಒಂದು ವಿಚಿತ್ರ ಸಂಗೀತದ ಕರೆಗಂಟೆ ಹಾಕುತ್ತಿದ್ದರು. ಹಡಗಿನಲ್ಲಿ ಎಲ್ಲೇ ಇರಲಿ ಅದು ಕೇಳುತ್ತಿತ್ತು. ಡೈನಿಂಗ್ ಹಾಲ್‌ನಲ್ಲಿ ನಮಗಾಗಿ ಒಂದು ಜಾಗ ಗೊತ್ತುಪಡಿಸಿರುತ್ತಿದ್ದರು. ಹಡಗಿನಲ್ಲಿ ಇರುವಷ್ಟು ದಿನವೂ ನೀವು ಅದನ್ನು ಬದಲಿಸುವಂತಿರಲಿಲ್ಲ.

ಹಡಗಿನ ಊಟದ ಮನೆಯಲ್ಲಿ ನಮಗೆ ಇರಸು ಮುರಿಸು ಮಾಡಿದ ಒಂದೇ ಒಂದಂಶವೆಂದರೆ ಅವರು ನಮ್ಮ ಜಾಗ ಬೇಗ ಖಾಲಿ ಮಾಡಿಸಲು ಅನುಸರಿಸುತ್ತಿದ್ದ ಉಪಾಯ. ನಿಮ್ಮ ತಟ್ಟೆ ಖಾಲಿಯಾಗುವುದರೊಳಗೆ ನಿಮ್ಮ ತಟ್ಟೆಗಳನ್ನು ಎಳೆದುಕೊಳ್ಳಲು ಪರಿಚಾರಕರು ಹೊಂಚುಹಾಕುತ್ತಿದ್ದಾರೇನೋ ಎಂದು ಭಾಸವಾಗುತ್ತಿತ್ತು. ಕೊನೆಯ ತುತ್ತು ತಿಂದು ಚಮಚ ಕೆಳಗಿಡುವುದರೊಳಗೆ ತಟ್ಟೆ ಮಾಯವಾಗಿರುತ್ತಿತ್ತು. ಬಹುಶಃ ಹಡಗಿನಲ್ಲಿ ಬೇರೆ ಬೇರೆ ಕೆಲಸದಲ್ಲಿರುವವರೇ ನಮಗೆ ಊಟ ಬಡಿಸುವ ಪರಿಚಾರಕರೂ ಆಗಿ ಬಂದಿರುತ್ತಿದ್ದುದರಿಂದ ಅವರಿಗೆ

This PDF was created using the Sonic PDF Creator.
To remove this watermark, please license this product at www.investintech.com

ತಮ್ಮ ಕೆಲಸ ಬೇಗ ಮುಗಿಸಿ ಹೋಗಬೇಕಾದ ಅವಸರವಿತ್ತೆಂದು ಕಾಣುತ್ತದೆ. ಗಂಟೆಗಟ್ಟಲೆ ತಟ್ಟೆಗಳೆದುರು ಕುಳಿತು ಹರಟುತ್ತಇರುವುದನ್ನು ಪ್ರೋತ್ಸಾಹಿಸ ದಿರಲು ಈ ಕ್ರಮ ಕೈಗೊಂಡಿದ್ದರೇನೋ!

ಪ್ರತಿಸಾರಿ ಊಟದ ನಂತರ ಒಂದು ವೀಡಿಯೋ ಸಿನಿಮಾ ಇರುತ್ತಿತ್ತು. ಮೊದಲನೇ ದಿನ ಸಿನಿಮಾ ನೋಡಲು ಹೋಗಿ ಕುಳಿತೆ. ಕುಳಿತು ನೋಡಲು ಒಳ್ಳೆಯ ಸುಖಾಸನಗಳಿದ್ದವು. ಕೊಂಚ ಹೊತ್ತು ನೋಡುವುದರ ಒಳಗೇ ತೂಕಡಿಕೆ ಬರ ತೊಡಗಿತು. ಸಿನಿಮಾ ಆರಂಭವಾಗುವುದರೊಳಗೇ ನನಗೆ ನಿದ್ರೆ ಬಂತು. ಮಧ್ಯೆ ಎಚ್ಚರಾದಾಗ ಇನ್ನೂ ಸಿನಿಮಾ ನಡೆಯುತ್ತಿತ್ತು. ಹಿಂದಿನ ಕತೆ ಏನೆಂದು ಕೇಳೋಣೆಂದು ಪಕ್ಕ ನೋಡಿದರೆ ರಾಮದಾಸ್ ಗೊರಕೆ ಹೊಡೆಯುತ್ತಿದ್ದಾರೆ! ಅಷ್ಟೇ ಅಲ್ಲ ಅಲ್ಲಿ ನೋಡುತ್ತಿದ್ದವರಲ್ಲಿ ಮುಕ್ಕಾಲು ಜನರೆಲ್ಲಾ ನಿದ್ರೆಯಲ್ಲಿ ಮುಳುಗಿದ್ದಾರೆ!

ಇನ್ನಾದರೂ ಸರಿಯಾಗಿ ಸಿನಿಮಾ ಫಾಲೋ ಮಾಡೋಣೆಂದು ಬಲಾತ್ಕಾರ ವಾಗಿ ರೆಪ್ಪೆ ತೆಗೆದುಕೊಂಡು ಕುಳಿತೆ. ಹಡಗಿನ ತೂಗಾಟಕ್ಕೋ ಅಥವಾ ಹೊಟ್ಟೆ ಭರ್ತಿಯಾಗಿದ್ದಕ್ಕೋ ಮತ್ತೆ ನಿದ್ದೆ ಯಾವಾಗ ಬಂತೆಂಬುದೇ ಗೊತ್ತಾಗಲಿಲ್ಲ. ಹೀಗೇ ಪ್ರತಿಸಾರಿಯೂ ಆಗತೊಡಗಿತು. ಒಂದೇ ಒಂದು ಸಿನಿಮಾವನ್ನು ಮೊದಲಿ ನಿಂದ ಕೊನೇವರಗೆ ನೋಡಲು ಸಾಧ್ಯವಾಗಲಿಲ್ಲ. ಕೊನೆಗೆ ಸಿನಿಮಾ ತಂಟೆಯೇ ಬೇಡವೆಂದು ಟೇಬಲ್ ಟೆನ್ನಿಸ್ ಆಡಲು ಹೋದೆವು.

ಇಸ್ಪೀಟಾಡುವವರು ಟೇಬಲ್ ಟೆನ್ನಿಸ್ ಬೋರ್ಡುಗಳ ಮೇಲೇ ಕುಳಿತು ಅವನ್ನು ಜಖಂ ಮಾಡಿಟ್ಟಿದ್ದರು. ನಮಗೆ ಆ ಮೇಜುಗಳನ್ನು ದುರಸ್ತಿ ಮಾಡು ವುದೇ ಅರ್ಧದಿನದ ಕೆಲಸವಾಯ್ತು. ಸಾರ್ವಜನಿಕ ಸ್ವತ್ತು ಎಂದಾದ ಕೂಡಲೇ ಏನಾದರೂ ಮಾಡಿ ಅದನ್ನು ಹಾಳು ಮಾಡಿಡುತ್ತಾರೆ. ಸಮುದ್ರದ ಮಧ್ಯೆ ಮುಳುಗಿ ಹೋಗುತ್ತೇವೆನ್ನುವ ಭಯ ಇಲ್ಲದಿದ್ದರೆ ಪ್ರಯಾಣಿಕರು ಹಡಗನ್ನೇ ಮುರಿದು ತಮ್ಮ ಸೂಟ್‌ಕೇಸಿಗೆ ತುಂಬಿಕೊಳ್ಳುತ್ತಿದ್ದರೋ ಏನೋ!

*

ಹಡಗಿನ ಮುಂದುಗಡೆಯ ತುಟ್ಟತುದಿಯಲ್ಲಿ ಎಂಥದೋ ಒಂದು ಬತ್ತದ ಬುಟ್ಟಿ ಕಟ್ಟಿದ್ದರು. ನನಗೆ ಅದೇನೆಂದು ನೋಡಬೇಕೆಂಬ ಕುತೂಹಲ ಕಾಡುತ್ತಿತ್ತು. ಅದನ್ನು ಮದ್ರಾಸ್ ಬಂದರು ಬಿಡುತ್ತಿದ್ದಂತೆಯೇ ಕಟ್ಟಿದ್ದರು.

This PDF was created using the Sonic PDF Creator.
To remove this watermark, please license this product at www.investintech.com

ಅದನ್ನು ನೋಡಲು ನಾನು ಮಲ್ಲಿಕ್ ಉಷಾ ಅಲ್ಲಿಗೆ ಹೋದೆವು. ಹಡಗಿನ ಮುಂತುದಿಯಾದ್ದರಿಂದ ಗಾಳಿ ಜೋರಾಗಿ ಬೀಸುತ್ತಿತ್ತು. ಹಡಗಿನ ಮುಂಭಾಗ ಅಲೆಗಳನ್ನು ಸೀಳಿಕೊಂಡು ಹೋಗುವುದು ಚೆನ್ನಾಗಿ ಕಾಣುತ್ತಿತ್ತು. ಆ ಬುಟ್ಟಿ ಏನೆಂದು ನಮಗೆ ಗೊತ್ತಾಗಲಿಲ್ಲ. ಅದರೊಳಗೆ ಏನೇನನ್ನೋ ಇಟ್ಟು ಅದಕ್ಕೆ ಒಂದು ಹಾರ ಹಾಕಿದ್ದರು. ಹಡಗಿನವರ ಯಾವುದೋ ಸಂಪ್ರದಾಯ ವಿದ್ದರೂ ಇರಬಹುದು ಅಥವಾ ಸಮುದ್ರ ರಾಜನಿಗೆ ಕ್ಷೇಮವಾಗಿ ಕರೆದೊಯ್ಯಲು ಮಾಡಿದ ಪೂಜೆ ಇದ್ದರೂ ಇರಬಹುದು.

ಅಲ್ಲಿಂದ ಏರಿಳಿಯುವ ಉಬ್ಬು ತಗ್ಗಿನ ಸಮುದ್ರ ನೋಡುತ್ತಾ ಇರಬೇಕಾದರೆ ಮಲ್ಲಿಕ್ ಇದ್ದಕ್ಕಿದ್ದಂತೆ "ಓ ಅಲ್ಲೊಂದು ಹಕ್ಕಿ!" ಎಂದು ಕೂಗಿದರು. ನಾನು ತಕ್ಷಣ ಅತ್ತ ನೋಡಿದೆ. ಸಮುದ್ರದ ನೀಲಿಯಲ್ಲದೆ ಮತ್ತೇನೂ ಕಾಣಲಿಲ್ಲ. ಬಂಗಾಳಕೊಲ್ಲಿಯ ನಟ್ಟ ನಡುವೆ ನೆಲದಿಂದ ಸಾವಿರಾರು ಮೈಲು ದೂರಕ್ಕೆ ಇಲ್ಲಿಗೆ ಯಾವ ಹಕ್ಕಿ ಬರುತ್ತದೆ! ಆಶ್ಚರ್ಯ ವಾಯ್ತು. ಹಡಗಿನಲ್ಲೇ ಮನೆ ಮಾಡಿಕೊಂಡಿರುವ ಯಾವುದೋ ಗುಬ್ಬಚ್ಚಿಯೆ?

ಅಷ್ಟರಲ್ಲಿ ಮಲ್ಲಿಕ್ ಮತ್ತೊಮ್ಮೆ "ಅಲ್ಲಿ ಹಾರುತ್ತಿದೆ ನೋಡಿ" ಎಂದು ಕೂಗಿದರು. ನಾನು ಅತ್ತ ನೋಡಿದೆ. ಹೌದು! ಚಿಕ್ಕ ಹಕ್ಕಿಯೊಂದು ಹಾರುತ್ತಾ ಸಮುದ್ರದ ನೀಲಿಯಲ್ಲಿ ಲೀನವಾಯ್ತು. ಇಷ್ಟು ಪುಟ್ಟ ಹಕ್ಕಿ! ಈ ನಡೂ ಸಮುದ್ರದಲ್ಲಿ! ಅದು ಹೇಗೆ ಸಾಧ್ಯ? ಯೋಚಿಸಿದೆ. ತಟಕ್ಕನೆ ಹೊಳೆ ಯಿತು ಇದು ಹಕ್ಕಿಯಲ್ಲ. ಹಾರುವ ಮೀನು!

ಥಾರ್ ಹೈರ್ಡಾಲ್ ಪೆಸಿಫಿಕ್ ಮಹಾಸಾಗರವನ್ನು ಕೆಂಟುಕಿ ಎನ್ನುವ ಸಣ್ಣ ತೆಪ್ಪ ಒಂದರಲ್ಲಿ ದಾಟುತ್ತಾರೆ. ಆಗ ಎಷ್ಟೋ ಈ ಹಾರುವ ಮೀನುಗಳು ಹಾರಿಬಂದು ಇವರ ತೆಪ್ಪದ ಮೇಲೆ ಬೀಳುತ್ತಿದ್ದುವಂತೆ! ದಿನಾ ಬೆಳಗ್ಗೆ ಎದ್ದು ತೆಪ್ಪದ ಮೇಲೆ ಬಿದ್ದಿರುವ ನೂರಾರು ಹಾರುವ ಮೀನುಗಳನ್ನು ಆಯ್ದು ಅಡುಗೆ ಮನೆಗ ಸಾಗಿಸುವುದೇ ಅವರ ಮೊದಲ ಕೆಲಸವಾಗಿತ್ತಂತೆ. ಆದರೆ ನಮ್ಮ ನಾನ್‌ಕೌರಿ ಹಡಗಿನ ಡೆಕ್ಕು ಸಮುದ್ರ ಮಟ್ಟದಿಂದ ಸುಮಾರು 25 ಅಡಿಗೂ ಮಿಕ್ಕಿ ಎತ್ತರ ಇದ್ದುದರಿಂದ ಆ ಮೀನುಗಳೇನೂ ಹಡಗಿನೊಳಗೆ ಬೀಳುವ ಸಂಭವ ವಿರಲಿಲ್ಲ.

ನಾನು ಈ ಹಾರುವ ಮೀನುಗಳು ಗಾಳಿಯಲ್ಲಿ ಸುಮ್ಮನೆ ಒಂದೆರಡು ಮೂರು ಜಿಗಿದು ಬೀಳುತ್ತವೆ ಎಂದು ತಿಳಿದಿದ್ದೆ. ಆದರೆ ಅವು ಹಕ್ಕಿಗಳಂತೆಯೇ

This PDF was created using the Sonic PDF Creator.
To remove this watermark, please license this product at www.investintech.com

ರೆಕ್ಕೆ ಬಡಿಯುತ್ತಾ ಸುಮಾರು ಅರ್ಧಕಿಲೋಮೀಟರುಗಳ ದೂರದವರೆಗೂ ಹಾರುತ್ತಿದ್ದುದು ನಮಗೆ ಸೋಜಿಗದ ವಿಷಯವಾಗಿತ್ತು. ಈ ಮೀನುಗಳ ಕಿವುರಿನ ಪಕ್ಕ ಇರುವ ರೆಕ್ಕೆಗಳೇ ಗಾಳಿಯನ್ನು ಬಡಿಯಲು ಅಗಲವಾಗಿ ರೂಪುಗೊಂಡಿದ್ದವು. ಇನ್ನಾವುದಾದರೂ ದೊಡ್ಡ ಮೀನು ಇವುಗಳನ್ನು ಹಿಡಿಯಬಂದರೆ ಇವು ಗಗನಕ್ಕೆ ಜಿಗಿದು ಹಾರತೊಡಗುತ್ತಿದ್ದವು. ಇವುಗಳ ಹಾರುವ ವೈಖರಿಯನ್ನು ನೋಡಿ ಹೀಗೆ ಇವು ಹಾರಿ ಹಾರಿ ಒಂದು ದಿನ ಹೊಸ ಬಗೆಯ ಹಕ್ಕಿಗಳೇ ಆಗಿ ಬಿಡುತ್ತವೋ ಏನೋ ಎಂದು ಲೆಕ್ಕಹಾಕಿದೆ. ಕೆಲವೊಮ್ಮೆಯಂತೂ ಅಲೆಗಳ ನಡುವಿಂದ ಇವು ಗುಂಪು ಗುಂಪಾಗಿ ಚಿಮ್ಮಿ ದಿಕ್ಕಾಪಾಲಾಗಿ ಹಾರತೊಡಗುತ್ತಿದ್ದವು. ಹಡಗನ್ನು ಯಾವುದೋ ರಾಕ್ಷಸ ಪ್ರಾಣಿ ಹಿಡಿಯಬರುತ್ತಿದೆ ಎಂದು ಇವು ತಿಳಿಯುತ್ತಿದ್ದವೋ ಏನೋ? ಅವುಗಳಲ್ಲಿ ಒಂದಾದರೂ ನಮಗೆ ಹಿಡಿಯಸಿಕ್ಕಿದ್ದರೆ ಅವುಗಳ ರಚನೆಯನ್ನಾದರೂ ಚೆನ್ನಾಗಿ ನೋಡಬಹುದಿತ್ತು.

ಹಡಗಿನಲ್ಲಿ ನಮಗೆ ಈ ಹಾರುವ ಮೀನುಗಳನ್ನು ಬಿಟ್ಟರೆ ಮತ್ಯಾವ ಜೀವಿಗಳೂ ಸಮುದ್ರದಲ್ಲಿ ಕಾಣಲಿಲ್ಲ. ತಿಮಿಂಗಿಲಗಳನ್ನೇನಾದರೂ ನೋಡಿದ್ದೀರಾ? ಎಂದು ನ್ಯಾವಿಗೇಟರನ್ನು ಒಮ್ಮೆ ನಾನು ಕೇಳಿದೆ. ಅದಕ್ಕೆ ಆತ ಬಂಗಾಳ ಕೊಲ್ಲಿ ಸಮುದ್ರದಲ್ಲಿ ಅವು ಇಲ್ಲೆಂದು ಹೇಳಿದ. ಆದರೆ ಹಡಗಿನ ದೀಪದ ಬೆಳಕಿಗೆ ಒಮ್ಮೊಮ್ಮೆ ಶಾರ್ಕುಗಳು ಗುಂಪುಗುಂಪಾಗಿ ಆಕರ್ಷಿತವಾಗುತ್ತವೆ ಎಂದ.

ಅದನ್ನು ಕೇಳಿದ ಚಂದ್ರು ಒಂದು ದಿನ ರಾತ್ರಿ ಎಲ್ಲ ಸಮುದ್ರಕ್ಕೆ ಟಾರ್ಚ್ ಬಿಡುತ್ತಾ ಶಾರ್ಕುಗಳ ನಿರೀಕ್ಷಣೆಯಲ್ಲಿ ಕುಳಿತಿದ್ದರು. ಅವರ ಟಾರ್ಚಿನ ಬೆಳಕಿಗೆ ಆಕಸ್ಮಾತ್ತಾಗಿ ಯಾವುದಾದರೂ ಶಾರ್ಕುಗಳು ಬಂದರೂ ಅದು ಚಂದ್ರುಗೆ ಗೊತ್ತಾಗುತ್ತಿತ್ತೇ ಎನ್ನುವುದು ಸಂದೇಹ.

* * *

ನಮ್ಮ ಪ್ರಯಾಣದ ಮೂರನೆಯ ದಿನ ಬೆಳಿಗ್ಗೆ ಇದ್ದಕ್ಕಿದ್ದಂತೆ ಹಡಗು ಸಮುದ್ರದ ಮಧ್ಯದಲ್ಲಿ ನಿಂತು ಹೋಯ್ತು. ಏಕೆಂದು ಯಾರನ್ನೋ ಕೇಳಿದಾಗ ಹಡಗಿನ ಯಂತ್ರ ಕೆಟ್ಟುಹೋಗಿದೆ, ಅದನ್ನು ರಿಪೇರಿ ಮಾಡಿಕೊಂಡು ಮುಂದುವರಿಯಬೇಕು ಎಂದರು. ನಡು ಸಮುದ್ರದಲ್ಲಿ ಹಡಗಿನ ರಿಪೇರಿ ನನಗೆ ಆಶ್ಚರ್ಯಕರವಾಗಿ ಕಂಡಿತು.

ನಾವು ಕೆಳಗೆ ಕ್ಯಾಬಿನ್ನಿನಲ್ಲಿ ಕುಳಿತಿದ್ದಾಗ ಸ್ಪೀಕರಿನಲ್ಲಿ ಗಂಟೆ ಬಾರಿಸಲಾಯ್ತು. ಅನಂತರ ಕಂಟ್ರೋಲ್ ರೂಮಿನಿಂದ ಪ್ರಯಾಣಿಕರೆಲ್ಲ ತಮ್ಮ

This PDF was created using the Sonic PDF Creator.
To remove this watermark, please license this product at www.investintech.com

ಕ್ಯಾಬಿನ್ನಿನಲ್ಲಿರುವ ಲೈಫ್ ಜಾಕೆಟ್ಟನ್ನು ತೆಗೆದುಕೊಂಡು ಕೂಡಲೇ ಮೇಲಿನ ಮೂರನೆ ಡೆಕ್ಕಿಗೆ ಬರಬೇಕೆಂದು ಮನವಿ ಮಾಡಿಕೊಂಡರು. ಹಡಗು ಕೆಟ್ಟು ನಡು ಸಮುದ್ರದಲ್ಲಿ ನಿಂತಿರುವುದಕ್ಕೂ, ಇವರು ಲೈಫ್ ಜಾಕೆಟ್ ತಗೊಂಡು ಬರಲು ಹೇಳಿದುದಕ್ಕೂ ಸರಿಹೋಗಿ ನಾವೆಲ್ಲ ಒಂದು ಕ್ಷಣ ಗಾಬರಿಯಾದೆವು. ನಾವೆಲ್ಲ ನಮ್ಮ ಲೈಫ್ ಜಾಕೆಟ್‌ಗಳನ್ನು ತೆಗೆದುಕೊಂಡು ಈ ಹಡಗು ಇನ್ನೇನು ಮುಳುಗಲಿದೆ ಎನ್ನುವಂತೆ ಮೇಲಿನ ಡೆಕ್ಕಿಗೆ ಓಡಿದೆವು. ಹೋಗುತ್ತಾ ದಾರಿಯಲ್ಲಿ ಹಡಗಿನ ಸಿಬ್ಬಂದಿಗಳೆಲ್ಲಾ ಕಂಡರು. ಯಾರ ಮುಖದಲ್ಲೂ ಯಾವುದೇ ಬಗೆಯ ಚಿಂತೆ ಕಾತರಗಳು ಕಾಣಲಿಲ್ಲ. ಗೋಡೆಗೆ ಒರಗಿ ಹರಟೆ ಹೊಡೆಯುವವರು ಹೊಡೆಯುತ್ತಲೇ ಇದ್ದರು. ಕಸ ಗುಡಿಸುವವರು ಗುಡಿಸುತ್ತಲೇ ಇದ್ದರು.

ಮೇಲಿನ ಡೆಕ್ಕಿಗೆ ಹೋದಾಗ ಇದೊಂದು ಹಡಗಿನಲ್ಲಿ ಪ್ರತಿ ಟ್ರಿಪ್ಪಿಗೂ ನಡೆಯುವ ಕಾರ್ಯಕ್ರಮ ಎಂದು ತಿಳಿಯಿತು. ಹಡಗಿನ ಪ್ರಯಾಣಿಕರಿಗೆ ಅಪಘಾತಗಳ ಸಮಯದಲ್ಲಿ ಲೈಫ್ ಜಾಕೆಟ್ಟನ್ನು ಹೇಗೆ ಉಪಯೋಗಿಸಬೇಕೆಂದು ಮುಂಜಾಗ್ರತೆ ಕ್ರಮವಾಗಿ ಹೇಳಿಕೊಡಬೇಕಾದುದು ಅವರ ದಿನಚರಿಗಳಲ್ಲಿ ಒಂದು. ನಾವು ಅದೇ ಮೊದಲ ಬಾರಿಗೆ ಹಡಗಿನಲ್ಲಿ ಯಾನ ಮಾಡುತ್ತಿದ್ದ ಬೆಪ್ಪುಗಳಾದುದರಿಂದ ಸಮುದ್ರಕ್ಕೆ ಜಿಗಿಯಲು ಸಿದ್ಧರಾಗಿ ಲೈಫ್‌ಜಾಕೆಟ್ ತಗೊಂಡು ಓಡಿಹೋಗಿದ್ದೆವು. ಹಡಗಿನಲ್ಲಿ ಅನೇಕ ಬಾರಿ ಪ್ರಯಾಣ ಮಾಡಿದ್ದ ಇತರರು ಡೆಕ್ಕಿನ ಮೇಲಕ್ಕೂ ಸಹ ಬರಲಿಲ್ಲ.

ಶಾಂತ, ಉಷಾ ಇವರಿಗೆಲ್ಲಾ ಹಡಗಿನ ಕ್ಯಾಪ್ಟನ್ ಲೈಫ್‌ಜಾಕೆಟ್ ತೊಡಿಸಿ ಬೆಲ್ಟುಗಳನ್ನು ಬಿಗಿದು ಮೂಗು ಮುಚ್ಚಿಕೊಂಡು ಹೇಗೆ ಹಾರಬೇಕೆಂದು ವಿವರಿಸುತ್ತಿದ್ದರು. ಸ್ತ್ರೀ ಸದಸ್ಯರೆಲ್ಲ ನಸುನಗುತ್ತಾ ಕ್ಯಾಪ್ಟನ್ ಹೇಳಿದುದನ್ನು ಅಭಿನಯಿಸುತ್ತಿದ್ದರು. ಎಲ್ಲಾದರೂ ನಿಜವಾಗಿಯೂ ಸಮುದ್ರಕ್ಕೆ ನೆಗೆಯಬೇಕಾದ ಸಂದರ್ಭವಾಗಿದ್ದರೆ ಇದು! ಇವರ ಮುಖಗಳ ಅಭಿವ್ಯಕ್ತಿ ಹೇಗಿರುತ್ತಿತ್ತೆಂದು ಊಹಿಸಲೆತ್ನಿಸಿದೆ. ಆದರೆ ಈ ಹೆಂಗಸರು ಹೀಗೆ ನಸುನಗುತ್ತಲೇ ಹಾರಿಬಿಟ್ಟರೂ ಬಿಡಬಹುದು ಎಂದು ಅನುಮಾನ ಬಂತು.

ಡೆಕ್ಕಿನಿಂದ ಮೆಲ್ಲಗೆ ಕಳ್ಳನಂತೆ ಕೆಳಗಿಣುಕಿದೆ. ಕೆಳಗೆ ಸಹಸ್ರಾರು ಅಡಿ ಆಳದ ಸಮುದ್ರ ಕರಿನೀಲಿಯ ಕೈಗಳಿಂದ ಬಾ ಎಂದು ಕರೆದಂತಾಯ್ತು. ಕುತ್ತಿಗೆಯ ಸುತ್ತ ಸುತ್ತಿಕೊಂಡಿದ್ದ ಲೈಫ್ ಜಾಕೆಟ್ ಯಮಪಾಶದಂತೆ ಭಾಸವಾಯ್ತು. ಸಮುದ್ರಕ್ಕೆ ಹಾರುವ ವಿಷಯ ಮರೆಯಲು ಕ್ಯಾಪ್ಟನ್ ಜೊತೆ ಹಡಗಿನ

This PDF was created using the Sonic PDF Creator.
To remove this watermark, please license this product at www.investintech.com

ಯಂತ್ರಕ್ಕಾಗಿರುವ ತೊಂದರೆ ಮತ್ತು ಅದನ್ನು ಸರಿಮಾಡಲು ಹಿಡಿಯಬಹುದಾ ಸಮಯದ ಬಗ್ಗೆ ಗಂಭೀರ ಚರ್ಚೆ ಆರಂಭಿಸಿದೆ. ಮಾತೆಲ್ಲ ಮುಗಿದ ಮೇ ಕೊನೆಯದಾಗಿ ಲೈಫ್‌ಜಾಕೆಟ್ಟನ್ನು ತೋರಿಸಿ "ನಿಮ್ಮ ಇಷ್ಟು ದಿನದ ಸರ್ವೀಸಿನಲ್ ಎಂದಾದರೂ ನಿಮಗೆ ಇದನ್ನು ಉಪಯೋಗಿಸಬೇಕಾದ ಸಂದರ್ಭ ಬಂದಿದೆಯೆ? ಎಂದು ಕೇಳಿದೆ.

"ಇಲ್ಲ. ನಾನು ಅದೃಷ್ಟವಂತ. ಒಮ್ಮೆಯೂ ಇಲ್ಲ" ಎಂದ ಉತ್ತರಿಸಿದರು.

ಆದರೂ ನನಗೆ ನನ್ನ ಕ್ಯಾಬಿನ್ನಿನಲ್ಲಿ ಇದ್ದ ಲೈಫ್‌ಜಾಕೆಟ್ಟನ್ನು ನೋಡಿದಾಗಲ್ಲ ಕರಿ ನೀಲಿಯ ಸಮುದ್ರದ ಕರೆ ಕೇಳಿದಂತಾಗುತ್ತಿತ್ತು.

This PDF was created using the Sonic PDF Creator.
To remove this watermark, please license this product at www.investintech.com



# 5. ಪೋರ್ಟ್‌ಬ್ಲೇರ್

ನಾನ್‌ಕೌರಿ ಫಕ್ಕನೆ ರಿಪೇರಿಯಾಗುವ ಹಾಗೆ ಕಾಣಲಿಲ್ಲ. ಹಡಗು ಸಮುದ್ರದ ಮಧ್ಯೆ ನಿಂತಿದ್ದರಿಂದ ಹಡಗಿನಿಂದಲೇ ಗಾಳ ಹಾಕಿ ಸಮುದ್ರದ ಮಧ್ಯೆ ನಮಗೆ ಪದೇ ಪದೇ ಕಾಣುತ್ತಿದ್ದ ಹಾರುವ ಮೀನುಗಳಾದರೂ ಸಿಕ್ಕುತ್ತವೆಯೆ ನೋಡೋಣ ಎಂದು ನಾನು ಹೇಳಿದೆ. ಚಂದ್ರು ಹೋಗಿ ಹಡಗಿನ ಸಿಬ್ಬಂದಿಯ ಒಪ್ಪಿಗೆ ಕೇಳಿಬಂದರು. ಅವರು ಗಾಳ ಹಾಕಲು ನಮ್ಮದೇನೂ ಅಭ್ಯಂತರವಿಲ್ಲ. ಆದರೆ ನಿಮ್ಮ ದಾರಗಳು, ಗಾಳ ಇವೆಲ್ಲ ಹಡಗಿನ ಹಿಂಭಾಗದಲ್ಲಿರುವ ಪ್ರೊಪೆಲ್ಲರಿಗೆ ಸಿಕ್ಕಿಕೊಳ್ಳದಂತೆ ಜಾಗ್ರತೆ ವಹಿಸಬೇಕು ಎಂದು ಎಚ್ಚರಿಕೆ ಹೇಳಿದರು.

ನಾನು, ರಾಮದಾಸ್, ಚಂದ್ರು ಮೂರು ಜನವೂ ನಮ್ಮ ರಾಡು ಮತ್ತು ರೀಲುಗಳನ್ನು ಹಿಡಿದು ಹಡಗಿನ ಹಿಂಭಾಗದ ತುಟ್ಟತುದಿಗೆ ಹೋದೆವು. ಅಲೆಗಳ ಏರಿಳಿತಕ್ಕೆ ಹಡಗು ಅಲ್ಲಿ ವಿಚಿತ್ರವಾಗಿ ಆಡುತ್ತಿತ್ತು. ಇದ್ದಕ್ಕಿದಂತೆ ಕಾಲು ಕುಸಿದೇ ಹೋದಂತೆ ಹಡಗು ಕೆಳಗಿಳಿಯುತ್ತಿತ್ತು. ಮತ್ತೆ ಸರ್ರನೆ ಮೇಲೆತ್ತು

This PDF was created using the Sonic PDF Creator.
To remove this watermark, please license this product at www.investintech.com

ತ್ತಿತ್ತು. ಕೊಂಚ ಹೊತ್ತಿನೊಳಗೆ ಮಲ್ಲಿಕ್ ಇಲ್ಲಿ ನನಗೆ ಹೊಟ್ಟೆ ತೊಳೆಸಿ ತಲೆ ತಿರುಗುವಂತಾಗುತ್ತಿದೆ ಎಂದು ಹೇಳಿ ಕ್ಯಾಬಿನ್ನಿಗೆ ಹೋದರು.

ನಮ್ಮ ಗಾಳಗಳಿಗೆ ಯಾವ ಮೀನೂ ಮೂಸಿ ಸಹ ನೋಡಲಿಲ್ಲ. ಮಧ್ಯ ಸಮುದ್ರದಲ್ಲಿ ಮೀನುಗಳಿರುವುದೇ ಕಡಿಮೆಯೋ ಏನೋ! ನಾನು ಮೀನು ಹಿಡಿಯುವ ಪ್ರಯತ್ನ ಕೈಬಿಟ್ಟು ಇಲ್ಲಿ ಸಮುದ್ರ ಎಷ್ಟು ಆಳ ಇದೆ ಎನ್ನುವುದನ್ನಾದರೂ ನೋಡೋಣ ಎಂದು ನನ್ನ ಲೈನಿಗೆ ತುಂಬ ತೂಕದ ಒಂದು ಸ್ಪಿನ್ನರ್ ಕಟ್ಟಿ ಇನ್ನಷ್ಟು ಸೀಸದ ತೂಕ ಹಾಕಿ ಎಸೆದೆ. ಮೊದಲು ಸ್ಪಿನ್ನರ್ ಕೊಂಚ ಆಳಕ್ಕೆ ಮುಳುಗಿತು. ಆದರೆ ಆನಂತರ ಮುಳುಗುವುದರ ಬದಲು ನದಿಯ ಪ್ರವಾಹದಲ್ಲಿ ಕೊಚ್ಚುವಂತೆ ಹಡಗಿನ ಬಲಕ್ಕೆ ಕೊಚ್ಚಿಕೊಂಡು ಹೋಗತೊಡಗಿತು.

ಸಮುದ್ರದಲ್ಲಿ ಅಂತರ್ಗಾಮಿ ಪ್ರವಾಹಗಳ ಬಗ್ಗೆ ನಾವು ಭೂಗೋಳ ಪಾಠಗಳಲ್ಲಿ ಓದಿದ್ದೆವು. ಅಟ್ಲಾಂಟಿಕ್ ಮಹಾಸಾಗರದಲ್ಲಿ ಗಲ್ಫ್‌ಸ್ಟ್ರೀಂ ಎನ್ನುವ ಬಿಸಿನೀರಿನ ಪ್ರವಾಹ ಇಂಗ್ಲೆಂಡಿನಿಂದ ಐಸ್‌ಲ್ಯಾಂಡ್ ಮುಖಾಂತರ ಕೆನಡಾದ ಸರ್ಗೋಸಾ ಸಮುದ್ರದ ಕಡೆಗೆ ಹರಿಯುವುದು, ಹಂಬೋಲ್ಟ್ ಎನ್ನುವ ತಣ್ಣೀರಿನ ಪ್ರವಾಹ ಮಧ್ಯ ಪೆಸಿಫಿಕ್ ಮುಖಾಂತರ ಚಿಲಿ ದೇಶದ ಕಡೆಗೆ ಹರಿಯುವುದನ್ನೂ ತಿಳಿದಿದ್ದೆ. ಆದರೆ ಈ ಸಮುದ್ರದ ಪ್ರವಾಹಗಳು ರಭಸವಾಗಿ ಹರಿಯುವ ನದಿಯ ಪ್ರವಾಹದಷ್ಟು ವೇಗವಾಗಿ ಇರುತ್ತದೆಂದು ಊಹಿಸಿರಲಿಲ್ಲ. ನಮ್ಮ ಸೀಸದ ತೂಕ ಹಾಕಿದ್ದ ಸ್ಪಿನ್ನರ್ ಗರಗರ ತಿರುಗುತ್ತಾ ತರಗೆಲೆಯಂತೆ ಕೊಚ್ಚಿ ಹೋಗತೊಡಗಿತು.

ಅಂಡಮಾನಿನ ಬಾರಾಟಾಂಗ್ ಎನ್ನುವಲ್ಲಿಯೂ ನಾವು ಇದೇ ವಿದ್ಯಮಾನವನ್ನು ಗಮನಿಸಿದ್ದೆವು. ಸಮುದ್ರ ನದಿಯಂತೆ ಕೊಲ್ಲಿಗಳಲ್ಲಿ ಹರಿಯುತ್ತಿರುವುದನ್ನು ಕಂಡಿದ್ದೆವು. ಎಂದರೆ ಸಮುದ್ರ ಒಂದು ತೊಟ್ಟಿಯಲ್ಲಿ ಹಿಡಿದಿಟ್ಟ ನೀರಿನಂತೆ ನಿಶ್ಚಲವಾಗೇನೂ ಇಲ್ಲವೆನ್ನುವುದನ್ನು ಪ್ರತ್ಯಕ್ಷ ಅನುಭವದಿಂದ ತಿಳಿದೆವು.

ಸಮುದ್ರದ ಈ ಅಂತರ್ಗಾಮಿ ಪ್ರವಾಹಗಳಿಗೆ ಭೂಮಿಯ ಪರಿಭ್ರಮಣ ಮತ್ತು ಭೂಮಿ ಹಾಗೂ ಚಂದ್ರನ ಗುರುತ್ವಾಕರ್ಷಣ ಶಕ್ತಿ ಕಾರಣ ಎನ್ನುತ್ತಾರೆ. ಈ ಅಂತರ್ಗಾಮಿ ಪ್ರವಾಹಗಳೇ ಗಾಳಿಯ ಚಲನೆಯನ್ನೂ ನಿಶ್ಚಿತ ದಿಕ್ಕಿನಲ್ಲಿ ಪ್ರಚೋದಿಸಿ ಮಳೆಯ ಮಾರುತಗಳಿಗೂ ಋತುಮಾನದ ಬದಲಾವಣೆಗಳಿಗೂ ಕಾರಣವಾಗುತ್ತವೆ.

This PDF was created using the Sonic PDF Creator.
To remove this watermark, please license this product at www.investintech.com

ಪೆಸಿಫಿಕ್ ಮಹಾಸಾಗರದ ಹಂಬೋಲ್ಟ್ ತಣ್ಣೀರಿನ ಪ್ರವಾಹ ಒಮ್ಮೊಮ್ಮೆ ದಿಕ್ಕು ಬದಲಿಸಿದಾಗ ಅಕ್ಕಪಕ್ಕದ ದೇಶಗಳ ಹವಾಮಾನದ ಮೇಲೆ ತೀವ್ರ ಪರಿಣಾಮ ಬೀರುವುದುಂಟು. ಸಾಧಾರಣವಾಗಿ ಮಳೆ ಇಲ್ಲದೆ ಮರುಭೂಮಿಯಂತಿರುವ ಚಿಲಿ ದೇಶದ ಮೇಲೆ ಮಳೆ ಬೀಳತೊಡಗುತ್ತದೆ. ಇಡೀ ಮರಳುಗಾಡು ಹಸುರಾಗಿ ಹೂ ಬಿಡುತ್ತದೆ. ಆದರೆ ಚಿಲಿದೇಶದ ಮುಖ್ಯ ಉದ್ಯೋಗವಾದ ಮೀನುಗಾರಿಕೆಗೆ ಹೊಡೆತ ಬೀಳುತ್ತದೆ. ಸಾಗರದಲ್ಲಿ ಮೀನಿನ ಕ್ಷಾಮ ತಲೆದೋರುತ್ತದೆ. ಇದೇರೀತಿ ಆಸ್ಟ್ರೇಲಿಯಾದಲ್ಲೂ ಋತುಮಾನಗಳ ಮೇಲೆ ಇದು ಪ್ರಭಾವ ಬೀರಿ ಧೂಳಿನ ಬಿರುಗಾಳಿಗಳನ್ನೇಳಿಸುತ್ತದೆ. ಮಳೆ ಸಕಾಲಕ್ಕೆ ಬರುವುದಿಲ್ಲ.

ಈ ವಿದ್ಯಮಾನಗಳನ್ನು ಪುಸ್ತಕದಲ್ಲಿ ಓದಿ ತಿಳಿದಿದ್ದೆ. ಬಂಗಾಳ ಸಮುದ್ರದ ಪ್ರವಾಹ ನನ್ನ ಕೈಯಲ್ಲಿನ ನೈಲಾನ್ ಮಾನೋ ಲೈನನ್ನು ಜಗ್ಗುವಾಗ ಅದರ ಸಾಕ್ಷಾತ್ ಅನುಭವವಾಯ್ತು.

ಇದ್ದಕ್ಕಿದ್ದಂತೆ ಏಂಥದೋ ಧಿಕ್ಕನೆ ನನ್ನ ಗಾಣಕ್ಕೆ ಹೊಡೆದಂತಾಗಿ ನನ್ನ ದಾರ ಇನ್ನೂ ಬಲವಾಗಿ ಜಗ್ಗತೊಡಗಿತು. ನನ್ನ ರಕ್ತ ವೇಗವಾಗಿ ಚಲಿಸತೊಡಗಿತು. ಯಾವುದೋ ಮೀನು ಸ್ಪಿನ್ನರಿಗೆ ಸಿಕ್ಕಿಕೊಂಡಿದೆ ಎಂದು ಊಹಿಸಿದೆ. ನನ್ನ ಕೈಯಲ್ಲಿನ ರಾಡು ಅದರ ಭಾರಕ್ಕೆ ಬಿಲ್ಲಿನಂತೆ ಬಗ್ಗತೊಡಗಿತು. ಅದನ್ನು ನೋಡಿ ನನ್ನ ಪಕ್ಕ ನಿಂತಿದ್ದ ಬಸವರಾಜು ಸಹ ಹಾಗೇ ಭಾವಿಸಿದರು. ಸಮುದ್ರದಿಂದ ಸುಮಾರು ಮೂವತ್ತು ಅಡಿ ಎತ್ತರದಲ್ಲಿದ್ದ ಡೆಕ್ಕಿಗೆ ಆ ಮೀನನ್ನು ಎತ್ತುವುದಾದರೂ ಹೇಗೆ? ನಮ್ಮ ದಾರಗಳೆಂತೂ ತುಂಡಾಗುತ್ತವೆ? ಏನಾದರಾಗಲಿ, ಕೊನೆಯಪಕ್ಷ ಅದ್ಯಾವ ಮೀನೆಂದು ಕಣ್ಣಿನಲ್ಲಾದರೂ ನೋಡೋಣೆಂದು ದಾರ ಸುತ್ತಿಕೊಳ್ಳತೊಡಗಿದೆ. ನನ್ನ ಪಕ್ಕ ಇದ್ದವರೆಲ್ಲ ಇನ್ನೇನು ಮೇಲೆ ಬಂದು ಮುಖತೋರಿಸಲಿರುವ ಮೀನನ್ನು ನೋಡಲು ಕಾತರರಾಗಿ ಕಾಯತೊಡಗಿದರು.

ಆದರೆ ನಾವೆಲ್ಲ ಮೂರ್ಖರಾಗುವಂತೆ ಏಂಥದೋ ಕಸ ಮೇಲೆದ್ದಿತು. ನಾನು ಸಮುದ್ರದ ಪಾಚಿ ಎಂದು ತಿಳಿದೆ. ಆದರೆ ಅದನ್ನು ಡೆಕ್ಕಿನ ಮೇಲೆ ಎಳೆದುಕೊಂಡಾಗ ಅದು ಬಟ್ಟೆಯ ವೇಸ್ಟು ಎಂದು ಗೊತ್ತಾಯ್ತು. ಹಡಗಿನ ಎಂಜಿನ್ ರಿಪೇರಿ ಮಾಡುತ್ತಿದ್ದವರು ಗಲೀಜಾದ ವೇಸ್ಟನ್ನು ತೆಗೆದು ಸಮುದ್ರಕ್ಕೆ ಎಸೆದಿದ್ದರು. ಅದು ಮುಳುಗಿದರೂ ಒಳಗಿನ ಪ್ರವಾಹಕ್ಕೆ ಸಿಕ್ಕು ಕೊಚ್ಚಿಕೊಂಡು ಬಂದು ನನ್ನ ಸ್ಪಿನ್ನರಿಗೆ ಸಿಕ್ಕಿಕೊಂಡಿತ್ತು. ಹೇಗೆ ಸುತ್ತಿಕೊಂಡಿತ್ತೆಂದರೆ ಅದನ್ನು ಬಿಡಿಸಿ ಮತ್ತೆ ಸಮುದ್ರಕ್ಕೆ ಎಸೆಯಲು ನನಗೆ ಒಂದುಗಂಟೆ ಬೇಕಾಯ್ತು. ಮೈಕೈ

This PDF was created using the Sonic PDF Creator.
To remove this watermark, please license this product at www.investintech.com

ಎಲ್ಲಾ ಗ್ರೀಸು ಮೆತ್ತಿಕೊಂಡಿತು. ಈ ಗೋಳಿನಿಂದ ಬೇಸತ್ತ ನಾನು ಇನ್ನು ಮಾತ್ರ ಡೆಕ್ಕಿನ ಮೇಲಿಂದ ಗಾಳ ಹಾಕುವುದಿಲ್ಲೆಂದು ನಿರ್ಧರಿಸಿ ನನ್ನ ರಾಡು ರೀಲು ಗಳನ್ನು ಮಡಚಿಕೊಂಡು ಕ್ಯಾಬಿನ್ನಿಗೆ ಹೋದೆ.

*  *  *

ಊಟ, ತಿಂಡಿ, ಟೇಬಲ್ ಟೆನ್ನಿಸ್ ಟೂರ್ನಮೆಂಟು, ಸಿನೆಮಾ, ಸಾಯಂಕಾಲದ ಗ್ಯಾಂಬ್ಲಿಂಗು ಈ ಮನರಂಜನೆಗಳಲ್ಲಿ ಕಾಲ ಸರಿಯತೊಡಗಿತು.

ದೊಡ್ಡ ಫ್ಯಾಕ್ಟರಿಯಂತೆ ಕಾಣುತ್ತಿದ್ದ ಹಡಗಿನ ಎಂಜಿನ್ ರೂಮಿಗೆ ಹೋಗಿ ಬಂದೆವು. ಸಮುದ್ರದ ಮಟ್ಟದಿಂದ ಕೆಳಗಿದ್ದ ಈ ರೂಮಿನಲ್ಲಿ ಅಸಾಧ್ಯ ಸೆಖೆ ಇತ್ತು. ಯಂತ್ರದ ಸದ್ದಿಗೆ ಕಿರುಚಿ ಕಿರುಚಿ ಮಾತಾಡಬೇಕಿತ್ತು. ಹಡಗಿನ ಎಂಜಿನಿಯರ್ "ಇದು ತುಂಬಾ ಹಳೆಯ ಯಂತ್ರದ ಮಾದರಿ. ಈಗಿನ ಆಧುನಿಕ ಹಡಗುಗಳ ಯಂತ್ರದ ಕೋಣೆಗಳು ಯಾವುವೂ ಹೀಗಿರುವುದಿಲ್ಲ" ಎಂದರು.

ನ್ಯಾವಿಗೇಟರ್ ರೂಮಿಗೆ ಹೋಗಿ ರೇಡಾರ್ ಉಪಕರಣಗಳನ್ನೂ, ಹಡಗು ನಡೆಸುವ ವಿಧಾನವನ್ನೂ ತಿಳಿದೆವು. ನಾಲ್ಕನೆಯ ದಿನ ನ್ಯಾವಿಗೇಟರ್ ಹೇಳಿದ "ನಾಳೆದಿನ ಬೆಳಿಗ್ಗೆ ಬಹುಶಃ ನಾವು ಅಂಡಮಾನಿನ ಪೋರ್ಟ್‌ಬ್ಲೇರ್ ತಲುಪುತ್ತೇವೆ" ಎಂದು.

ನಮಗೆಲ್ಲಾ ನಾಲ್ಕು ದಿನದ ತರುವಾಯ ಮತ್ತೆ ನೆಲ ನೋಡುತ್ತೇವೆಂದು ರೋಮಾಂಚನವಾಯ್ತು.

ಬೆಳಿಗ್ಗೆ ಕಣ್ಣುಬಿಟ್ಟಾಗ ಹಡಗು ನಿಂತಿರುವುದು ನಮ್ಮ ಗಮನಕ್ಕೆ ಬಂತು. ಪೋರ್ಟ್‌ಬ್ಲೇರಿನಲ್ಲಿ ನಿಂತೇ ಬಿಟ್ಟಿದೆ ಎಂದು ತಿಳಿದು ಕ್ಯಾಬಿನ್ನಿನ ಕಿಟಕಿಯಿಂದ ಇಣುಕಿ ನೋಡಿದೆ. ನೀಲಸಮುದ್ರವಲ್ಲದೆ ಮತ್ತೇನೂ ಕಾಣಲಿಲ್ಲ. ಮತ್ತೆ ಹಡಗು ಕೆಟ್ಟು ನಿಂತಿರಬೇಕೆಂದು ಮಾತಾಡಿಕೊಳ್ಳುತ್ತ ಹಡಗಿನ ಡೆಕ್ ಮೇಲೆ ಹತ್ತಿದೆವು. ಅಲ್ಲಿ ಚಂದ್ರು ಬಸವರಾಜ್ ಇಬ್ಬರೂ ಬೈನಾಕ್ಯೂಲರಿನಲ್ಲಿ ದೂರ ದಿಗಂತಗಳನ್ನು ನೋಡುತ್ತಾ ಇದ್ದರು. ನನ್ನ ಕಡೆ ನೋಡಿ "ಅಂಡಮಾನ್ ಪರ್ವತಗಳು ಕಾಣ್ತಾ ಇದೆ" ಎಂದು ಹೇಳುತ್ತ ಚಂದ್ರು ದೂರದರ್ಶಕ ನನ್ನ ಕೈಗಿತ್ತರು. ದೂರದಲ್ಲಿ ಹಸಿರು ಹೊದಿಸಿದ ಅಂಡಮಾನ್ ಪರ್ವತಶ್ರೇಣಿಗಳು ಅದರಲ್ಲಿ ನನಗೆ ಕಂಡವು.

ಹಡಗಿನ ಅಧಿಕಾರಿಗಳು "ನಮಗೆ ಬಂದರಿಗೆ ಹೋಗಲು ಕ್ಲಿಯರೆನ್ಸ್ ಸಿಕ್ಕಿಲ್ಲ. ಹಾರ್ಬರ್ ಪೈಲಟ್ಟಿಗೆ ಕಾಯುತ್ತಾ ಇದ್ದೇವೆ" ಎಂದು ಹೇಳಿದರು.

This PDF was created using the Sonic PDF Creator.
To remove this watermark, please license this product at www.investintech.com

ಅಂಡಮಾನ್ ದ್ವೀಪಗಳನ್ನು ನೋಡುವ ತವಕದಿಂದ ನಾವು ಹಡಗಿನ ಡೆಕ್ ಸುತ್ತ ಸುತ್ತುತ್ತಾ ದೂರದರ್ಶಕದಲ್ಲಿ ನೋಡತೊಡಗಿದೆವು.

*   *   *

ಅಂಡಮಾನ್ ಅಧಿಕಾರಿಗಳಿಂದ ಕ್ಲಿಯರೆನ್ಸ್ ಕಾಯುತ್ತಾ ಡೆಕ್ಕಿನ ಕುರ್ಚಿಯಲ್ಲಿ ಕುಳಿತಿರಬೇಕಾದರೆ ಮೀನೂ ಸರ್ಕಾರಿಯಾ ಬರುತ್ತಿರುವುದು ಕಂಡಿತು. ಅಂಡಮಾನಿನಲ್ಲಿ ಇಳಿಯಲು ಟೈಸೂಟ್ ಇತ್ಯಾದಿಗಳನ್ನು ಧರಿಸಿ ಟ್ರಿಂಮ್ಮಾಗಿದ್ದ ಆತ ನಮ್ಮನ್ನು ನೋಡಿ ಹಲೋ ಎಂದರು. ನಮ್ಮೊಡನೆ ಸಹಪ್ರಯಾಣಿಕರಾಗಿದ್ದ ಸರ್ಕಾರಿಯಾ ಯಾರೊಡನೆಯೂ ಹೆಚ್ಚು ಮಾತಾಡಿದ್ದನ್ನು ನೋಡಿರಲಿಲ್ಲ. ಗಂಭೀರವಾಗಿ ಊಟದ ಟೇಬಲ್ಲಿಗೆ ಬಂದು ಕುಳಿತು ಊಟ ಮಾಡಿದ್ದನ್ನು ಮಾತ್ರ ನೋಡಿದ್ದೆ. ಒಮ್ಮೆ ಮಾತ್ರ ತಾನು ಊಟಿ, ಕೂನೂರು, ಚಿಕ್ಕಮಗಳೂರುಗಳನ್ನು ನೋಡಿದ್ದೇನೆಂದೂ, ಅಲ್ಲಿ ಕಾಫಿ ಪ್ಲಾಂಟೇಶನ್ನಿನಲ್ಲಿ ಹಿಂದೆ ಮೇನೇಜರ್ ಆಗಿ ಕೆಲಸ ಮಾಡಿದ್ದೇನೆಂದೂ ಹೇಳಿದ್ದರು. ಅಷ್ಟಲ್ಲದೆ ಆತನ ಬಗ್ಗೆ ಹೆಚ್ಚಿಗೆ ಏನೂ ನಮಗೆ ತಿಳಿದಿರಲಿಲ್ಲ.

ಅವತ್ತು ಡೆಕ್ಕಿನ ಮೇಲೆ ಸರ್ಕಾರಿಯಾ ಕೊಂಚ ಗೆಲುವಾಗಿ ಮಾತಾಡುವ ಮೂಡಿನಲ್ಲಿರುವಂತೆ ಕಂಡಿತು.

"ಹಲೋ ಪೋರ್ಟ್‌ಬ್ಲೇರ್ ಬಂತಲ್ಲ!" ಎಂದೆ.

"ಹೌದು" ಎಂದರು

"ನೀವು ಇದೇ ಮೊದಲ ಬಾರಿ ಬರುತ್ತಿದ್ದೀರಾ?"

"ಇಲ್ಲ ಅನೇಕಸಾರಿ ಬಂದಿದ್ದೇನೆ. ನನ್ನ ಮಗ ಇಲ್ಲೇ ಇದ್ದಾನೆ!"

"ಏನು? ಅಂಡಮಾನಿನಲ್ಲೇ ಇದ್ದಾರೆಯೇ? ಏನು ಕೆಲಸದಲ್ಲಿ ಇದ್ದಾರೆ" ಎಂದು ಕೇಳಿದೆ.

"ಅದೊಂದು ವಿಚಿತ್ರವಾದ ಕತೆ. ನಾವು ಅವನ ಆಸೆಯನ್ನೇ ಬಿಟ್ಟಿದ್ದೆವು. ನಾನು ಬೊಂಬಾಯಿಯಲ್ಲಿ ಇದ್ದೇನೆ, ಅಲ್ಲಿ ಆತ ನಮ್ಮೊಡನೆ ಇದ್ದಾಗ ಅವನಿಗೆ ಒಂದು ವಿಚಿತ್ರವಾದ ಖಾಯಿಲೆ ಶುರುವಾಯ್ತು. ಶ್ವಾಸಕೋಶದಲ್ಲಿ ನೀರು ತುಂಬಿಕೊಳ್ಳಲು ಆರಂಭವಾಯ್ತು. ಇದನ್ನು ಡಾಕ್ಟರುಗಳೆಲ್ಲ ಪ್ಲೂರೆಸಿ ಎಂದು ಗುರುತಿಸಿ ಅವನಿಗೆ ಔಷಧೋಪಚಾರ ಮಾಡಿದರು. ಆದರೆ ಅವುಗಳಿಂದೆಲ್ಲ ಅವನಿಗೆ ದಿನದಿನಕ್ಕೂ ಕಾಯಿಲೆ ಉಲ್ಬಣವಾಯ್ತೇ ಹೊರತು ವಾಸಿಯಾಗಲಿಲ್ಲ.

This PDF was created using the Sonic PDF Creator.
To remove this watermark, please license this product at www.investintech.com

ಕೊನೆಗೆ ಡಾಕ್ಟರುಗಳು ಅವನು ಬದುಕುವುದಿಲ್ಲೆಂದು ಹೇಳಿಬಿಟ್ಟರು. ನಮಗೆ ಅವನೊಬ್ಬನೇ ಮಗ. ಅವನನ್ನು ಉಳಿಸಲು ಏನು ಬೇಕಾದರೂ ಮಾಡಲು ನಾವು ತಯಾರಿದ್ದೆವು. ಡಾಕ್ಟರುಗಳು ಹಾಗೆ ಹೇಳಿ ಅವನ ಆಸೆ ತೊರೆದಾಗ ನಮಗೆ ದಿಕ್ಕೇ ತೋರಲಿಲ್ಲ.

ಅವನು ಮರಣಶಯ್ಯೆಯಲ್ಲಿ ಉಸಿರಾಡಲು ತಹ ತಹ ಪಡುತ್ತಿದ್ದಾಗ ಯಾರೋ ಒಬ್ಬರು ನಮ್ಮ ಹಿತೈಷಿಗಳು ಈತನನ್ನು ಅಂಡಮಾನಿಗೆ ಕರೆದೊಯ್ಯಿರಿ, ಅಲ್ಲಿನ ಕಾಡಿನ ಗಾಳಿ ಇವನಿಗೆ ಹಿಡಿಸಬಹುದು ಎಂದರು. ಇನ್ನೇನು ಸಾಯಲಿದ್ದ ಆತನನ್ನು ತುಂಬಾ ಕಷ್ಟಪಟ್ಟು ಅಂಡಮಾನಿಗೆ ಸಾಗಿಸಿದೆವು. ಭಗವಂತನ ಲೀಲೆ ಏನೆಂದು ಹೇಳೋಣ! ಅಂಡಮಾನಿಗೆ ಕರೆತಂದ ನಾಲ್ಕೇ ದಿನದಲ್ಲಿ ಆತನ ಕಾಯಿಲೆ ವಾಸಿಯಾಗತೊಡಗಿತು. ತಿಂಗಳೊಳಗಾಗಿ ಯಾವ ಔಷಧವೂ ಇಲ್ಲದೇ ಆತ ಸಂಪೂರ್ಣ ಗುಣವಾದ. ಅಂಡಮಾನ್ ದ್ವೀಪಗಳು ಆತನಿಗೆ ಎಷ್ಟೊಂದು ಒಗ್ಗಿತೆಂದರೆ ಆತ ಮರಳಿ ಭಾರತಕ್ಕೆ ಬರುವುದಿಲ್ಲೆಂದು ಹೇಳಿ ಇಲ್ಲೆ ಉಳಿದು ಬಿಟ್ಟ. ಎಲ್ಲಾದರೂ ಇರಲಿ, ಒಟ್ಟಿನಲ್ಲಿ ಕ್ಷೇಮವಾಗಿ ಆತ ಇದ್ದರೆ ಸಾಕೆಂದು ನಾವೂ ಸಮ್ಮತಿಸಿದೆವು. ಈಗ ಇಲ್ಲೆ ಬಾಡಿಗೆ ದೋಣಿಗಳನ್ನಿಟ್ಟುಕೊಂಡು ಮೀನುಗಾರಿಕೆ ಮಾಡುತ್ತಾ ಆತ ಜೀವನ ಮಾಡುತ್ತಿದ್ದಾನೆ.

ನಾವೂ ಸಹ ನಮ್ಮ ವ್ಯವಹಾರಗಳನ್ನೆಲ್ಲ ಪೂರೈಸಿ ಆನಂತರ ಇಲ್ಲಿಗೇ ಬಂದು ನೆಲೆಸಲು ಉದ್ದೇಶಿಸಿದ್ದೇವೆ. ಈಗ ಸದ್ಯಕ್ಕೆ ಅವನನ್ನು ನೋಡಲು ನಾನು ಆಗಾಗ ಬರುತ್ತೇನೆ'' ಎಂದು ತಮ್ಮ ಕತೆ ಹೇಳಿದರು. ಅಂಡಮಾನಿನ ಬಗ್ಗೆ ಆತನಿಗೆ ತುಂಬಾ ಕೃತಜ್ಞತೆ ಇತ್ತೆಂದು ಆತನ ಮಾತಿನಲ್ಲಿ ನಮಗೆ ಅನ್ನಿಸಿತು.

ಅಂಡಮಾನಿನ ಅದ್ಭುತ ಹವೆಯ ಬಗ್ಗೆ ಸರ್ಕಾರಿಯಾ ಅವರಾಡಿದ ಮಾತಿನಿಂದ ನಮಗೆಲ್ಲಾ ತುಂಬಾ ಖುಷಿಯಾಯ್ತು. ಅಂಡಮಾನ್ ಪರ್ವತಗಳತ್ತಣಿಂದ ಬೀಸುತ್ತಿದ್ದ ಟಾನಿಕ್ ಗಾಳಿಯನ್ನು ಬುಸ್ ಬುಸ್ ಎಂದು ಹೆಬ್ಬಾವಿನಂತೆ ಎಳೆದುಕೊಂಡು ತಲೆದೂಗಿದೆವು.

ಸರ್ಕಾರಿಯಾ ಅಂಡಮಾನಿನಲ್ಲಿ ನೋಡಬೇಕಾದ ಸ್ಥಳಗಳ ಬಗ್ಗೆ, ಅಂಡಮಾನಿನ ಕಾಡುಜನರ ಬಗ್ಗೆ, ಅಂಡಮಾನಿನ ಊರು ಜನರ ಬಗ್ಗೆ, ಜೀವನ ಕ್ರಮದ ಬಗ್ಗೆ ಸಾಕಷ್ಟು ಕೊರೆದರು.

“ಅಂಡಮಾನಿನ ಕಾದಿಟ್ಟ ಪ್ರದೇಶಗಳಲ್ಲಿರುವ ಝರವಾ, ಓಂಗೇ, ಸೆಂಟಿನಲ್ ಕಾಡುಜನರನ್ನು ನೋಡಲು ಅಲ್ಲಿಗೆ ಯಾರೂ ಹೋಗದಂತೆ ಸರ್ಕಾರ

This PDF was created using the Sonic PDF Creator.
To remove this watermark, please license this product at www.investintech.com

ಪ್ರತಿಬಂಧಿಸಿದೆ. ಆದರೆ ನಿಕೋಬಾರ್‌ನಲ್ಲಿಯ ಕಾಡು ಜನರು ಮಾತ್ರ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿ ಸಂಪೂರ್ಣ ನಾಗರೀಕರಾಗಿದ್ದಾರೆ. ಅವರನ್ನು ಈಗ ಆದಿವಾಸಿಗಳೆಂದು ಗುರುತಿಸಲೂ ಸಾಧ್ಯವಿಲ್ಲ. ಆದರೆ ಮಿಕ್ಕ ಕಾಡುಜನರು ನಾಗರೀಕ ಜಗತ್ತಿನ ಮನುಷ್ಯರ ಬಗ್ಗೆ ತುಂಬಾ ಅಸಹನೆಯಿಂದ ನಡೆದುಕೊಳ್ಳುತ್ತಾರೆ. ಪ್ರತಿವರ್ಷ ಕಳ್ಳತನದಲ್ಲಿ ಶಿಕಾರಿ ಮಾಡಲು ಅವರಿರುವ ಪ್ರದೇಶಕ್ಕೆ ಹೋಗುವವರಲ್ಲಿ ಅನೇಕರು ಹಿಂದಿರುಗಿ ಬರುವುದಿಲ್ಲ. ಅವರು ಅಲ್ಲೇ ಕೊಲ್ಲಲ್ಪಡುತ್ತಾರೆ'' ಎಂದು ಹೇಳಿದರು. ಝುರವಾಗಳ ಬಳಿ ಅನೇಕ ಅದ್ಭುತ ಗಿಡಮೂಲಿಕೆಗಳ ಔಷಧವಿದೆಯಂತೆ "ಆದರೇನು ಮಾಡುವುದು, ಹೊರಜಗತ್ತಿನ ನಾಗರೀಕರನ್ನು ಕಂಡರೆ ಅವರಿಗೆ ದ್ವೇಷ. ಅದೂ ಸಕಾರಣವೇ ಎನ್ನಿ। ಅವರ ದ್ವೀಪಗಳನ್ನು ನಾವು ಆಕ್ರಮಿಸಿಕೊಂಡು ಅವರನ್ನೇ ಮೂಲೆಗುಂಪು ಮಾಡಿದ್ದೇವೆ'' ಎಂದು ಸರ್ಕಾರಿಯಾ ನಿಟ್ಟುಸಿರುಬಿಟ್ಟರು.

* * *

ನಾನ್‌ಕೌರಿಗೆ ಕ್ಲಿಯರೆನ್ಸ್ ಸಿಕ್ಕಿರಬೇಕು. ಪೋರ್ಟ್‌ಬ್ಲೇರ್ ಕಡೆಯಿಂದ ಪೈಲಟ್ ದೋಣಿಯೊಂದು ಬರುತ್ತಿರುವುದು ಕಂಡಿತು. ಆದರಿಂದ ಹಾರ್ಬರ್ ಪೈಲಟ್ ನಾನ್‌ಕೌರಿಗೆ ದಾಟಿಕೊಂಡ.

ಬಂದರುಗಳ ಬಳಿ ಹಡಗುಗಳು ಬಂದಕೂಡಲೇ ಆಯಾ ಬಂದರಿನ ಹಾರ್ಬರ್ ಪೈಲಟ್‌ಗಳು ಬಂದು ಹಡಗನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ಆಮೇಲಿನದೆಲ್ಲಾ ಅವರದೇ ಜವಾಬ್ದಾರಿ. ಬಂದರು ಬಿಟ್ಟು ಹೊರ ಸಮುದ್ರಕ್ಕೆ ಹಡಗು ಬಂದ ಮೇಲೆ ಹಡಗನ್ನು ಅದರ ಕ್ಯಾಪ್ಟನ್ ಜವಾಬ್ದಾರಿಗೆ ವಹಿಸಿ ಪೈಲಟ್ ನಿರ್ಗಮಿಸುತ್ತಾನೆ. ಬಹುಶಃ ಒಂದೊಂದು ಬಂದರಿನಲ್ಲೂ ಸಮುದ್ರದ ಆಳ, ನೀರಿನ ಪ್ರವಾಹದ ದಿಕ್ಕು, ಬಂದರುಕಟ್ಟೆಯ ರಚನೆ ಇವೆಲ್ಲ ಬೇರೆ ಬೇರೆ ರೀತಿಯಲ್ಲಿರುವುದರಿಂದ ಆಯಾ ಬಂದರಿನ ಅಧಿಕಾರಿಗಳೇ ಈ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಾರೆಂದು ಕಾಣುತ್ತದೆ.

ಬಾರಾಟಾಂಗ್‌ನಲ್ಲಿ ಹಡಗು ನಿಲ್ಲಿಸುವಾಗ ಕೊಂಚ ಹೆಚ್ಚು ಕಡಿಮೆಯಾಗಿ ಹಡಗಿನ ಮಿಣಿಗಳನ್ನು ಬಂದರು ಕಟ್ಟೆಯ ಮೇಲಿರುವ ಉಕ್ಕಿನ ಗೂಟದೊಳಗೆ ಹಾಕುತ್ತಿದ್ದವ ಹಗ್ಗ ಕೈಬಿಟ್ಟು ಆಚೆಗೆ ಜಿಗಿದ. ಹಡಗಿನ ಸಣ್ಣ ತುಯ್ತಕ್ಕೆ ಆನೆಯ ಕಾಲಿಗಿಂತ ದಪ್ಪಗಿದ್ದ ಹಡಗಿನ ನೈಲಾನ್ ದಾರ ಲಡು ಬೂಸಿ ಬುಗುರಿ ಹಗ್ಗದಂತೆ ತುಂಡುತುಂಡಾದುದನ್ನು ನಾನು ಕಣ್ಣಾರೆ ಕಂಡಿದ್ದೆ. ಒಟ್ಟಿ

This PDF was created using the Sonic PDF Creator.
To remove this watermark, please license this product at www.investintech.com

ನಲ್ಲಿ ಹಾರ್ಬರಿಗೆ ಹಡಗು ತಂದು ನಿಲ್ಲಿಸುವಾಗಲಂತೂ ಬಂದರಿನ ಸಿಬ್ಬಂದಿಯವರು ವಿಪರೀತ ಜಾಗ್ರತೆ ವಹಿಸುತ್ತಿದ್ದರು. ನಾನ್‌ಕೌರಿಯಂಥ ಅಗಾಧ ಗಾತ್ರದ ಹಡಗು ಅಂಕೆ ತಪ್ಪಿದರೂ ಊಹಿಸಲಸಾಧ್ಯವಾದ ಅನಾಹುತಗಳಾಗಬಹುದೇನೋ!

ಪೋರ್ಟ್‌ಬ್ಲೇರ್ ಅಂಡಮಾನಿನ ಮುಖ್ಯ ಬಂದರು. ಜಲಸಾರಿಗೆಯೇ ಮುಖ್ಯವಾಗಿರುವ ಅಂಡಮಾನ್ ದ್ವೀಪಗಳಾದ್ಯಂತ ನೂರಾರು ಬಂದರುಗಳಿದ್ದಾವೆ. ಆದರೆ ಅಲ್ಲಿಗೆಲ್ಲಾ ನಾನ್‌ಕೌರಿಯಂಥ ದೊಡ್ಡ ಹಡಗುಗಳು ಹೋಗಲು ಸಾಧ್ಯವಿಲ್ಲ. ಪೋರ್ಟ್‌ಬ್ಲೇರ್ ಅಂಡಮಾನಿನ ರಾಜಧಾನಿ ಕೂಡ. ಸುತ್ತ ಪರ್ವತಗಳಿಂದ ಆವೃತವಾದ ಕೊಲ್ಲಿಯೊಂದರಲ್ಲಿರುವ ಪೋರ್ಟ್‌ಬ್ಲೇರ್ ಸ್ವಾಭಾವಿಕ ಬಂದರೆಂದು ಕರೆಯಬಹುದು. ಇಲ್ಲಿ ಹೊರ ಸಮುದ್ರದ ಗಾಳಿಯಾಗಲೀ ಹೆದ್ದರೆಗಳಾಗಲೀ ಬರುವಂತೆ ಇರಲಿಲ್ಲ.

ಹಡಗು ಪೋರ್ಟ್‌ಬ್ಲೇರನ್ನು ಸಮೀಪಿಸುತ್ತಿದ್ದಂತೆಯೇ ದೂರದ ಗಿರಿಶ್ರೇಣಿಗಳು ಹತ್ತಿರಾದವು. ಈ ಪರ್ವತಗಳು ದೂರ ದರ್ಶಕದಲ್ಲಿ ಹಸಿರು ಹುಲ್ಲಿನಿಂದ ಆವೃತವಾದಂತೆ ಕಂಡಿದ್ದವು. ಹತ್ತಿರಾದಾಗ ನಮಗೆ ಗೊತ್ತಾಯ್ತು, ಹುಲ್ಲಿನಂತೆ ಕಂಡಿದ್ದು ಹೆಮ್ಮರಗಳ ಸಾಂದ್ರ ವಿಪಿನ ಎಂದು. ಮರಗಳು ಎಷ್ಟೊಂದು ಒತ್ತೊತ್ತಾಗಿ ಬೆಳೆದಿದ್ದವೆಂದರೆ ಪ್ರತಿಯೊಂದು ಪರ್ವತವೂ ಹಸಿರು ಹುಲ್ಲಿನಿಂದ ಮುಚ್ಚಿದಂತೆ ಕಾಣುತ್ತಿತ್ತು. ಆ ಕಾಡಿನ ದಟ್ಟಣೆಯನ್ನು ನೋಡಿ ನಾವೆಲ್ಲ ಅವಾಕ್ಕಾಗಿ ಹೋದೆವು. ಇಡೀ ಪಶ್ಚಿಮ ಘಟ್ಟಗಳು ಒಂದು ಕಾಲದಲ್ಲಿ ಹೀಗೇ ಇದ್ದುವೆಂದು ನೆನೆಸಿಕೊಂಡು ನಮಗೆಲ್ಲಾ ದುಃಖವಾಯ್ತು. ಇಲ್ಲಿನ ದ್ವೀಪಗಳಲ್ಲಿ ತೀರದಿಂದ ತೀರಕ್ಕೆ ಒಂದಂಗುಲ ಜಾಗಬಿಡದಂತೆ ಕಾಡು ಆವರಿಸಿದ್ದನ್ನು ಕಾಣಬಹುದಿತ್ತು.

ಪೋರ್ಟ್‌ಬ್ಲೇರ್‌ನಲ್ಲಿ ಹಡಗು ನಿಂತಿತು. ನಾವೆಲ್ಲ ನಮ್ಮ ಗಂಟು ಮೂಟೆ ಕಟ್ಟಲು ಕ್ಯಾಬಿನ್ನಿಗೆ ಓಡಿದೆವು.

* * *

ಚಂದ್ರು ಹಡಗಿನಿಂದಲೇ ದೂರದರ್ಶಕದಲ್ಲಿ ನಮ್ಮನ್ನು ಇದಿರುಗೊಳ್ಳಲು ನಮ್ಮ ಮಿತ್ರರು ಯಾರಾದರೂ ಬಂದಿದ್ದಾರೆಯೇ? ನೋಡಿದರು. ನಮಗೆ ಚಿಂತೆಯಾಗುವಂತೆ ಒಂದೇ ಒಂದು ಪರಿಚಯದ ಮುಖವೂ ಅವರಿಗೆ ಕಾಣಲಿಲ್ಲ. ಮಲ್ಲಿಕ್ ಕಡೆಗೆ ತಿರುಗಿ "ಲೋ! ನಮ್ಮಾಸಾಮಿಗಳೊಬ್ರೂ ಕಾಣ್ತಾನೆ ಇಲ್ವಲ್ಲೋ!" ಎಂದರು.

This PDF was created using the Sonic PDF Creator.
To remove this watermark, please license this product at www.investintech.com

ಪೋರ್ಟ್‌ಬ್ಲೇರ್ ಬಹಳ ಸಣ್ಣ ಸಾಧಾರಣ ಬಂದರಿನಂತೆ ಕಾಣುತ್ತಿತ್ತು ಮದ್ರಾಸಿಗೆ ಹೋಲಿಸಿದರೆ. ಚಿಕ್ಕ ರೈಲ್ವೆ ಸ್ಟೇಷನಿನಂಥ ಬಂದರು ಕಛೇರಿ ಇತ್ತು. ದೂರದಲ್ಲಿ ಉಗ್ರಾಣದ ಶೆಡ್ಡು ಕಾಣುತ್ತಿತ್ತು. ಕೆಲವು ಟ್ಯಾಕ್ಸಿಗಳೂ ಒಂದೆರಡು ಸ್ಕೂಟರುಗಳೂ ನಿಂತಿದ್ದವು. ಹಡಗಿನ ಡೆಕ್‌ನಿಂದ ಅಂಡಮಾನಿನ ರಾಜಧಾನಿ ಪೋರ್ಟ್‌ಬ್ಲೇರ್ ಸಕಲೇಶಪುರ ಅಥವಾ ಮಡಿಕೇರಿ ತರ ನನಗೆ ಕಂಡಿತು.

ಎರಡು ಮೂರು ದಿನ ನಿಲ್ಲುವ ನಾನ್‌ಕೌರಿ ಹಡಗಿನಿಂದ ಇಳಿಯಲು ಜನ ಅನವಶ್ಯಕವಾಗಿ ನುಗ್ಗಾಡುತ್ತಿದ್ದರು. ಅನೇಕರು ನಮ್ಮ ಪಕ್ಕ ನಿಂತಿದ್ದವರು ಕೆಳಗೆ ಇದಿರುಗೊಳ್ಳಲು ಕಾಯುತ್ತಿದ್ದ ತಮ್ಮ ಬಂಧುಮಿತ್ರರಿಗೆ ಕೈಬೀಸುತ್ತಿದ್ದರು. ಕೆಲವರಂತೂ ಗಟ್ಟಿಯಾಗಿ ಕೂಗುತ್ತ ಡೆಕ್ ಮೇಲಿಂದಲೇ ಕ್ಷೇಮ ಸಮಾಚಾರಾದಿ ಸಂಭಾಷಣೆಗಳನ್ನು ಆರಂಭಿಸಿ ಬಿಟ್ಟರು. ಒಬ್ಬ "ಮದ್ರಾಸಿನಿಂದ ತರ್ಕಾರಿ ತರುವು ದನ್ನು ಮರೆತೆಯಾ?" ಎಂದು ಕೂಗಿದ. ಇನ್ನೊಬ್ಬ "ನನ್ನ ಹೆಂಡತಿ ಯಾಕೆ ಬರಲಿಲ್ಲ?" ಎಂದು ಕೇಳುತ್ತಿದ್ದ.

ಕ್ಯೂನಲ್ಲಿ ಜನ ಕೆಳಗಿಳಿಯುತ್ತಾ ಇದ್ದರು. ಕ್ಯೂ ಮಧ್ಯೆ ಎರಡು ಗಜ ಜಾಗ ಖಾಲಿ ಇದ್ದುದನ್ನು ನೋಡಿ ನಾನು ಅಲ್ಲಿ ನಿಂತೆ. ನಿಂತ ಕೂಡಲೇ ಅದೇಕೆ ಅಷ್ಟು ಜಾಗ ಖಾಲಿಯಿತ್ತೆಂದು ಗೊತ್ತಾಯಿತು. ನನ್ನ ಮುಂದೊಬ್ಬ ದೊಡ್ಡ ಕಡೆಯುವ ಕಲ್ಲನ್ನು ಬೆನ್ನ ಮೇಲೆ ಹಾಕಿಕೊಂಡು ಅದನ್ನು ಎರಡೇ ಬೆರಳಲ್ಲಿ ಜಾರದಂತೆ ಹಿಡಿದು ಮುಂದೆ ಸಾಗುತ್ತಿದ್ದ. ಯಾವ ಕ್ಷಣದಲ್ಲಾದರೂ ಅವನ ಬೆರಳಿಂದ ಜಾರಿ ಹಿಂದೆ ಬೀಳಬಹುದಾಗಿದ್ದ ಅದು ಹಿಂದೆ ನಿಂತಿದ್ದವರ ಕಾಲನ್ನು ಅಪ್ಪಚ್ಚಿ ಮಾಡುವುದಂತೂ ಖಂಡಿತವಿತ್ತು. ಈ ಅಪಾಯಕಾರಿಯ ಬೆನ್ನಹಿಂದೆ ನಿಲ್ಲುವುದು ಆತ್ಮಹತ್ಯೆಗೆ ಸಮಾನವೆಂದು ನಾನು ಕೂಡಲೇ ಪಕ್ಕಕ್ಕೆ ಜಿಗಿದು ಕ್ಯೂ ಮುಂದಕ್ಕೆ ಮುಂದಕ್ಕೆ ಹರಿಯಲು ಅನುವು ಮಾಡಿಕೊಟ್ಟೆ.

ನಾನ್‌ಕೌರಿ ಮತ್ತೆ ಮದ್ರಾಸಿಗೆ ಹಿಂದಿರುಗಲು ಅನೇಕ ದಿನಗಳಿದ್ದವು. ಆದರೂ ಬಸ್ಸುಗಳಿಗೆ ನುಗ್ಗುವಂತೆ ಇಳಿಯುವವರಿಗೆ ಜಾಗ ಕೊಡದೆ ಹತ್ತುವವರು ನುಗ್ಗುತ್ತಿದ್ದರು. ಬಂದರು ಕಟ್ಟೆಯಲ್ಲಿ ನಿಂತಿರುವ ಹಡಗಿನಲ್ಲಿ ಕುಳಿತು ಇವರೇನು ಮಾಡುತ್ತಾರೋ ತಿಳಿಯಲಿಲ್ಲ. ಬಹುಶಃ ಮುಂಬರುವ ಪ್ರಯಾಣಕ್ಕೆ ಈಗಲೇ ಜಾಗ ಕಾದಿರಿಸಲು ಓಡುತ್ತಿದ್ದರೋ ಏನೋ!

ಹೊರಗೆ ಇಳಿದು ವೇರ್‌ಹೌಸ್ ನೆರಳಿಗೆ ನಮ್ಮ ಸಾಮಾನುಗಳನ್ನೆಲ್ಲಾ ಒಯ್ದು ರಾಶಿ ಹಾಕಿದೆವು. ನಾನು ನಮ್ಮ ಗುಂಪನ್ನು ಫೋಟೋ ತೆಗೆಯಲು

This PDF was created using the Sonic PDF Creator.
To remove this watermark, please license this product at www.investintech.com

ಕ್ಯಾಮರ ರೆಡಿ ಮಾಡುತ್ತಿದ್ದ. ಅಷ್ಟರಲ್ಲಿ ಗೆಳೆಯ ಪ್ರಶಾಂತ್ ಮತ್ತು ಬೆಳವಾಡಿ ಆಗಮಿಸಿದರು. ಅವರು ಬಹಳ ಮೊದಲೇ ಬಂದು ನಮಗಾಗಿ ಕಾಯುತ್ತಿದ್ದರಂತೆ. ನಾನ್‌ಕೌರಿಗೆ ಕ್ಲಿಯರೆನ್ಸ್ ಸಿಕ್ಕದ ದೂರ ಸಮುದ್ರದಲ್ಲಿದೆ ಎಂದು ತಿಳಿದ ನಂತರ ಹಾಗೇ ಅಡ್ಡಾಡಲು ಹೋಗಿದ್ದರಂತೆ, ನಮ್ಮನ್ನೆಲ್ಲಾ ನೋಡಿ ಅವರ ಮುಖದಲ್ಲಿ ಮಂದಹಾಸ ತುಂಬಿತುಳುಕಿತು. ಕೈ ಕುಲುಕುತ್ತಾ "ಅಂತೂ ಅಂಡಮಾನಿಗೆ ಬಂದ್ರಲ್ಲಾ" ಎಂದರು. ಅವರನ್ನು ನಾನು ನಮ್ಮ ಸಾಮಾನುಗಳ ರಾಶಿಯ ಪಕ್ಕ ನಿಲ್ಲುವಂತೆ ಹೇಳಿ ಫೋಟೋ ತೆಗೆಯಲು ಅನುವಾದೆ. ಅಷ್ಟರಲ್ಲಿ ಯಾರೋ "ಇಲ್ಲಿ ತೆಗೆದರೆ ಏನು ಪ್ರಯೋಜನ? ನಾವಿಳಿದ ಹಡಗಿನ ಪಕ್ಕ ನಿಂತು ಫೋಟೋ ತೆಗೆಸಿಕೊಂಡರೆ ಸರಿಯಾಗಿರುತ್ತದೆ. ಇಲ್ಲಿ ತೆಗೆದರೆ ಅಂಡಮಾನಿನದೋ ಬೆಂಗಳೂರಿನದೋ ಒಂದೂ ಗೊತ್ತಾಗುವುದಿಲ್ಲ" ಎಂದು ತರ್ಲೆ ತೆಗೆದರು.

ಬೆಳವಾಡಿ "ನಾನು ನಿಮ್ಮ ಸಾಮಾನುಗಳನ್ನು ನೋಡಿಕೊಂಡು ಇಲ್ಲಿರುತ್ತೇನೆ. ನೀವು ಬೇಗ ಹಡಗಿನ ಬಳಿ ಹೋಗಿ ಫೋಟೋ ತೆಗೆದುಕೊಂಡು ಬನ್ನಿ" ಎಂದರು.

"ಅದೆಲ್ಲಾ ಆಗುವುದಿಲ್ಲ ನಮ್ಮ ಗಂಟುಮೂಟೆಗಳೊಡನೆ ಫೋಟೋ ತೆಗೆದರೇ ಸರಿ. ಆಗ ಯಾರೂ ನಮ್ಮ ವಿರುದ್ಧ ಚಕಾರ ಎತ್ತುವುದಿಲ್ಲ" ಎಂದು ಇನ್ನೊಂದು ತಕರಾರು ಶುರುವಾಯ್ತು.

ಆಯ್ತಪ್ಪ ಎಂದು ಬಿಸಿಲಲ್ಲಿ ಮತ್ತೆ ಸಾಮಾನುಗಳನ್ನು ಹೊತ್ತುಕೊಂಡು ಹಡಗಿನಲ್ಲಿ ವಾಪಸ್ ಹೋಗುವವರಂತೆ ನಾನ್‌ಕೌರಿ ಬಳಿಗೆ ಹೋದೆವು. ಹಡಗಿನ ಸಿಬ್ಬಂದಿ, ಹಡಗಿನ ನ್ಯಾವಿಗೇಟರು, ಸರ್ವರ್ ಜೋಸೆಫ್ ಎಲ್ಲಾ ಡೆಕ್ಕಿನ ಮೇಲಿಂದ ನಮ್ಮ ಮಂಗಾಟಗಳನ್ನು ನೋಡಿ ನಗುತ್ತಿದ್ದರು.

ನಾವು ಎಲ್ಲಿಗಾದರೂ ಹೋದರೆ ಪ್ರವಾಸ ಮುಗಿಸಿ ವಾಪಸಾದನಂತರ ನಮ್ಮನ್ನು ವಿಚಾರಿಸಿ ವಿವರಗಳನ್ನು ಕೇಳುವ ಮಿತ್ರರ ದೃಷ್ಟಿಯನ್ನೂ ನಾವು ಪ್ರವಾಸದಲ್ಲಿ ಪರಿಗಣಿಸುತ್ತೇವೆ. ಅದು ನೋಡಲಿಲ್ಲವ? ಇದು ನೋಡಲಿಲ್ಲವ? ಎಂದು ಅವರೆಲ್ಲಿ ಕೇಳುತ್ತಾರೋ ಎಂದು ಹೆದರಿಯೇ ಆದಷ್ಟು ಸ್ಥಳಗಳಿಗೆ ಭೇಟಿ ಕೊಟ್ಟು ಊರಲ್ಲಿರುವವರಿಗೆ ಆತ್ಮಶಾಂತಿ ಮಾಡುತ್ತೇವೆ!

ಪೋರ್ಟ್‌ಬ್ಲೇರಲ್ಲಿ ಇಳಿದಕೂಡಲೆ · ನಾವು ಮಾಡಿದ್ದೂ ಇದನ್ನೇ ಏನೋ!

This PDF was created using the Sonic PDF Creator.
To remove this watermark, please license this product at www.investintech.com

# 6. ಟಾರ್ನೆಡೋ ಮತ್ತು ಕರಿಮೀನು

"ನೀವು ಎಷ್ಟು ದಿನ ಇರಲು ಬಂದಿದ್ದೀರಿ'' ಎಂದು ಶರ್ಮ ಕೇಳಿದರು. ಬೆಂಗಳೂರಿನವರಾದ ಶರ್ಮ ಕೃಷಿ ವಿಜ್ಞಾನಿಯಾಗಿ ಅಂಡಮಾನಿನ ಕೃಷಿ ಸಂಶೋಧನ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು.

"ಇಪ್ಪತ್ತು ದಿನ ರಜ ಹಾಕಿ ಬಂದಿದೀವಪ್ಪ. ಅಂಡಮಾನಿನಲ್ಲಿ ಏನೇನು ನೋಡೋದಿದೆ ಪಟ್ಟಿ ಹಾಕಿ'' ಎಂದು ನಮ್ಮ ಟೀಮಿನ ಮೇನೇಜರಾಗಿದ್ದ ಮಲ್ಲಿಕ್ ಹೇಳಿದರು.

"ಒಂದು ಕೆಲಸ ಮಾಡಬಹುದು, ನೀವು ಇಲ್ಲಿಂದ ನಿಕೋಬಾರಿಗೆ ಹೋಗುವ ಹಡಗೊಂದಿದೆ. ಅದರಲ್ಲಿ ಹತ್ತಿದರೆ ಆ ಹಡಗು ಅನೇಕ ದ್ವೀಪಗಳಲ್ಲಿ ನಿಲ್ಲುತ್ತ ನಿಲ್ಲುತ್ತ ಹೋಗುತ್ತೆ. ಕಾರ್ನಿಕೋಬಾರ್, ಲಿಟಲ್ ಅಂಡಮಾನ್, ನಾನ್‌ಕೋರಿ, ಲಿಟಲ್ ನಿಕೋಬಾರ್, ಗ್ರೇಟ್ ನಿಕೋಬಾರ್, ಈ ಎಲ್ಲಾ ದ್ವೀಪಗಳಿಗೂ ಅದು ಭೇಟಿಕೊಡುತ್ತೆ. ನಿಕೋಬಾರ್ ಸಹ ನೋಡಿದಂತಾಗುತ್ತೆ'' ಎಂದರು ಶರ್ಮ. ಅಂಡಮಾನಿನಲ್ಲಿ ಪ್ರೇಕ್ಷಣೀಯ ಸ್ಥಳಗಳಿಗೇನು ಕಡಿಮೆ ಇಲ್ಲ ಎಂದು ಹೇಳಲು ಅವರು ತವಕದಲ್ಲಿದ್ದಂತಿತ್ತು.

ಇನ್ನೊಬ್ಬರು "ಇವರು ಮಾಯಾಬಂದರ್‌ವರೆಗೂ ಹೋಗಿಬಂದರೆ ಹೇಗೆ? ಅಲ್ಲಿಗೂ ಹಡಗಿದೆ. ಬಾರಾಟಾಂಗ್, ರಂಗತ್, ದಿಗ್ಲಿಪುರ ಎಲ್ಲಾ ನೋಡಿ ಬರಬಹುದು'' ಎಂದರು.

ನಾನು ಗಾಬರಿಯಾದೆ. ಯಾಕೆಂದರೆ ಈ ರೀತಿಯ ಪ್ರವಾಸದಲ್ಲಿ ನನಗೆ ಕೊಂಚವೂ ಶ್ರದ್ಧೆ ಇರಲಿಲ್ಲ. ಸತತವಾಗಿ ನಾಲ್ಕುದಿನ ಹಡಗಿನಲ್ಲಿ ಬಂದಿದ್ದೆವು.

This PDF was created using the Sonic PDF Creator.
To remove this watermark, please license this product at www.investintech.com

ಈಗ ಮತ್ತೆ ಹಡಗಿನಲ್ಲಿ ಐದಾರು ದಿನ ಪ್ರಯಾಣ ಮಾಡುತ್ತ, ಅಲ್ಲಲ್ಲಿ ಅರ್ಧ ಗಂಟೆಯೋ ಒಂದು ಗಂಟೆಯೋ ನಿಲ್ಲುವ ಹಡಗಿನಿಂದ ಇಳಿದು ಸುತ್ತಾಡಿಕೊಂಡು ಬಂದರೆ ಏನು ಭಾಗ್ಯ ಬಂದ ಹಾಗಾಯ್ತು. ಬರೇ ಪ್ರೇಕ್ಷಣೀಯ ಸ್ಥಳಗಳನ್ನು ನೋಡುತ್ತ ಹೋಗುವ ಪ್ರವಾಸಿಗೆ ಅಂಡಮಾನ್ ಒಂದೇ ದಿನಕ್ಕೆ ಬೋರಾಗುತ್ತದೆ. ಒಂದು ದ್ವೀಪ ನೋಡಿದರೆ ಮುಗಿಯಿತು. ಅನಂತರ ಅದೇ ರೀತಿಯ ದ್ವೀಪಗಳು, ಅದೇ ಮರಳಿನ ತೀರಗಳು, ಅದೇ ಕಾಡುಗಳು. ಈ ದೋಣಿಗಳಲ್ಲಿ ಹೋಗುವವರು ಯಾವುದಾದರೊಂದು ದ್ವೀಪದಲ್ಲಿ ಇಳಿದು ಸಾಕಷ್ಟು ಕಾಲ ಕಳೆದು ಅನಂತರ ಸಾವಕಾಶವಾಗಿ ಇನ್ನೊಂದು ದೋಣಿಯಲ್ಲಿ ಹಿಂದಿರುಗಬಹುದೇ! ಅದೂ ಸಹ ಕಷ್ಟ ಸಾಧ್ಯ.

ಅಂಡಮಾನಿನ ದೋಣಿ ಸಾರಿಗೆ ವ್ಯವಸ್ಥೆಗೆ ಒಂದು ವೇಳೆಯೇ ಇಲ್ಲ. ಒಂದು ದ್ವೀಪದಲ್ಲಿ ಇಳಿದ ನಂತರ ದೋಣಿ ಮತ್ತೆ ಬಂದರೆ ಬಂತು ಇಲ್ಲದಿದ್ದರೆ ಇಲ್ಲ. ಅಕಸ್ಮಾತ್ ಸಮುದ್ರದಲ್ಲಿ ಗಾಳಿ ಎದ್ದು ಸಮುದ್ರ ಭೋರ್ಗರೆಯತೊಡಗಿತೆಂದರೆ ದೋಣಿಗಳಿಲ್ಲದೆ ತಿಂಗಳುಗಳೂ ಕಳೆಯಬಹುದು. ಈ ಅಪಾಯ ಪ್ರಶಾಂತ್ ಮೊದಲೇ ನನಗೆ ಹೇಳಿದ್ದರು. ಅವರೇ ಯಾವುದೋ ದ್ವೀಪಕ್ಕೆ ಸಂಶೋಧನೆಯ ಕೆಲಸಕ್ಕೆ ಹೋಗಿ ದೋಣಿಯೇ ಸಿಗದೆ ಅನೇಕ ದಿನ ಅಲ್ಲಿಯೇ ಉಳಿಯಬೇಕಾಯ್ತಂತೆ. ನಮಗೆ ಮೂಡಿಗೆರೆಗೆ ಕಾಗದ ಬರೆಯಲು ತಡವಾದುದಕ್ಕೆ ಅದೇ ಕಾರಣವೆಂದು ಹೇಳಿದ್ದರು.

ನನ್ನನ್ನು ಅಭಿಪ್ರಾಯ ಕೇಳಿದರು. ನಾನು ತೀರಾ ಇಕ್ಕಟ್ಟಿಗೆ ಸಿಕ್ಕಿಕೊಂಡೆ. ದಂಡೆಯ ಮೇಲೆ ಸಮುದ್ರ ತಂದೆಸೆದಿರುವ ವಸ್ತುಗಳನ್ನೇ ಪರೀಕ್ಷಿಸುತ್ತ ಇಪ್ಪತ್ತು ದಿನ ಕಳೆಯಲು ನಾನು ತಯಾರಿದ್ದೆ. ಅಂಡಮಾನ್ ದ್ವೀಪಗಳು ಆ ರೀತಿ ವಿವರಗಳಲ್ಲಿ ನೋಡುವವರಿಗೆ ಮಾತ್ರ ಅದ್ಭುತವಾಗಿ ಕಾಣುತ್ತದೆ. ಆದರೆ ಅಲ್ಲಲ್ಲಿ ಅಡ್ಡಾಡಬೇಕೆಂಬ ಆಸೆ ಇದ್ದವರೂ ನಮ್ಮಲ್ಲಿ ಇದ್ದರು. ಸುಮ್ಮನೆ ಕಪ್ಪೆಚಿಪ್ಪು ನೋಡಿಕೊಂಡೇ ಅಂಡಮಾನಿನಲ್ಲಿ ಕಾಲಕಳೆಯುವುದು ಅವರಿಗೆ ಇಷ್ಟವಿಲ್ಲದೆ ಇರಬಹುದು. ನನಗೆ ನನ್ನ ಅಭಿಪ್ರಾಯ ತಿಳಿಸಲು ತುಂಬಾ ಇಕ್ಕಟ್ಟಾಯ್ತು. ಕೊನೆಗೆ ಇಲ್ಲೇ ಹತ್ತಿರದಲ್ಲಿರುವುದನ್ನೆಲ್ಲಾ ನೋಡಿ ಮುಗಿಸೋಣ. ಅನಂತರ ಮಿಕ್ಕುದನ್ನು ಯೋಚಿಸೋಣ ಎಂದು ತೀರ್ಮಾನಿಸಿದೆವು.

ನಾವು ಯೂತ್ ಹಾಸ್ಟೆಲಿನಲ್ಲಿ ಇಳಿದುಕೊಂಡಿದ್ದು. ದಿನಕ್ಕೆ ಒಬ್ಬರಿಗೆ ಎಂಟು ರೂಪಾಯಿ ಬಾಡಿಗೆಯಂತೆ ಹನ್ನೆರಡು ಹಾಸಿಗೆಗಳ ಒಂದು ದೊಡ್ಡ

This PDF was created using the Sonic PDF Creator.
To remove this watermark, please license this product at www.investintech.com

ರೂಮು ನಮಗೆ ಸಿಕ್ಕಿತ್ತು. ಯೂತ್ ಹಾಸ್ಟೆಲಿನ ಎದುರೇ ಒಂದು ದೊಡ್ಡ ಉದ್ಯಾನ. ಅದರ ನಡುವೆ ನೇತಾಜಿ ಸುಭಾಷ್‌ಚಂದ್ರಬೋಸರ ಒಂದು ಪ್ರತಿಮೆ. ಎರಡನೆಯ ಮಹಾಯುದ್ಧ ಕಾಲದಲ್ಲಿ ನೇತಾಜಿಯವರು ಜಪಾನರೊಡಗೂಡಿ ಬ್ರಿಟಿಷರಿಂದ ವಿಮೋಚನೆ ಮಾಡಿದ ಮೊದಲ ಭಾರತದ ಭಾಗ ಅಂಡಮಾನ್. ಅಲ್ಲಿಂದ ಮುಂದೆ ಬರ್ಮಾ ಮುಖಾಂತರ ಭಾರತವನ್ನು ಪ್ರವೇಶಿಸಿ ಬ್ರಿಟಿಷರನ್ನು ಒದ್ದೋಡಿಸಬೇಕೆಂದು ಸುಭಾಷರ ಮಹತ್ವಾಕಾಂಕ್ಷೆ ಇತ್ತು. ಅಮೇರಿಕಾ ಆಟಂಬಾಂಬನ್ನು ಕಂಡುಹಿಡಿಯದಿದ್ದರೆ ಅವರ ಹವಣಿಕೆ ಕೈಗೂಡುತ್ತಿತ್ತೋ ಏನೋ. ಆದರೆ ಚರಿತ್ರೆಯ ಗತಿಯೇ ಬೇರೆ ದಿಕ್ಕಿಗೆ ಇತ್ತು.

ಪೋರ್ಟ್‌ಬ್ಲೇರ್ ಸುತ್ತೆಲ್ಲ ಜಪಾನೀಯರ ಆಕ್ರಮಣದ ಗುರುತುಗಳು ಕಾಣಸಿಗುತ್ತವೆ. ಸಮುದ್ರದತ್ತಣಿಂದ ಬರುವ ವೈರಿ ಹಡಗುಗಳನ್ನು ನಾಶ ಮಾಡಲು ಅವರು ಸಮುದ್ರದ ದಿಕ್ಕಿಗೆ ಕಟ್ಟಿದ್ದ ಫಿರಂಗಿ ಕೋರಿಗಳು ಬೇಕಷ್ಟು ಇದ್ದವು. ಕಲ್ಲೆಲ್ಲಾ ಜರುಗಿ ಹುಲ್ಲು ಬೆಳೆದು ಪಾಳುಬಿದ್ದಿದ್ದವು. ಅವುಗಳನ್ನೂ ಚಾರಿತ್ರಿಕ ಸ್ಮಾರಕಗಳೆಂದು ರಕ್ಷಿಸಿದ್ದರೆ ಚೆನ್ನಾಗಿತ್ತು. ವಾಸ್ತವವಾಗಿ ಜಪಾನೀಯರೇ ಅಂಡಮಾನಿನಲ್ಲಿ ವ್ಯವಸಾಯವನ್ನು ಆರಂಭಿಸಿದವರು. ಅಲ್ಲಿಯವರೆಗೂ ಎಲ್ಲ ಅಗತ್ಯ ವಸ್ತುಗಳೂ, ದವಸಧಾನ್ಯಗಳೂ ಬ್ರಿಟಿಷರಿಗೆ ಭಾರತದಿಂದಲೇ ಸರಬರಾಜಾಗುತ್ತಿದ್ದುವು. ಜಪಾನ್ ಬಹಳ ದೂರವಿದ್ದುದರಿಂದ ಅಂಡಮಾನಿನ ಜಪಾನೀಯರು ತಾವೇ ತಮ್ಮ ಅಗತ್ಯವಸ್ತುಗಳನ್ನು ಬೆಳೆದುಕೊಳ್ಳಬೇಕಾಯ್ತು. ಅಂಡಮಾನಿನಲ್ಲಿ ಕೃಷಿ ಆರಂಭವಾದುದು ಹೀಗೆ.

ಅಲ್ಲಿಯವರೆಗೂ ಅಂಡಮಾನಿನ ಮುಖ್ಯೋದ್ಯೋಗ ಎಂದರೆ ಮರ ಕಡಿದು ಸಾಗಿಸುವುದು. ಆಗ ಬ್ರಿಟಿಷರು ಸ್ಥಾಪಿಸಿದ ಮರ ಕೊಯ್ಯುವ ಕಾರ್ಖಾನೆ ಚಠಾಂ ಸಾಮಿಲ್ ಈಗಲೂ ಭಾರತ ಸರ್ಕಾರದ ಅಧೀನದಲ್ಲಿ ನಡೆಯುತ್ತಿದೆ. ಇಡೀ ಏಷ್ಯಾದಲ್ಲೇ ಅತಿ ದೊಡ್ಡ ಮರ ಕೊಯ್ಯುವ ಕಾರ್ಖಾನೆ ಇದು. ಅಂಡಮಾನಿನ ಸಹಸ್ರಾರು ಎಕರೆ ಕಾಡುಗಳನ್ನು ಭಾರತದ ಕೈಗಾರಿಕೋದ್ಯಮಿಗಳಿಗೆ ಮರ ಕೊಯ್ದು ಸಾಗಿಸಲು ಗುತ್ತಿಗೆ ಕೊಡಲಾಗಿತ್ತು. ಆದರೆ ಇಲ್ಲಿಂದ ಭಾರತಕ್ಕೆ ಸಾಗಿಸುವ ವೆಚ್ಚ ಆಗಿನ ಮರದ ಬೆಲೆಗೆ ಅತಿಯಾದುದರಿಂದ ಮತ್ತು ಆಗ ಭಾರತದಲ್ಲೇ ಕಡಿಯಲು ಬೇಕಾದಷ್ಟು ಮರಗಳು ಇದ್ದುದರಿಂದಲೂ ಅದನ್ನು ಪ್ರಾರಂಭದಲ್ಲಿಯೇ ಕೈಬಿಟ್ಟರಂತೆ. ಆದರೆ ಅವರು ಊರಿಗೆ ಮರಳುವಾಗ ಅವರೊಡನೆ ಮರ ಸಾಗಿಸಲು ತಂದ ಆನೆಗಳನ್ನು ಒಯ್ಯಲಿಲ್ಲ. ಆ ಆನೆಗಳು

This PDF was created using the Sonic PDF Creator.
To remove this watermark, please license this product at www.investintech.com

ಮಾವುತರು ಕಲಿಸಿದ್ದ ಪಾಠಗಳನ್ನೆಲ್ಲಾ ಮರೆತುಕೊಂಡು ಕಾಡಾನೆಗಳಾಗಿ ಅಲ್ಲೇ ವಂಶಾಭಿವೃದ್ಧಿ ಮಾಡಿಕೊಂಡು ಈಗ ಅಂಡಮಾನಿನ ವನ್ಯಜೀವಿಗಳ ಪಟ್ಟಿಗೆ ಸೇರಿವೆ.

ಇದೇರೀತಿ ಭಾರತದಿಂದ ತಂದುಬಿಟ್ಟಿರುವ ಇನ್ನೊಂದು ಪ್ರಾಣಿ ಅಂಡಮಾನಿನ ಜಿಂಕೆ. ಇವುಗಳನ್ನು ತಿಂದು ಬದುಕುವ ಮಾಂಸಾಹಾರಿ ಪ್ರಾಣಿಗಳು ಯಾವೂ ಇಲ್ಲದ್ದರಿಂದ ಇವುಗಳ ಸಂಖ್ಯೆ ಅಗಣಿತವಾಗಿ ಈಗ ಅಂಡಮಾನಿನಲ್ಲಿ ಇವುಗಳನ್ನು ಶಿಕಾರಿ ಮಾಡಲು ಪರವಾನಗಿ ಕೊಡಲಾಗಿದೆ. ಪೋರ್ಟ್ ಬ್ಲೇರ್ ಮಾರ್ಕೆಟ್ಟಿನಲ್ಲಿ ರಾಶಿರಾಶಿ ಜಿಂಕೆ ಚರ್ಮಗಳನ್ನು ಮಾರಾಟಕ್ಕಿಟ್ಟದ್ದನ್ನು ನೋಡಿದೆ. ಜಿಂಕೆಯ ಮಾಂಸ ಕೇಜಿಗೆ ನಾಲ್ಕು ರೂಪಾಯಿಯಷ್ಟು ಅಗ್ಗವಾಗಿ ಯಾವಾಗಲೂ ಮಾಂಸದ ಮಾರುಕಟ್ಟೆಯಲ್ಲಿ ದೊರೆಯುತ್ತದೆ. ಆದರೂ ಈ ಜಿಂಕೆಗಳ ಅಭಿವೃದ್ಧಿಯನ್ನು ತಡೆಯಲು ಈಚೆಗೆ ಹಲವು ಚಿರತೆಗಳನ್ನು ತಂದು ಬಿಡಲಾಗಿದೆಯಂತೆ. ಒಟ್ಟಿನಲ್ಲಿ ಈ ರೀತಿ ಗೊತ್ತು ಗುರಿಯಿಲ್ಲದೆ ಪರದೇಶದ ಪ್ರಾಣಿಗಳನ್ನು ಅಂಡಮಾನಿಗೆ ತಂದು ಬಿಡುವುದರಿಂದ ಅಲ್ಲಿಯ ಸೂಕ್ಷ್ಮ ಪರಿಸರದ ಮೇಲೆ ದುಷ್ಪರಿಣಾಮಗಳಾಗಬಹುದು.

ಪೋರ್ಟ್‌ಬ್ಲೇರ್‌ನಲ್ಲಿ ಒಂದು ಹೋಟೆಲಿಗೆ ಮೆಗಾಪಾಡ್ ನೆಸ್ಟ ಎಂದು ಹೆಸರಿಟ್ಟಿದ್ದರು. ಇದೇನು ಈ ರೀತಿ ಹೆಸರಿಟ್ಟಿದ್ದಾರೆಂದು ಪ್ರಶಾಂತನ್ನು ಕೇಳಿದೆ. ಮೆಗಾಪಾಡ್ ಎನ್ನುವುದೊಂದು ಅಂಡಮಾನಿನ ಹಾರಲಾರದ ಹಕ್ಕಿ–ಮಾರಿಷಸ್ ದ್ವೀಪದಲ್ಲಿ ನಾಮಾವಶೇಷವಾದ ಡೋಡೋ ರೀತಿಯ ಹಾರಲಾರದ ಹಕ್ಕಿ. ವಿದೇಶಿ ಪ್ರಾಣಿಗಳಾದ ಹಂದಿ, ಆನೆ, ಮೊಲ, ಜಿಂಕೆ, ಅಳಿಲುಗಳ ದೆಸೆಯಿಂದ ಅದು ಈಗ ಅಂಡಮಾನಿನ ಎಲ್ಲಾ ದ್ವೀಪಗಳಲ್ಲೂ ನಾಶವಾಗಿದೆ. ನಿಕೋಬಾರ್ ಸಮೂಹದ ಯಾವುದೋ ಒಂದು ದ್ವೀಪದಲ್ಲಿ ಮಾತ್ರ ಇದೆ ಎಂದು ಪ್ರಶಾಂತ್ ಹೇಳಿದರು. ಪರಕೀಯ ಪ್ರಾಣಿಗಳನ್ನು ತಂದುಬಿಡುವುದರಿಂದ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡಿನ ಅನೇಕ ಪ್ರಾಣಿಗಳು ನಾಶವಾದವು. ಊಂಬ್ಯಾಟ್ ಜಾತಿಯ ಪ್ರಾಣಿಗಳು ಈಗಲೂ ತಮ್ಮ ಅಸ್ತಿತ್ವಕ್ಕಾಗಿ ಕಷ್ಟಪಡಬೇಕಾಗಿದೆ. ಆ ದೇಶಗಳಲ್ಲಿ ಇದರ ಅನಾಹುತ ಅಧ್ಯಯನ ಮಾಡಿ ತಿಳಿಸುವವರಾದರೂ ಇದ್ದರು. ಅಂಡಮಾನಿನಲ್ಲಿ ಅದೂ ಇರುವ ಮಟ್ಟಿಗೆ ಕಾಣೆ. ಅನೇಕ ಪ್ರಾಣಿಗಳ ವಿಕಾಸ ತಿಳಿಯುವುದಕ್ಕೆ ಮೊದಲೇ ಅವು ಅದೃಶ್ಯವಾಗುವ ಸಂಭವವಿದೆ.

This PDF was created using the Sonic PDF Creator.
To remove this watermark, please license this product at www.investintech.com

ನಮ್ಮ ಯೂತ್ ಹಾಸ್ಟೆಲಿನ ಎದುರಿಗಿದ್ದ ನೇತಾಜಿ ಪಾರ್ಕಿನ ಆಚೆಗೇ ಸಮುದ್ರ.

ಎಲ್ಲ ಮುಂದಿನ ಕಾರ್ಯಕ್ರಮ ಏನೆಂದು ಯೋಚಿಸುತ್ತಿದ್ದರು. ದೂರದಲ್ಲಿ ಕಾಣುತ್ತಿದ್ದ ಸೆಲ್ಯುಲಾರ್ ಜೇಲಿಗೆ ಹೋಗಿಬರೋಣ ಎಂದು ತೀರ್ಮಾನಿಸಿದರು. ನನಗೆ ಜೇಲು ಎಲ್ಲಿಗೆ ಹೋಗುತ್ತೆ! ಮತ್ತೆ ಯಾವಾಗಲಾದರೂ ನೋಡಬಹುದಲ್ಲ ಎನ್ನಿಸಿತು. ''ನೀವು ಹೋಗಿ. ನಾನು ಸಮುದ್ರದ ಹತ್ತಿರ ಹೋಗಿ ಬರುತ್ತೇನೆ'' ಎಂದು ಹೇಳಿದೆ. ಚಂದ್ರು ನಾನೂ ಬರುತ್ತೇನೆಂದರು. ಮಿಕ್ಕವರೆಲ್ಲಾ ಮಹಿಳಾ ಸದಸ್ಯರೊಡಗೂಡಿ ಸೆಲ್ಯುಲಾರ್ ಜೇಲಿನ ಕಡೆಗೆ ಹೊರಟರು. ನಾನು ಮತ್ತು ಚಂದ್ರು ನಮ್ಮ ರೀಲು ರಾಡುಗಳನ್ನು ತೆಗೆದುಕೊಂಡು ಸಮುದ್ರದ ಕಡೆಗೆ ನಡೆದೆವು.

* * *

ಸಮುದ್ರ ಎಲ್ಲಿ ಹೋದರೂ ಒಂದೇ ಎನ್ನುವ ಭಾವನೆ ಇತ್ತು ನನಗೆ. ಅದೇ ಸಮುದ್ರ, ಅದೇ ಉಪ್ಪುನೀರು, ಅದೇ ಅಲೆಗಳು, ಅದೇ ದಂಡೆ. ಹೀಗೇ ಯೋಚನೆ ಮಾಡಿ ಹೋದ ನಮಗೆ ಅಂಡಮಾನಿನ ಸಮುದ್ರ ಅನೇಕ ವಿಧಗಳಲ್ಲಿ ಬೇರೆಯ ತರ ಇದೆ ಎಂದು ಅರಿವಿಗೆ ಬರತೊಡಗಿತು. ಸಮುದ್ರಕ್ಕೆ ಅಂಟಿಕೊಂಡೇ ಒಂದು ಟಾರು ರಸ್ತೆ ಇತ್ತು. ನಾವು ಆ ರಸ್ತೆ ಗುಂಟ ನಡೆದೆವು. ರಸ್ತೆಯ ಪಕ್ಕ ಸಮುದ್ರಕ್ಕೆ ಕಟ್ಟೆ ಹಾಕಿದಂತೆ ಕಟ್ಟಿದ್ದ ಅಡ್ಡಗೋಡೆ ಹತ್ತಿ ಸಮುದ್ರದತ್ತ ಮೊದಲಬಾರಿಗೆ ನೋಡಿದಾಗ ನಮಗೆ ನಿಜವಾಗಿಯೂ ಶಾಕ್ ಆಯಿತು. ಸಮುದ್ರದ ಅಲೆಗಳು ತೆರತೆರೆಯಾಗಿ ಧಾವಿಸದಿದ್ದರೆ ನಮಗೆ ಅಲ್ಲಿ ಸಮುದ್ರ ಇರುವುದೇ ಗೊತ್ತಾಗುತ್ತಿರಲಿಲ್ಲ.

ನಾನಂತೂ ನಮ್ಮ ದಕ್ಷಿಣ ಭಾರತದ ಅನೇಕ ಬೀಚುಗಳಲ್ಲಿ ಸಮುದ್ರ ನೋಡಿದ್ದೇನೆ. ಆದರೆ ಅಂಡಮಾನಿನಷ್ಟು ತಿಳಿಯಾದ ಪಾರದರ್ಶಕ ಸಮುದ್ರವನ್ನು ನೋಡಿಯೇ ಇರಲಿಲ್ಲ. ನನ್ನ ಮಾತಿನ ಅರ್ಥ ನೀವು ಆ ಸಮುದ್ರವನ್ನು ನೋಡದ ಹೊರತು ಸರಿಯಾಗಿ ತಿಳಿಯುವುದಿಲ್ಲ. ತುಂಬ ಆಳದವರೆಗೆ ತಳದ ಪ್ರತಿಯೊಂದು ಕಲ್ಲೂ ಮರಳಿನ ಕಣಗಳೂ ಕಾಣುತ್ತಿದ್ದವು. ಇನ್ನೂ ಆಳ ಇದ್ದಲ್ಲಿ ಸಮುದ್ರ ತಿಳಿಯಾದ ಹಸುರು ಬಣ್ಣಕ್ಕೆ ಕಾಣುತ್ತಿತ್ತು. ಮತ್ತೂ ಆಳ ಇದ್ದಲ್ಲಿ ಮಾತ್ರ ನೀಲಿಯ ಬಣ್ಣ ಕಾಣುತ್ತಿತ್ತು. ಅಂಡಮಾನಿನಿಂದ ಹಿಂದಿರುಗುವಾಗ ವಿಮಾನದ ಕಿಟಕಿಯಿಂದ ಇಣುಕಿದ ನನಗೆ ಈ ವರ್ಣ ವ್ಯತ್ಯಾಸ ಇನ್ನೂ ಚೆನ್ನಾಗಿ ಕಂಡಿತು.

This PDF was created using the Sonic PDF Creator.
To remove this watermark, please license this product at www.investintech.com

ಅಂಡಮಾನಿನ ಸಮುದ್ರದಂಡೆಗಳು ಬಂಡೆಗಳಿಂದ ಕೂಡಿರುವುದರಿಂದಲೋ ಅಥವಾ ಸಮುದ್ರದ ತಳದಲ್ಲಿ ರೂಪುಗೊಳ್ಳುತ್ತಿದ್ದ ಹವಳದ ಬೆಳವಣಿಗೆಯಿಂದಲೋ ಒಟ್ಟಿನಲ್ಲಿ ಸಮುದ್ರದ ನೀರು ಗಾಜಿಗಿಂತ ಪಾರದರ್ಶಕವಾಗಿತ್ತು.

ಇನ್ನೂ ಮೂರು ಗಂಟೆಯೋ ಏನೋ. ಆಗಲೇ ಸೂರ್ಯ ದಿಗಂತಕ್ಕೆ ಹತ್ತಿರಾಗತೊಡಗಿದ್ದ. ಅಂಡಮಾನ್ ದ್ವೀಪಗಳು ಭೂಮಿಯ ಪೂರ್ವಾರ್ಧ ಗೋಳದ ಆಚೆಗಿರುವುದರಿಂದ ಇಲ್ಲಿ ಬಹುಬೇಗ, ಐದು ಗಂಟೆಗೇ ಕತ್ತಲಾಗುತಿತ್ತು. ಬೆಳಗ್ಗೆ ಐದು ಗಂಟೆಗೆ ಸೂರ್ಯ ಮೂಡುತ್ತಿದ್ದ.

ನಾನು ಚಂದ್ರು ಸಮುದ್ರದಲ್ಲಿ ಮೀನುಗಳೇನಾದರೂ ಕಾಣುತ್ತವೆಯೋ ನೋಡುತ್ತಾ ಅಡ್ಡ ಗೋಡೆಯ ಮೇಲೆ ನಡೆಯುತ್ತಾ ಸಾಗಿದೆವು. ಮೊದಲು ನಮಗೆ ಏನೂ ಕಾಣಲಿಲ್ಲ. ಕೊಂಚ ಹೊತ್ತಿನ ಅನಂತರ ಚಂದ್ರು "ಅಲ್ಲೊಂದು ಮೀನು!" ಎಂದು ಸಮುದ್ರದತ್ತ ಬೆಟ್ಟು ಮಾಡಿ ತೋರಿಸಿದರು. ಅಂಥ ತಿಳಿಯಾದ ನೀರಿನಲ್ಲೂ ದಿಟ್ಟಿಸುತ್ತಿದ್ದ ನನಗೆ ಮೊದಲು ಏನೂ ಕಾಣಲಿಲ್ಲ. ಅಷ್ಟರಲ್ಲಿ ಆ ಮೀನು ಅಡ್ಡ ತಿರುಗಿ ಫಳ್ಳೆಂದು ಮಿಂಚಿತು. ತಕ್ಷಣ ನನಗೆ ಕಾಣಿಸಿತು.

ನಮ್ಮ ಆಕ್ವೇರಿಯಂಗಳಲ್ಲಿ ಸಾಕುವ ಏಂಜಲ್ ಮೀನಿನ ಆಕಾರದಲ್ಲಿದ್ದ ಆ ಮೀನು ರತ್ನಖಚಿತ ಆಭರಣದಂತೆ ತರತರದ ಬಣ್ಣಗಳಲ್ಲಿ ಮಿಂಚುತ್ತಿತ್ತು. ಮೈಮೇಲೆ ಹೇಸರಕತ್ತೆಗಳಿಗಿದ್ದಂತೆ ಹಳದಿ ಕಪ್ಪುಪಟ್ಟೆಗಳಿದ್ದವು. ಅದರ ಮೈಸುತ್ತ ಕೆಂಪುಪಟ್ಟೆಯ ಅಂಚು ಇತ್ತು. ಸಮುದ್ರದಲ್ಲಿ ದಂಡೆಗೆ ಇಷ್ಟು ಹತ್ತಿರದಲ್ಲೇ ಇಷ್ಟು ಸುಂದರ ಮೀನುಗಳು ಈಜಾಡುತ್ತಿರುವುದನ್ನು ನೋಡಿ ನಮಗೆ ತುಂಬ ಖುಷಿಯಾಯ್ತು. ಒಂದುಸಾರಿ ಮೀನುಗಳನ್ನು ಸಮುದ್ರದಲ್ಲಿ ಪತ್ತೆ ಮಾಡುವುದು ಕಣ್ಣಿಗೆ ಅಭ್ಯಾಸವಾದ ಕೂಡಲೆ ಪುಂಖಾನುಪುಂಖವಾಗಿ ತರತರದ ಬಣ್ಣ, ಆಕಾರಗಳ ಮೀನುಗಳು ನಮಗೆ ಗೋಚರಿಸತೊಡಗಿದವು. ಹಿಂದುಗಡೆ ತಿಳಿನೀಲಿಯ ಬಾಲಬಿಟ್ಟುಕೊಂಡು ಓಡಾಡುತ್ತಿದ್ದ ಗುಲಗಂಜಿ ಬಣ್ಣದ ಮೀನುಗಳ ಒಂದು ಗುಂಪೇ ಬಂದು ಏಂಜಲ್ ಮಾದರಿಯ ಮೀನುಗಳನ್ನು ಓಡಿಸಿದವು. ಅವುಗಳ ಬಳಿಯಲ್ಲೇ ಇನ್ನೊಂದು ಗುಂಪು ನೀಲಿ ಮೀನುಗಳು ಓಡಾಡುತ್ತಿದ್ದವು. ಕವಾತು ಮಾಡಿದಂತೆ ಎಲ್ಲ ಒಟ್ಟಿಗೆ ಅತ್ತಿತ್ತ ಹೊರಳುತ್ತಿದ್ದ ಆ ಮೀನಿನ ಗುಂಪು ಒಂದೇ ಪ್ರಾಣಿಯಂತೆ ವರ್ತಿಸುತ್ತಿದ್ದವು. ಈ ಮೀನಿನ ಗುಂಪುಗಳು ಎಷ್ಟೊಂದು ಆಕರ್ಷಕವಾಗಿದ್ದುವೆಂದರೆ ಏಕಾಗ್ರತೆಯಿಂದ ಇವುಗಳನ್ನೇ ನೋಡುತ್ತಿದ್ದ ನಮಗೆ ಆಚೀಚಿನ ಪರಿವೆಯೇ ಇರಲಿಲ್ಲ.

This PDF was created using the Sonic PDF Creator.
To remove this watermark, please license this product at www.investintech.com

ನಮ್ಮ ಹಿಂದುಗಡೆ ಶಬ್ದವಾದಂತಾಗಿ ನಾನು ಪಕ್ಕಕ್ಕೆ ತಿರುಗಿ ನೋಡಿದೆ. ನೋಡಿದರೆ ಜನಗಳ ದೊಡ್ಡ ಗುಂಪೇ ನಿಂತಿದೆ! ಕೆಲವರು ದಾರಿಯ ಪಕ್ಕದಲ್ಲಿ ಸ್ಕೂಟರು ಕಾರುಗಳನ್ನೆಲ್ಲ ನಿಲ್ಲಿಸಿ ಇಳಿಯುತ್ತಿದ್ದಾರೆ! ಏನಾದರೂ ರಸ್ತೆ ಅಪಘಾತ ಸಂಭವಿಸಿದೆಯೆ ನೋಡಿದೆ. ಏನೂ ಕಾಣಲಿಲ್ಲ! ಬಂದವರೆಲ್ಲ ನಮ್ಮ ಮುಖಮುಖ ನೋಡಿ ಸಮುದ್ರದತ್ತ ನೋಡುತ್ತಿದ್ದರು. ಒಬ್ಬ ನಮ್ಮನ್ನು "ಏನು? ಏನಾಗಿದೆ?" ಎಂದು ಹಿಂದಿಯಲ್ಲಿ ಕೇಳಿದ. ನನಗೆ ಚಂದ್ರುಗೆ ಹಿಂದಿ ಸರಿಯಾಗಿ ಬರುತ್ತಿರಲಿಲ್ಲ. ಮಾತಾಡಿದರೆ ಅಸ್ಪಷ್ಟವಾಗಿ ಅರ್ಥವಾಗುತ್ತಿತ್ತಷ್ಟೆ. ಅದಕ್ಕೇ ನಾನು ಇಂಗ್ಲಿಷಿನಲ್ಲಿ "ಫಿಷ್" ಎಂದು ಹೇಳಿದೆ.

"ಫಿಷ್"

"ಒಹೋ ಫಿಷ್!"

"ಫೀಷ್ ಷ್!"

"ವಾವ್ವಾ ಫೀಷ್!"

ಗುಂಪಿನಿಂದ ತರತರದ ಉದ್ಗಾರಗಳು ಏಳತೊಡಗಿದವು. "ಕ್ಯಾ ಬಡಾ ಫೀಷ್" ಎನ್ನುತ್ತಾ ಇಡೀ ಗುಂಪು ಅಡ್ಡ ಗೋಡೆ ಹತ್ತಿ ದಿಗಂತದ ಕಡೆಗೆ ಕೈ ಅಡ್ಡ ಇಟ್ಟುಕೊಂಡು ನಿರುಕಿಸತೊಡಗಿತು. ಅವರು ಅತ್ತ ನೋಡುತ್ತಿರಬೇಕಾದರೆ ನಾನು ಚಂದ್ರು ಬೇಗ ಅಲ್ಲಿಂದ ಜಾಗ ಖಾಲಿ ಮಾಡಿದೆವು.

ದೂರದಿಂದ ಹಿಂದಿರುಗಿ ನೋಡಿದಾಗ ಗುಂಪು ಖಾಲಿಯಾಗತೊಡಗಿತ್ತು. ಕೆಲವರು ಸ್ಕೂಟರ್‌ಗಳನ್ನು ಒದೆಯುತ್ತ ಸ್ಟಾರ್ಟ್ ಮಾಡಲು ಹೆಣಗುತ್ತಿದ್ದರು.

"ಏನ್‌ಸಾರ್, ನಮ್ಮ ಪಾಡಿಗೆ ನಾವು ಮೀನುಗಳನ್ನು ಸ್ಟಡಿ ಮಾಡೋಣ ಎಂದರೆ ಈ ದಾರಿ ಶನಿಗಳ ಕಾಟ!" ಎಂದು ಚಂದ್ರು ಗೊಣಗಿದರು.

"ಬಡ್ಡಿಮಕ್ಕಳು ಯಾರದೋ ಹೆಣ ನೋಡ್ತಿದ್ದೀವಿ ಅಂತ ತಿಳಿದು ಓಡಿಬಂದಿದ್ದಾರೆ" ಎಂದು ನಾನು ಶಪಿಸಿದೆ.

"ಹಾಗಾದ್ರೆ ಸರ್ಯಾಗೆ ಫೂಲ್ ಮಾಡಿದೆವು ಬಿಡಿ", ಎಂದು ಚಂದ್ರು ಸಮಾಧಾನಪಟ್ಟರು.

* * *

ಕಲ್ಲುಬಂಡೆಗಳ ಮೇಲೆ ಕುಳಿತು ನಮ್ಮ ಗಾಣಗಳಿಗೆ ಮೀನು ಸಿಕ್ಕಿಸಿ ಬೀಸಿದಾಗ ನಮ್ಮ ಪಶ್ಚಿಮಕ್ಕೆ ನಿಧಾನವಾಗಿ ಮೋಡ ದಟ್ಟೈಸುತಿತ್ತು. ಸುತ್ತ

This PDF was created using the Sonic PDF Creator.
To remove this watermark, please license this product at www.investintech.com

ಮುತ್ತಣ ಖಾಲಿ ಆಕಾಶದಿಂದೆಲ್ಲ ಮೋಡಗಳು ಉದ್ಭವಿಸಿ ಪಶ್ಚಿಮದತ್ತ ಧಾವಿಸುತ್ತಿದ್ದನು. ನಾವು ದಾರಿಹೋಕರ ಕಾಟಕ್ಕೆ ಹೆದರಿ ಪೋರ್ಟ್‌ಬ್ಲೇರ್ ಪಟ್ಟಣದಿಂದ ತುಂಬಾ ದೂರ ಬಂದಿದ್ದವು. ದಾರಿ ಸಮುದ್ರದ ಪಕ್ಕದಲ್ಲೇ ಇದ್ದ ಕಡಿದಾದ ಕಣಿವೆಯ ಕಡೆಗೆ ಸಾಗುತ್ತಿತ್ತು.

ದಾರಿಯಲ್ಲಿ ಬರುತ್ತಾ ಒಬ್ಬ ಬಲೆ ಹಿಡಿದುಕೊಂಡು ಬರುತ್ತಿದ್ದವ ಇದುರಾದ. ಅವನ ಉಬ್ಬಿದ ಜೋಳಿಗೆಯನ್ನು ನೋಡಿ ನಾವು ಅವನ ಬಳಿ ಮೀನು ಮಾರಾಟಕ್ಕೆ ಇದೆಯೆ? ಎಂದು ಕೇಳಿದವು. ನಮಗೆ ಗಾಳಕ್ಕೆ ಚುಚ್ಚಲು ಮೀನುಗಳು ಬೇಕಾಗಿತ್ತು. ಅವನು ತೀರ ಅವಜ್ಞೆಯಿಂದ ಇಲ್ಲ ಇಲ್ಲ ಎಂದು ಹೇಳಿದ. ಆದರೆ ಆನಂತರ ಕುತೂಹಲದಿಂದ ನಮ್ಮ ರಾಡು ರೀಲುಗಳನ್ನು ಇದೇನೆಂದು ಕೇಳಿದ. ಹಿಂದಿ ಸರಿಯಾಗಿ ಬರದ ನಾವು ಸಮುದ್ರದ ಕಡೆಗೆ ಕೈತೋರಿಸಿ ಮೀನು ಹಿಡಿಯುವುದನ್ನು ಅಭಿನಯಿಸಿದವು. ತಕ್ಷಣವೇ ಅವನ ಮುಖ ಸಂತೋಷದಿಂದ ಅರಳಿ ನಾವು ಯಾಕೆ ಮೀನು ಕೇಳುತ್ತಿದ್ದೇವೆಂದು ಗೊತ್ತಾಯಿತು. "ಐಸಾ ಬೋಲೋ! ಐಸಾ ಬೋಲೋ!" ಎಂದೆನ್ನುತ್ತಾ ತನ್ನ ಕಸುಬಿನವರೇ ಎನ್ನುವ ಆತ್ಮೀಯತೆಯಿಂದ ರಸ್ತೆ ಪಕ್ಕಕ್ಕೆ ಕರೆದು ಜೋಳಿಗೆ ಬಿಚ್ಚಿದ. ಒಂದೆರಡು ಮೀನುಗಳನ್ನು ಅದರೊಳಗಿಂದ ಆರಿಸಿ "ಇದನ್ನು ಹಾಕಿ. ನಿಮಗೆ ಮೀನು ಸಿಗುವುದು ಗ್ಯಾರಂಟಿ!" ಎಂದು ಪ್ರೋತ್ಸಾಹಿಸುತ್ತ ಕೈಗಿತ್ತ. ನಾವು "ಕಿತ್ನಾ ಪೈಸ?" ಎಂದು ಕೇಳಿದ್ದನ್ನು ಕಿವಿಗೇ ಹಾಕಿಕೊಳ್ಳದೆ ಈಗ ಮೀನು ಹಿಡಿಯಲು ಒಳ್ಳೆಯ ಸಮಯ ಎಂದೆನ್ನುತ್ತಾ "ಜಾವ್ ಜಾವ್" ಎಂದು ನಮ್ಮನ್ನು ಸಮುದ್ರದ ಕಡೆಗೆ ತಳ್ಳಿದ. ದುಡ್ಡು ತೆಗೆದಕೋ ಎಂದು ಇನ್ನೂ ಬಲತ್ಕಾರ ಮಾಡಿದರೆ ಎಲ್ಲಿ ನಮ್ಮನ್ನು ಸಮುದ್ರಕ್ಕೇ ತಳ್ಳಿಬಿಡುತ್ತಾನೋ ಎಂದು ಹೆದರಿ ಅವನ ಆಜ್ಞೆಯ ಪ್ರಕಾರ ನಾವು ಸಮುದ್ರದ ಕಡೆಗೆ ನಡೆದವು.

ನಾವು ಕುಳಿತಿದ್ದ ಬಂಡೆಯನ್ನು ಸಮುದ್ರ ಸುತ್ತುವರಿದಿತ್ತು. ಒಂದೇ ಒಂದು ಕಡೆ ಮಾತ್ರ ದಡದತ್ತ ಹೋಗಲು ಬಂಡೆಗಳ ಸಾಲುಗಳು ಇದ್ದವು. ನಾವು ಬರುವುದಕ್ಕೆ ಮೊದಲು ಬಣ್ಣಬಣ್ಣದ ಏಡಿಗಳು ಅಡ್ಡಾಡುತ್ತಿದ್ದವು. ನಮ್ಮನ್ನು ಕಂಡೊಡನೆಯೇ ಚಕ್ಕನೆ ಬಂಡೆಯ ಬಿರುಕಿನೊಳಗೆ ಓಡಿ ಮಾಯವಾದವು. ನಾವು ಗಾಳಬೀಸಿ ನಿಶ್ಚಲವಾಗಿ ಕೊಂಚಹೊತ್ತು ಕುಳಿತ ನಂತರ ಅವು ಕೊಂಚ ಧೈರ್ಯ ತಗೊಂಡು ಹೊರಗಿಣುಕಿದವು. ನಾವು ಗಾಳಕ್ಕೆ ಹಾಕಿ ಮಿಕ್ಕ ಮೀನಿನ ಚೂರುಗಳನ್ನು ಅಲ್ಲೇ ಎಸೆದಿದ್ದವು. ಅವುಗಳನ್ನು ಅಪಹರಿಸಲು ಕೆಲವು

This PDF was created using the Sonic PDF Creator.
To remove this watermark, please license this product at www.investintech.com

ಹೊಂಚು ಹಾಕುತ್ತಿದ್ದವು. ನಾವು ಕೊಂಚ ಅಲ್ಲಾಡಿದರೂ ಸಾಕು, ಮತ್ತೆ ಚಕ್ಕನೆ ಬಿರುಕಿನೊಳಗೆ ಮಾಯವಾಗುತ್ತಿದ್ದವು.

ಇವನ್ನೇ ಗಮನಿಸುತ್ತಾ ನಮಗೆ ಪಶ್ಚಿಮದಲ್ಲಿ ಮೋಡ ಸ್ನಿಗ್ಧವಾಗುತ್ತಾ ಕಪ್ಪಾಗತೊಡಗಿದ್ದು ಗೊತ್ತಾಗಲಿಲ್ಲ. ಫಳೀರೆಂದು ಒಂದು ಮಿಂಚು ಹೊಳೆದು ಗುಡುಗತೊಡಗಿದಾಗಲೇ ನಾವು ಕತ್ತೆತ್ತಿ ನೋಡಿದ್ದು. ಮೋಡ ದಟ್ಟವಾಗಿ ಮಧ್ಯದಲ್ಲಿ ಬೆಣ್ಣೆ ಕಡೆಯುವಾಗ ಮೊಸರು ತಿರುಗುವಂತೆ ತಿರುಗುತ್ತಾ ಇತ್ತು. ಮಳೆ ಬಂದರೆ ನಿಂತುಕೊಳ್ಳಲು ನಮಗೆ ಸುತ್ತ ಮುತ್ತ ಯಾವ ಆಸರೆಯೂ ಕಾಣಲಿಲ್ಲ. ಆದರೂ ಮೋಡ ನಮ್ಮಿಂದ ದೂರವೇ ಇದ್ದುದರಿಂದ ನಾವು ಧೈರ್ಯಮಾಡಿ ಕುಳಿತೆವು.

ನಾನು ಎರಡನೆಯಬಾರಿ ನೋಡಿದಾಗ ಮೋಡದ ಮಧ್ಯಭಾಗ ಗಿರಿಗಿರಿ ತಿರುಗುತ್ತಾ ಫನಲ್ಲಿನ ತ್ರಿಕೋನಾಕಾರ ತಾಳುತ್ತಿತ್ತು. ನಾನು ಚಂದ್ರು ಗಮನ ಅತ್ತ ಸೆಳೆದೆ. ಇಬ್ಬರೂ ಅದನ್ನ ನೋಡತೊಡಗಿದೆವು. ಫನಲ್ಲಿನ ಮಧ್ಯಭಾಗ ಗಿರಿಗಿರಿ ಸುತ್ತುತ್ತಾ ಕಂಬದಂತೆ ಕೆಳಗಿಳಿಯತೊಡಗಿತು. ಸುಮಾರು ಮುಕ್ಕಾಲು ಭಾಗ ಇಳಿದಿರಬಹುದು. ಆ ಕಂಬದ ಕೆಳಗೆ ಸರಿಯಾಗಿ ಸಮುದ್ರದ ನೀರೂ ಸುತ್ತತೊಡಗಿತು. ನಾವು ನೋಡುತ್ತಿದ್ದಂತೆಯೇ ಸಮುದ್ರದತ್ತಣಿಂದ ಒಂದು ನೀರಿನ ಕಂಬ ಆಕಾಶದ ಕಡೆಗೆ ಮೇಲೇಳತೊಡಗಿತು. ಎರಡೂ ಕೂಡಿಕೊಂಡು ಆಕಾಶದಿಂದ ಮೋಡದವರೆಗೆ ಗಿರಿಗಿರಿ ಸುತ್ತುವ ಒಂದೇ ಒಂದು ಕಂಬವಾಯಿತು. ಅಮೇರಿಕಾದ ದಕ್ಷಿಣದಲ್ಲಿ ಆಸ್ತಿವಾಸ್ತಿಗೂ ಜನರ ಪ್ರಾಣಗಳಿಗೂ ಅಪಾರ ಹಾನಿ ಮಾಡುವ ಈ ಟಾರ್ನೆಡೋಗಳ ಬಗ್ಗೆ ತುಂಬಾ ಓದಿದ್ದೆ. ಹಾಗೂ ಬರೆದೂ ಇದ್ದೆ. ಆದರೆ ಈ ಹವಾಮಾನ ವಿಚಿತ್ರವನ್ನು ಆ ದಿನ ಕಣ್ಣಾರೆ ನೋಡಿದೆವು. ಆ ಕಂಬ ಕೊಂಚಹೊತ್ತು ತಿರುಗಿದ ನಂತರ ಮಧ್ಯ ಕಟ್ಟಾಗಿ ಒಂದುಭಾಗ ಸಮುದ್ರದ ಕಡೆಗೂ ಇನ್ನೊಂದು ಭಾಗ ಮೋಡದ ಕಡೆಗೂ ಹಿಮ್ಮೆಟ್ಟಿತು. ಆನಂತರ ಮಳೆಮೋಡ ನಮ್ಮಿಂದ ನಿಧಾನವಾಗಿ ದೂರಾಗತೊಡಗಿತು.

ಆ ಹೊತ್ತಿಗೆ ಸರಿಯಾಗಿ ಚಂದ್ರು ಗಾಣದ ದಾರವನ್ನು ಯಾವುದೋ ಮೀನು ಜಗ್ಗಿತು. ಚಂದ್ರು ದಾರ ಎಳೆದುಕೊಂಡು ನೋಡಿದರು. ಅವರು ಗಾಳಕ್ಕೆ ಸಿಕ್ಕಿಸಿದ್ದ ಚಿಕ್ಕ ಮೀನನ್ನು ಯಾವುದೋ ದೊಡ್ಡ ಮೀನು ಕಿತ್ತು ತಿಂದಿತ್ತು. ಮತ್ತೊಂದು ಮೀನನ್ನು ಸಿಕ್ಕಿಸಿ ಗಾಳ ಬೀಸಿ ಕುಳಿತರು. ನನ್ನ ಗಾಳವನ್ನೂ ಒಂದು ಮೀನು ಎಳೆಯತೊಡಗಿತು. ದಾರ ಸುತ್ತಿಕೊಂಡಾಗ ಒಂದು ಕರ್ರಗಿದ್ದ

This PDF was created using the Sonic PDF Creator.
To remove this watermark, please license this product at www.investintech.com

ಮೀನು ಗಾಳಕ್ಕೆ ಸಿಕ್ಕಿಕೊಂಡಿದ್ದನ್ನು ಕಂಡೆ. ಸಮುದ್ರದ ಅಪರಿಚಿತ ಮೀನುಗಳನ್ನು ಕೈಯಲ್ಲಿ ಮುಟ್ಟುವುದು ಅಪಾಯಕರ ಎಂದು ಮಲ್ಪೆಯಲ್ಲಿ ಒಂದು ಮೀನು ನನಗೆ ಚೆನ್ನಾಗಿ ಪಾಠ ಕಲಿಸಿತ್ತು. ಅಲ್ಲಿ ಗಾಳಕ್ಕೆ ಸಿಕ್ಕಿದ್ದ ಮೀನನ್ನು ಗಾಳ ಬಿಡಿಸಲು ಹಿಡಿದುಕೊಡಾಗ ಆ ಮೀನಿನ ಯಾವುದೋ ಅಂಗ ನನ್ನ ಕೈಗೆ ಚುಚ್ಚಿದಂತಾಯ್ತು. ನನಗೆ ಚುಚ್ಚಿದ್ದೊಂದೇ ಗೊತ್ತು. ಆಮೇಲೆ ಮುಂದೇನಾಯ್ತೆಂದು ಗೊತ್ತಿಲ್ಲ. ಸುಮಾರು ಎರಡು ಗಂಟೆಗಳವರೆಗೆ ಕಣ್ಣು ಕತ್ತಲೆ ಬರುವಷ್ಟು ಬಲವಾದ ನೋವಿನ ಅಲೆಗಳು ನನ್ನನ್ನು ಆಕ್ರಮಿಸಿದ್ದವು.

ಗಾಳಕ್ಕೆ ಸಿಕ್ಕಿದ್ದ ಆ ಕರಿಯ ಮೀನನ್ನು ನೋಡಿ ನನಗೆ ಮುಟ್ಟಲು ನಿಜವಾಗಿಯೂ ಭಯವಾಗಿ ಒಂದು ಚೀಲ ಸುತ್ತಿಕೊಂಡು ಅದನ್ನು ಹಿಡಿದೆ. ಅದು ನಿರಪಾಯದ ಮೀನಿನಂತೆ ಕಂಡಿತು. ದೂರದಿಂದ ಕರ್ರಗೆ ಅಪಾಯಕಾರಿ ಮೀನಿನಂತೆ ಕಂಡರೂ ಕೈಯಲ್ಲಿ ತುಂಬ ಸುಂದರವಾಗಿ ಕಂಡಿತು. ಅದರ ಮೈಮೇಲೆಲ್ಲ ಚಿರತೆಗಳಿಗೆ ಇರುವಂತೆ ನೀಲವರ್ಣದ ಹೊಳೆಯುವ ಚುಕ್ಕೆಗಳಿದ್ದವು. ಅಂಡಮಾನಿನಲ್ಲಿ ಹಿಡಿದ ನಮ್ಮ ಈ ಮೊಟ್ಟಮೊದಲ ಮೀನನ್ನು ವಾಪಾಸ್ ಬಿಡಲು ಮನಸ್ಸಾಗಲಿಲ್ಲ. ಸೆಲ್ಯುಲಾರ್ ಜೇಲನ್ನು ನೋಡಲು ಹೋದ ಗೆಳೆಯರಿಗೆ ತೋರಿಸಲು ಚೀಲದೊಳಕ್ಕೆ ಹಾಕಿದೆ.

ಹಠಾತ್ತಾಗಿ ಸಮುದ್ರದ ಅಲೆಗಳು ಬಿರುಸಾಗ ತೊಡಗಿದವು. ಅಲೆಗಳು ಗಾಳದ ದಾರವನ್ನು ಅತ್ತಿತ್ತ ಬಲವಾಗಿ ತುಯ್ಯತೊಡಗಿದವು. ಸಮುದ್ರದ ಮಟ್ಟ ಮೆಲ್ಲಗೆ ಏರತೊಡಗಿತು. ಆಗಲೇ ಕತ್ತಲಾಗತೊಡಗಿತ್ತು. ಸಮುದ್ರದ ಉಬ್ಬರ ಆರಂಭವಾಯ್ತೆಂದು ಊಹಿಸಿ ನಾವು ಜಾಗ ಖಾಲಿ ಮಾಡಲು ಸನ್ನದ್ಧರಾದೆವು. ನಾವು ಕುಳಿತಿದ್ದ ಬಂಡೆಗೆ ದಾಟಿಕೊಂಡು ಬಂದಿದ್ದ ಬಂಡೆಗಳ ಸಾಲು ಮುಳುಗತೊಡಗಿತ್ತು. ಸಮುದ್ರದ ನೀರು ಏರಿ ನಮ್ಮನ್ನು ಸುತ್ತುವರಿದಿದ್ದರೆ ನಾವು ಕತ್ತಲಲ್ಲಿ ದಂಡೆಗೆ ಹೋಗುವುದು ಸಾಧ್ಯವಿರಲಿಲ್ಲ.

ಗಾಳ ಸುತ್ತಿ ರಾಡು ಮಡಚಿಕೊಂಡು ಯೂತ್‌ಹಾಸ್ಟೆಲ್ ದಾರಿ ಹಿಡಿದೆವು.

ದಾರಿಯಲ್ಲಿ ಸೆಲ್ಯುಲಾರ್ ಜೇಲನ್ನು ನೋಡಹೋದವರ ಗುಂಪು ವಾಕ್ ಬರುತ್ತಾ ಇತ್ತು. ಅವರೊಡನೆ ಬೆಳವಾಡಿಯವರ ಹೆಂಡತಿ ಪಾರ್ವತಿ ಸಹಾ ಸೇರಿದ್ದರು.

This PDF was created using the Sonic PDF Creator.
To remove this watermark, please license this product at www.investintech.com

ರಾಮದಾಸ್ ಬುಸುಬುಸು ಸಿಗರೇಟಿನ ಹೊಗೆ ಬಿಡುತ್ತಾ "ಏನ್ರೀ ಏನಾದ್ರು ಶಿಕಾರಿ ಆಯ್ತಾ?'' ಎಂದರು. ನಾವು ಅನರ್ಘ್ಯ ರತ್ನವನ್ನು ತೋರಿಸುವಂತೆ ಆ ಕರಿಮೀನನ್ನು ತೆಗೆದು ಅದರ ವರ್ಣ ಸಂಯೋಜನೆಯನ್ನು ಸರಿಯಾಗಿ ವಿವರಿಸಲು ಅವರನ್ನು ಬೀದಿ ದೀಪಗಳಡಿಗೆ ಕರೆದೊಯ್ದೆವು.

This PDF was created using the Sonic PDF Creator.
To remove this watermark, please license this product at www.investintech.com

# 7. ರಾಸ್ಐಲೆಂಡ್ ಮತ್ತು ಮಲೇರಿಯಾ

"ಇವರೇ ಇಬ್ರಾಹಿಂ'' ಎಂದು ಬೆಳ್ವಾಡಿ ಒಬ್ಬರನ್ನು ಪರಿಚಯ ಮಾಡಲು ಯೂತ್ ಹಾಸ್ಟೆಲಿನ ಮೇಲಕ್ಕೆ ಕರೆದುಕೊಂಡು ಬಂದರು.

ಕತ್ತಲಾಗಿತ್ತು. ಚಂದ್ರು ಅವರ ನಾರು, ಬೇರು, ಗಿಡಗಳ ಸಂಗ್ರಹ ಗಳನ್ನೆಲ್ಲಾ ಪರೀಕ್ಷಿಸುತ್ತಿದ್ದರು. ಮಲ್ಲಿಕ್ ಅವರ ಕೀಟಗಳನ್ನು ಹಿಡಿಯುವ ನೆಟ್‌ಗಳನ್ನು ಸರಿಮಾಡಿಕೊಳ್ಳುತ್ತಿದ್ದರು. ಅವರಿಬ್ಬರ ಮಂಚಗಳ ಬಳಿಯೂ ಮೀನು ಮಾರ್ಕೆಟ್ ಬಳಿ ಬರುವಂಥ ವಾಸನೆ ಬರುತ್ತಿತ್ತು. ಕೇಳಿದರೆ "ಅವನು ಎಂಥೆಂಥದೋ ದುರ್ವಾಸನೆಯ ಸ್ಪೆಸಿಮನ್‌ಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದಾನೆ'' ಎಂದು ಒಬ್ಬರೂ "ಅವನು ಸ್ಪೆಸಿಮನ್‌ಗಳನ್ನು ಸರಿಯಾಗಿ ಪ್ರಿಸರ್ವ್ ಮಾಡು ತ್ತಿಲ್ಲ'' ಎಂದು ಇನ್ನೊಬ್ಬರೂ ಒಬ್ಬರ ಮೇಲೊಬ್ಬರು ಹೇಳಿ ಜಗಳ ಆಡುತ್ತಿದ್ದರು.

ಶಾಂತ ಬಸವರಾಜು ಇಬ್ಬರೂ ಪರೀಕ್ಷೆಗೆ ಕುಳಿತವರಂತೆ ಮಂಚದ ಮೇಲೆ ಕುಳಿತುಕೊಂಡು ದಿನಚರಿ ನೋಟ್ಸ್ ಬರೆಯುತ್ತಿದ್ದರು. ಇಬ್ಬರೂ ಒಟ್ಟಿಗೇ ಓಡಾಡುತ್ತಿದ್ದುದರಿಂದ ಇಬ್ಬರೂ ಬೇರೆಬೇರೆ ದಿನಚರಿ ಯಾಕೆ ಬರೆಯಬೇಕೋ ಗೊತ್ತಾಗಲಿಲ್ಲ. ಅವರಿಬ್ಬರೂ ದಿನಚರಿ ನೋಟ್ಸ್ ಬರೆಯುತ್ತಿದ್ದುದನ್ನು ನೋಡಿ ದರೆ ಅಂಡಮಾನಿನಿಂದ ಹಿಂದಿರುಗಿದ ಮೇಲೆ ನಮಗೆಲ್ಲಾ ಪರೀಕ್ಷೆಗಳಿವೆಯೇನೋ ಎನ್ನುವಂತೆ ಭಾಸವಾಗುತ್ತಿತ್ತು. ನಿಜವಾದ ಪರೀಕ್ಷೆಗೆ ನಾನು ನೋಟ್ಸ್ ಮಾಡಿರ ಲಿಲ್ಲ. ಇನ್ನು ಅಂಡಮಾನಿಗೆ ಬಂದು ನೋಟ್ಸ್ ಬರೆಯುವುದಂತೂ ನನ್ನಿಂದ ಸಾಧ್ಯವಿರಲಿಲ್ಲ.

This PDF was created using the Sonic PDF Creator.
To remove this watermark, please license this product at www.investintech.com

ರಾಜೇಶ್ವರಿ, ಉಷಾ, ನಿರ್ಮಲಾ ತಾವು [illegible] ತಂದ [illegible] ನೋಡಿದ ಕಪ್ಪುಬೆಳ್ಳಿನ ಆಭರಣಗಳ ಬಗ್ಗೆ, [illegible] ಪ್ರಾಯೋಗಿಕ ವಿಮರ್ಶೆ ನಡೆಸುತ್ತಿದ್ದರು.

ಪುಟ್ಟಪರ್ತಿ ಸಾಯಿಬಾಬಾ ಮಾದರಿಯ ತಲೆಗೂದಲು [illegible] ಬೆಳ್ವಾಡಿಯ ಬೆನ್ನಹಿಂದೆ ಕಾಣಿಸಿತು. ನಾನು ಕುತೂಹಲದಿಂದ ನೋಡಿದೆ. ಸಾಯಿಬಾಬಾ ಬುಷ್‌ಕೋಟ್ ಪ್ಯಾಂಟ್‌ಗಳನ್ನು ಧರಿಸಿದರೆ ಹೇಗೆ ಕಾಣುವುದೋ ಹಾಗಿರುವ ಕುಳ್ಳಗಿನ ವ್ಯಕ್ತಿ ನಮಸ್ಕಾರ ಎಂದು ಮುಂಬಂದು ತಮ್ಮ ಪರಿಚಯ ಮಾಡಿಕೊಂಡರು. ಅವರು ಕನ್ನಡವನ್ನೇ ಮಾತಾಡುತ್ತಿದ್ದುದರಿಂದ ಅವರೂ ಕನ್ನಡಿಗರೇ ಎಂದು ಸ್ಪಷ್ಟವಾಯಿತು.

ಬಸವರಾಜು ತಾವು ಮಂಗಳೂರಿನವರೆಂದು ಪರಿಚಯಿಸಿದ ಕೂಡಲೇ ಇಬ್ರಾಹಿಂ ಮುಖ ಮಂದಹಾಸದಿಂದ ತುಳುಕಿ "ಎಂಚಿನ" ಎಂದು ತುಳುವಿನಲ್ಲಿ ಮಾತಾಡತೊಡಗಿದರು. ಕೇವಲ ಒಂದು ವರ್ಷದ ಹಿಂದಷ್ಟೆ ಮಂಗಳೂರಿಗೆ ವರ್ಗವಾಗಿದ್ದ ಬಸವರಾಜು ಅವರ ಭಾಷೆ ಹಠಾತ್ ಬದಲಾದುದನ್ನು ಕಂಡು ಗಾಬರಿ ಬಿದ್ದರು.

ಇಬ್ರಾಹಿಂ ಮಂಗಳೂರಿನವರು. ಮಂಗಳೂರಿನಿಂದ ಅಂಡಮಾನಿಗೆ ಬಂದು ಸುಮಾರು ಐವತ್ತು ವರ್ಷಗಳಾಗಿದ್ದವು. ಯೂತ್ ಹಾಸ್ಟೆಲ್ ಕೆಳಗಡೆ ಇದ್ದ ಹೋಟೆಲು ಅವರದೇ. ಇಡೀ ಪೋರ್ಟ್‌ಬ್ಲೇರ್‌ನಲ್ಲಿ ಇಬ್ರಾಹಿಂ ಹೋಟೆಲು ಬಿಟ್ಟರೆ ಇನ್ಯಾವುದೂ ಒಳ್ಳೆಯ ಹೋಟೆಲು ನನಗೆ ಕಂಡು ಬರಲಿಲ್ಲ. ಹೋಟೆಲು ನಡೆಸುವುದರ ಜೊತೆಗೆ ಇಬ್ರಾಹಿಂ ಹಲವು ಮೀನು ಹಿಡಿಯುವ ದೋಣಿಗಳನ್ನು ಇಟ್ಟುಕೊಂಡು ಮೀನುಗಾರರಿಗೆ ಬಾಡಿಗೆ ಕೊಡುತ್ತಿದ್ದರು.

ಬೆಳ್ವಾಡಿ "ನಿಮಗೇನೇ ಅಗತ್ಯ ಬಂದರೂ, ಏನೇ ತೊಂದರೆ ಬಂದರೂ ಇಬ್ರಾಹಿಂರವರಿಗೆ ಕೇಳಿ, ಮಾಡಿಕೊಡುತ್ತಾರೆ. ಅಂಡಮಾನಿನಲ್ಲಿರುವ ಕರ್ನಾಟಕದವರಿಗೆಲ್ಲಾ ಇಬ್ರಾಹಿಂ ಗಾಡ್‌ಫಾದರ್. ಅಂಡಮಾನಿನಲ್ಲಿ ಕರ್ನಾಟಕ ಸಂಘದ ಮುಂದಾಳು ಇವರು" ಎಂದು ಇಬ್ರಾಹಿಂರವರ ಸಾಮರ್ಥ್ಯ, ಕಾರ್ಯಕ್ಷಮತೆ, ವಿಚಕ್ಷಣೆಗಳನ್ನು ಬಾಯ್ತುಂಬಾ ಹೊಗಳಿದರು. ನಾನು ತಿಳಿದಂತೆ ಅಂಡಮಾನಿನಲ್ಲಿ ನಾನು ಸಂಧಿಸಿದ ಕನ್ನಡಿಗರೆಲ್ಲಾ ಇಬ್ರಾಹಿಂಗೆ ಚಿರಪರಿಚಿತರಂತೆ ಕಂಡರು.

"ಅದೇನು ಕರ್ನಾಟಕ ಬಿಟ್ಟು ಅಂಡಮಾನಿಗೆ ಬಂದು ನೆಲೆಸಿದ್ದೀರಿ?" ಎಂದು ನಾನು ಇಬ್ರಾಹಿಂರನ್ನು ಕೇಳಿದೆ.

This PDF was created using the Sonic PDF Creator.
To remove this watermark, please license this product at www.investintech.com

“ಹೊಟ್ಟೆ, ಹೊಟ್ಟೇಪಾಡು ನನ್ನನ್ನು ಇಲ್ಲಿಯವರೆಗೆ ಕರೆದುಕೊಂಡು ಬಂತು” ಎಂದರು. ಆದರೆ ಹಾಗೆಂದವರು ಇದ್ದಕ್ಕಿದಂತೆ ತಮ್ಮ ಮಾತಿನ ಧಾಟಿ ಬದಲಾಯಿಸಿ “ಈ ಅಂಡಮಾನ್ ನನಗೆ ಮೆಕ್ಕಾದಷ್ಟೇ ಪವಿತ್ರವಾದದ್ದು. ನಮ್ಮ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಅನೇಕ ಮಹಾತ್ಮರ ಪುಣ್ಯಭೂಮಿ ಇದಲ್ಲವೇ? ನಾನು ಸಮುದ್ರದ ದಡದಲ್ಲಿ ಅನೇಕ ಸಂಜೆಗಳು ಕುಳಿತು ಆ ಮಹಾತ್ಮರ ಧ್ಯೇಯ, ಆದರ್ಶ, ಜೀವನಗಳನ್ನು ಧ್ಯಾನಿಸುತ್ತ ಕಾಲಕಳೆದಿದ್ದೇನೆ. ನಮ್ಮಂಥ ಕ್ಷುದ್ರಜೀವಿಗಳು ಎಲ್ಲಿದ್ದರೇನು ಬಿಡಿ. ನಾವು ಕರ್ನಾಟಕದಲ್ಲಿದ್ದರೂ ಒಂದೆ ಇಲ್ಲಿದ್ದರೂ ಒಂದೆ!” ಎಂದು ಭಾವುಕರಾಗಿ ಸಿನೆಮಾ ಹೀರೋಗಳಂತೆ ಒಂದು ಭಾಷಣ ಬಿಗಿದರು. ನಾವೆಲ್ಲಾ ಗಂಭೀರವಾಗಿ ಅಷ್ಟೇ ಭಾವುಕರಂತೆ ಧ್ಯಾನಸ್ಥಿತಿಯನ್ನು ನಟಿಸಿದೆವು.

ಹೊಟ್ಟೆಪಾಡಿಗಾಗಿ ಇಲ್ಲಿಗೆ ಬಂದೆ ಎಂದು ಹೇಳಿದ ಇಬ್ರಾಹಿಂರಿಗೆ ಕೆಲವೇ ಕ್ಷಣಗಳ ಹಿಂದೆ ಬೆಳ್ವಾಡಿ ಅವರ ಬಗ್ಗೆ ಹೇಳಿದ ಪರಾಕುಗಳು ಜ್ಞಾಪಕಕ್ಕೆ ಬಂದಿರಬೇಕು. ತಮ್ಮ ಘನತೆಗೆ ತಕ್ಕಂಥ ಮಾತುಗಳನ್ನು ಆಡಬೇಕೆಂದು ಹಾಗೊಂದು ಭಾವುಕ ಭಾಷಣ ಬಿಗಿದರೋ ಏನೋ! ಅಥವಾ ಅವರಿಗೆ ಅಂಡಮಾನಿನಲ್ಲಿ ಮಡಿದ ವೀರರ ಬಗ್ಗೆ ಅಂಥ ಭಾವುಕ ಭಕ್ತಿ ಇತ್ತೋ ಏನೋ!

“ನಿಮಗೇನು ಸಹಾಯ ಬೇಕಾದರೂ ನನ್ನನ್ನು ಕೇಳಿರಿ” ಎಂದು ಇಬ್ರಾಹಿಂ ಹೇಳಿದರು. ನಮಗೆ ಸದ್ಯಕ್ಕೆ ಕೇಳಲು ಏನೂ ಹೊಳೆಯಲಿಲ್ಲ. ಚಂದ್ರು ಮಾತ್ರ ನಮ್ಮ ಗಾಣಕ್ಕೆ ಸಿಕ್ಕಿಸಲು ಬೇಕಾದ ಪುಡಿಮೀನುಗಳನ್ನು ಕೊಂಡು ತಂದು ದಾಸ್ತಾನಿಡಲು ಅವರ ಹೋಟೆಲಿನ ರೆಫ್ರಿಜಿರೇಟರಿನಲ್ಲಿ ಜಾಗ ಕೇಳಿದರು.

ನಾವು ಗಾಳಹಾಕಿ ಮೀನು ಹಿಡಿಯುತ್ತೇವೆಂದು ತಿಳಿದೊಡನೆಯೆ ಇಬ್ರಾಹಿಂಗೆ ಆತ್ಮೀಯತೆ ಮೂಡತೊಡಗಿತು. ಅವರು ಅಂಡಮಾನಿಗೆ ಮೊದಲು ಬಂದಾಗ ಭರ್ಜಿ ಹಿಡಿದುಕೊಂಡು ನೀರಿನಲ್ಲಿ ಮುಳುಗಿ ಬೇಟೆಯಾಡಿ ಮೀನು ಹಿಡಿಯುತ್ತಿದ್ದರಂತೆ! ಆ ರೀತಿಯ ಮೀನು ಬೇಟೆಯ ವಿವರಗಳನ್ನು ನಮಗೆ ತಿಳಿಸಿದರು. ರೆಫ್ರಿಜರೇಟರಿನಲ್ಲಿಟ್ಟ ಹಳಸಲು ಮೀನುಗಳನ್ನು ಗಾಳಕ್ಕೆ ಹಾಕುವುದು ಪ್ರಯೋಜನವಿಲ್ಲವೆಂದೂ, ಮಾರ್ಕೆಟ್ಟಿನಲ್ಲಿ ಸಿಗುವ “ಕಪತಾರಿಣಿ” ಎನ್ನುವ ಮೀನೇ ಗಾಳಕ್ಕೆ ಚುಚ್ಚಲು ಬಹಳ ಯೋಗ್ಯವಾದುದೆಂದೂ ಹೇಳಿದರು. ಚಂದ್ರು ಆ ಮೀನಿನ ಹೆಸರನ್ನು ಉರುಹಚ್ಚಲು ಆರಂಭಿಸಿದರು.

This PDF was created using the Sonic PDF Creator.
To remove this watermark, please license this product at www.investintech.com

ಇಬ್ರಾಹಿಂ ಹೋಟೆಲನ್ನು ನೋಡಿಕೊಳ್ಳಲು ಮಗನನ್ನು ಬಿಟ್ಟು ಒಂದು ಹಡಾಸು ಸೈಕಲ್ ತೆಗೆದುಕೊಂಡು ಇಡೀ ಪೋರ್ಟ್‌ಬ್ಲೇರಿನ ಉಬ್ಬುತಗ್ಗುಗಳಲ್ಲಿ ತಿರುಗುತ್ತಿದ್ದರು. ಆದರೆ ಬೆಳಗಿನ ಹೊತ್ತು ಮಾತ್ರ ದಿನಾ ಹೋಟೆಲಿನಲ್ಲಿರುವುದನ್ನು ತಪ್ಪಿಸುತ್ತಿರಲಿಲ್ಲ. ಬೆಳಿಗ್ಗೆ ಕುಳಿತುಕೊಂಡು ನೂರಾರು ತಿಂಡಿ ಪ್ಯಾಕೆಟ್‌ಗಳನ್ನು ಕಟ್ಟುತ್ತಿದ್ದರು. ಮೊದಲನೆಯ ದಿನ ಇದೇಕೆಂದು ನಾನು ಕೇಳಿದೆ. ಯೂತ್ ಹಾಸ್ಟೆಲಿನ ಎದುರುಗಡೆ ಸುಭಾಸ್‌ಪಾರ್ಕಿನ ಒಂದು ಭಾಗದಲ್ಲಿ ದೊಡ್ಡ ಆಟದ ಮೈದಾನ ಇತ್ತು. ಅಲ್ಲಿ ದಿನಾ ಶಾಲೆಯ ಮಕ್ಕಳಿಗೆ ಬೆಳಗಿನ ಝಾವ ಆಟ ಮತ್ತು ವ್ಯಾಯಾಮದ ಟ್ರೇನಿಂಗ್ ನಡೆಯುತ್ತಿತ್ತು. ಅದೆಲ್ಲಾ ಆದನಂತರ ಅವರಿಗೆ ಯೂತ್ ಹಾಸ್ಟೆಲಿನಲ್ಲಿ ಅವರಿಗೆ ತಿಂಡಿಯ ಪ್ಯಾಕೆಟ್‌ಗಳನ್ನು ಹಂಚುತ್ತಿದ್ದರು. ಒಂದು ಪ್ಯಾಕೆಟ್ಟಿಗೂ ತಿಂಡಿ ಕಡಿಮೆ ಬಾರದಂತೆ ನೋಡಿಕೊಳ್ಳುತ್ತಿದ್ದ ಇಬ್ರಾಹಿಂರ ಕೆಲಸ ನೋಡಿ ನನಗೆ ತುಂಬಾ ಸಂತೋಷವಾಯ್ತು. "ಇದರಲ್ಲಿ ಸ್ವಲ್ಪ ಮೋಸ ಮಾಡಿದರೂ ನನಗೆ ನೂರಾರು ರೂಪಾಯಿ ಲಾಭ ಆಗುತ್ತೆ. ಆದರೆ ನಾನು ಕೈತಪ್ಪಿ ಕೂಡ ಕಡಿಮೆಯಾಗದಂತೆ ನೋಡಿಕೊಳ್ಳುತ್ತೇನೆ. ಯಾರಿಗೆ ಮೋಸ ಮಾಡಿದರೂ ನನಗೆ ಮಕ್ಕಳಿಗೆ ಮೋಸ ಮಾಡಲು ಸಾಧ್ಯವಿಲ್ಲ. ಮಕ್ಕಳಿಗೆ ಮೋಸ ಮಾಡಿದರೆ ದೇವರಿಗೆ ಮೋಸಮಾಡಿದಂತೆ" ಎಂದರು. ಇಬ್ರಾಹಿಂ ವ್ಯಕ್ತಿತ್ವ ನಿಜವಾಗಿಯೂ ಭಾವುಕವಾದುದಿರಬಹುದು!

ಯೂತ್ ಹಾಸ್ಟೆಲಿಗೆ ಹೋದ ಮೊದಲನೆಯ ದಿನವೇ ಇಬ್ರಾಹಿಂ ಬಂದು "ಇಲ್ಲಿ ತುಂಬಾ ಸೊಳ್ಳೆಗಳಿವೆ. ಸೊಳ್ಳೆ ಪರದೆ ಇಲ್ಲದೆ ಇಲ್ಲಿ ಮಲಗಿದರೆ ಬೆಳಿಗ್ಗೆ ನಿಮ್ಮ ರಕ್ತವನ್ನಷ್ಟೂ ಸೊಳ್ಳೆಗಳು ಕುಡಿದುಬಿಟ್ಟಿರುತ್ತವೆ. ಜೊತೆಗೆ ಮಲೇರಿಯಾ ಸಹ ನಿಮಗೆ ಬರಬಹುದು. ಯೂತ್ ಹಾಸ್ಟೆಲಿನ ಸೆಕ್ರೆಟರಿ ಬಳಿ ಸೊಳ್ಳೆಪರದೆ ಕೇಳಿ ತೆಗೆದುಕೊಳ್ಳಿ" ಎಂದು ಹೇಳಿದರು. ಅವರು ಹೇಳಿದ್ದು ಅಕ್ಷರಶಃ ನಿಜವಾಗಿತ್ತು. ಸಂಜೆಯಾಗುತ್ತಿದ್ದಂತೆಯೇ ಜೇನು ಹುಳುಗಳ ಗಾತ್ರದ ಸೊಳ್ಳೆಗಳು "ಜೊಯ್" ಎಂದು ಸದ್ದು ಮಾಡುತ್ತಾ ಕಿಟಕಿಗಳೆಡೆಯಿಂದ ನುಗ್ಗಿದವು. ಸೊಳ್ಳೆಪರದೆ ಹಾಕಿಕೊಂಡಿದ್ದರೂ ಪರದೆಗೆ ಎಲ್ಲಾದರೂ ಮೈ ಕೈ ತಾಗಿಕೊಂಡಿದ್ದರೆ ಸಾಕು, ಹೊರಗಿನಿಂದಲೇ ಇಂಜಕ್ಷನ್ ಕೊಟ್ಟು ಬಿಡುತ್ತಿದ್ದವು. ಹೇಗೋ ಸೊಳ್ಳೆ ಪರದೆಗಳೊಳಗೆ ನುಸುಳಿಕೊಂಡ ಕೆಲವು ಸೊಳ್ಳೆಗಳು ರಕ್ತಹೀರಿ ಮಸಿಕುಡಿಕೆಗಳಂತೆ ಊದಿಕೊಂಡಿದ್ದ ತಮ್ಮ ಹೊಟ್ಟೆ ಹೊತ್ತುಕೊಂಡು ಹಾರಲಾರದೆ ಏಗುತ್ತಿದ್ದುದನ್ನು ನೋಡಬಹುದಿತ್ತು.

This PDF was created using the Sonic PDF Creator.
To remove this watermark, please license this product at www.investintech.com

ಈ ಸೊಳ್ಳೆಗಳ ಕಾಟ ಆದಷ್ಟು ಕಡಿಮೆ ಮಾಡಲು ನಾನು ರಾಮ[illegible] [illegible] ಮೂರು ಜನರೂ ಸಮುದ್ರಕ್ಕೆ ಒಂದು ಹಳೆಯ ಜೆಟ್ಟಿ ಕಟ್ಟಿದ್ದರು, [illegible] [illegible]ತ್ತು. ಅಲ್ಲಿ ಗಾಳ ಹಾಕಿಕೊಂಡು ರಾತ್ರಿ ಹನ್ನೆರಡು ಗಂಟೆವ[illegible] [illegible]ತ್ತಿದ್ದೆವು. ಅಲ್ಲಿ ಕೊಂಚ ದೂರಕ್ಕೆ ಹೊಸದೊಂದು ಜೆಟ್ಟಿ ಕಟ್ಟ[illegible] ಅಲ್ಲಿಗೆ ಬೆಳಗ್ಗೆ ಮೀನು ಹಿಡಿಯಹೋದ ದೋಣಿಗಳೆಲ್ಲಾ ತಾವು [illegible] ಮೀನನ್ನು ತುಂಬಿಕೊಂಡು ರಾತ್ರಿ ಹಿಂದಿರುಗುತ್ತಿದ್ದವು. ಅಲ್ಲಿ ಏನೇನೋ ವಿ[illegible] ವ್ಯಾಪಾರ ನಡೆಯುತ್ತಿದ್ದುದು ನಮಗೆ ದೂರದಿಂದ ಕಾಣುತ್ತಿತ್ತು

ಒಂದು ದಿನ ನಾವು ಬಂದ್ರು ಸಿಮ್ಲಾ ರಾಮದಾಸ್ ನಾಲ್ಕು ಜ[illegible] ಅಲ್ಲಿ ಏನು ನಡೆಯುತ್ತಿದೆ, ಮತ್ತು ಎಂಥಂಥ ಮೀನುಗಳಿರುತ್ತವೆ ನೋಡ[illegible]ವೆಂದು ಕುತೂಹಲದಿಂದ ಹೋದೆವು. ಬಡ ಮೀನುಗಾರರ ಜೋಪಡಿ ಸಾಲು[illegible] ನಡುವಿನ ದಾರಿಯಲ್ಲಿ ಅಲ್ಲಿಗೆ ಹೋಗಬೇಕಿತ್ತು. ಮೀನುಗಾರರ ಜೆಟ್ಟಿ[illegible] ಹೋದಾಗ ಮೀನುಗಳನ್ನೇನೋ ಅಲ್ಲಿ ರಾಶಿ ಹಾಕಿಕೊಂಡಿದ್ದರು. ಆದರೆ ಅವುಗಳನ್ನು ನೋಡಲು ವ್ಯವಧಾನವಿಲ್ಲದಂತೆ ಅಲ್ಲಿರುವಷ್ಟು ಜನರೂ ರೌರ ಸ್ವರೂಪದಲ್ಲಿ ಕೂಗಾಡುತ್ತ ಜಗಳವಾಡುತ್ತಿದ್ದರು. ಹೆಂಗಸರೂ ಸಹ ಸಕ್ರಿಯವಾಗಿ ಭಾಗವಹಿಸಿ ಗಂಡಸರಿಗೆ ಅವಾಚ್ಯ ಶಬ್ದಗಳಿಂದ ಅವರ ಭಾಷೆಯಲ್ಲಿ ಬೈಯುತ್ತಿದ್ದರು. ಅವು ಅವಾಚ್ಯ ಶಬ್ದಗಳಿರಬೇಕೆಂದು ಅವರ ಮುಖ ಕೈಗಳ ಅಭಿನಯದಿಂದ ನಾನು ಊಹಿಸಿದೆ.

ನಾವು ಕೊಂಚಹೊತ್ತು ಮೀನು ನೋಡುವುದರ ಬದಲು ಜಗಳವನ್ನೇ ನೋಡಿದೆವು. ಅವರ ಜಗಳ ಯಾಕೆಂದು ಅರ್ಥವಾಗದೆ ರಾಮದಾಸ್ ಅಲ್ಲಿಯೇ ನಮ್ಮಂತೆ ನಿಂತಿದ್ದ ಒಬ್ಬನನ್ನು ಇಂಗ್ಲಿಷಿನಲ್ಲಿ ಯಾಕೆ ಜಗಳವಾಡುತ್ತಿದ್ದಾರೆಂದು ಕೇಳಿದರು. ಆದರೆ ಅವನು ವಿವರಿಸಲು ಬಾಯಿ ಬಿಡುವುದರೊಳಗೇ ಅಲ್ಲಿ ಜಗಳವಾಡುತ್ತಿದ್ದ ಇಬ್ಬರು ಬಂದು ರಾಮ್‌ದಾಸ್‌ಗೆ ಅವರ ಭಾಷೆಯಲ್ಲಿ ನ್ಯಾಯ ಒಪ್ಪಿಸತೊಡಗಿದರು. ಅವರ ರೋಷಭರಿತ ಭಂಗಿಗೆ ಹೆದರಿದ ರಾಮದಾಸ್ ಸರಿಸರಿ ಎನ್ನುವಂತೆ ತಲೆಯಲ್ಲಾಡಿಸಿದರು. ತಕ್ಷಣ ಅವರಿಬ್ಬರೂ ಹಿಂದಿರುಗಿ, ನೋಡಿದೆಯಾ ಅವರ ಅಭಿಪ್ರಾಯ ಎಂದು ಅಭಿನಯಪೂರ್ವಕವಾಗಿ ಹೇಳುತ್ತ ಎದುರಾಳಿಗಳ ಕುತ್ತಿಗೆ ಹಿಡಿದು ತಳ್ಳಿದರು.

ಕ್ಷಣಾರ್ಧದಲ್ಲಿ ಅಲ್ಲಿದ್ದವರೆಲ್ಲಾ ಒಂದೊಂದು ಮೀನನ್ನು ತೆಗೆದುಕೊಂಡು ರಪರಪ ಹೊಡೆದಾಡತೊಡಗಿದರು. ರಾಮದಾಸ್ ತಲೆಯಾಡಿಸಿದ್ದರ

This PDF was created using the Sonic PDF Creator.
To remove this watermark, please license this product at www.investintech.com

ಪರಿಣಾಮ ನೋಡಿ ಗಾಬರಿಯಾಯ್ತು. ಹೆಂಗಸರೂ ಸಹ ಕೆರ‍್ರೋ ಪೆರ‍್ರೋ ಎಂದು ಕೂಗುತ್ತಾ ಗಂಡಸರಿಗೆ ಸಮಾನ ಸ್ಪರ್ಧಿಗಳಾಗಿ ಭಾಗವಹಿಸಿದ್ದರು. ನಾವು ಇನ್ನೂ ಇಲ್ಲಿ ನಿಂತಿದ್ದರೆ ಮೀನುಗಳಿಂದ ಹೊಡೆತ ಬಿದ್ದೀತೆಂದು ಹೆದರಿ ಯೂತ್ ಹಾಸ್ಟೆಲಿನ ಕಡೆಗೆ ಕಾಲು ಕಿತ್ತೆವು. ಬೆಳಗಿನ ಅಲೆದಾಟ ಮುಗಿದ ಮೇಲಿನ ನಮ್ಮ ರಾತ್ರಿಯ ದಿನಚರಿಗಳಿವು. "ಅಂಡಮಾನ್ ಬೈ ನೈಟ್."

ಒಂದು ದಿನ ರಾತ್ರಿ ನಾವು ಹೀಗೆ ಸುತ್ತಾಡಿ ಬಂದು ಮಲಗುವ ಹವಣಿಕೆಯಲ್ಲಿದ್ದಾಗ "ಇಬ್ರಾಹಿಂ ಮಗನಿಗೆ ಸೀರಿಯಸ್ ಖಾಯಿಲೆಯಾಗಿ ಆಸ್ಪತ್ರೆಗೆ ಸೇರಿಸಿದಾರಂತೆ" ಎಂದು ಯಾರೋ ಹೇಳಿದರು. ಏನು ಕಾಯಿಲೆ ಎಂದು ಕೇಳಿದ್ದಕ್ಕೆ "ಮಲೇರಿಯಾ" ಎಂದರು.

ಸಸ್ಯವೈದ್ಯರಾದ ಚಂದ್ರು ಹಾಗೂ ಮಲ್ಲಿಕ್ ಕಡೆ ತಿರುಗಿ ನಾನು "ಮಲೇರಿಯಾ ಹಾಗೆ ಇದ್ದಕ್ಕಿದಂತೆ ಆಸ್ಪತ್ರೆಗೆ ಸೇರಿಸುವಷ್ಟು ಸೀರಿಯಸ್ಸಾಗಿ ಆಗುವುದಿಲ್ಲವಲ್ಲ" ಎಂದೆ. ಚಂದ್ರು "ಮಲೇರಿಯಾದಲ್ಲಿ ಸೆರೆಬ್ರಲ್ ಮಲೇರಿಯಾ ಅಂತ ಒಂದು ಇದೆ. ಅದು ನಮ್ಮ ಮೆದುಳಿಗೆ ಬರುತ್ತೆ. ಅದು ಬಂದರೆ ಮಾತ್ರ ಕೂಡಲೇ ಆಸ್ಪತ್ರೆಗೆ ಸೇರಿಸಬೇಕಾಗುತ್ತೆ. ಆದರೂ ಅದು ಬಂದವರು ಉಳಿಯುವುದು ಕಷ್ಟ" ಎಂದರು. ಮಲೇರಿಯಾ ಕ್ರಿಮಿಗಳ ಬಗ್ಗೆ ಅದರಿಂದ ಬರುವ ಚಳಿಯ ಬಗ್ಗೆ ಅದು ಸ್ಪ್ಲೀನ್‌ನಲ್ಲಿ ದ್ವಿಗುಣಗೊಳ್ಳುವ ರೀತಿಯ ಬಗ್ಗೆ ಮಲ್ಲಿಕ್ ವ್ಯಾಪಕ ವಿವರಣೆ ಕೊಟ್ಟರು. ಇದರ ಜೊತೆಗೆ ರಾಮದಾಸ್ ಕಾಲೇಜಿಗೆ ಸೇರುವುದಕ್ಕೆ ಮೊದಲು ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಮಲೇರಿಯಾ ಎರಾಡಿಕೇಶನ್ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದರಂತೆ! ಅವರೂ ಸಹ ರೋಗ ವಿವರಗಳನ್ನು ಉದಾಹರಣೆ ಸಹಿತ ಕೊರೆದರು.

ಇವರು ಮೂವರ ವಿವರಣೆಗಳೂ ಮುಗಿಯುವ ಹೊತ್ತಿಗೆ ಕೇಳಿದವರೆಲ್ಲಾ ಮಂಕಾಗಿ ತಮ್ಮ ಜೀವದ ಮೇಲಿನ ಆಸೆ ತೊರೆಯತೊಡಗಿದರು. ಕೆಲವರು. "ನಿನ್ನೆಯಿಂದ ಯಾಕೋ ನಮಗೆ ಸ್ವಲ್ಪ ಮೈಕೈ ನೋವು" ಎಂದರು. ಕೆಲವರಿಗೆ ಚಳಿ, ಕೆಲವರಿಗೆ ಜ್ವರದ ಅನುಭವವಾಗತೊಡಗಿತು. ನನಗಂತೂ ಕಿಟಕಿಯಿಂದ ಒಳ ಬರುತ್ತಿದ್ದ ಸೊಳ್ಳೆಗಳೆಲ್ಲಾ ಮಲೇರಿಯಾ ಹಬ್ಬಿಸುವ "ಅನಾಫಿಲೀಸ್" ಸೊಳ್ಳೆಗಳಂತೆಯೇ ಕಾಣತೊಡಗಿದವು.

ಪೋರ್ಟ್‌ಬ್ಲೇರ್ ಒಮ್ಮೆ ನನಗೆ ಮೀನೂ ಸರ್ಕಾರಿಯ ಸಿಕ್ಕು ಆಸ್ಪತ್ರೆಯಲ್ಲಿ ಮಲೇರಿಯಾ ನಿರೋಧಕ ಗುಳಿಗೆಗಳನ್ನು ಕೊಡುತ್ತಾರೆಂದೂ ಅದನ್ನು

This PDF was created using the Sonic PDF Creator.
To remove this watermark, please license this product at www.investintech.com

ತೆಗೆದುಕೊಂಡರೆ ಮಲೇರಿಯಾ ಬರುವುದಿಲ್ಲೆಂದೂ ಹೇಳಿದ್ದು ಜ್ಞಾಪಕಕ್ಕೆ ಬಂದು ಗೆಳೆಯರಿಗೆ ಧೈರ್ಯ ಕೊಡಲು ಅದನ್ನು ಹೇಳಿದೆ. ಅಂಡಮಾನಿನಿಂದ ಜೀವ ಸಮೇತ ಊರಿಗೆ ಹಿಂದಿರುಗಿದರೆ ಸಾಕೆಂದು ಎಲ್ಲರೂ ನನಗೂ ಚಂದ್ರಶೇಖರ್‌ಗೂ ನಾಳೆ ಆಸ್ಪತ್ರೆಗೆ ಹೋಗಿ ಅದನ್ನು ತೆಗೆದುಕೊಂಡು ಬರಬೇಕೆಂದು ಕೇಳಿಕೊಂಡರು.

ಇವೆಲ್ಲಾ ಅಂಡಮಾನ್ ಬೈ ನೈಟ್ ಅನುಭವಗಳು. ಬೆಳಿಗ್ಗೆ ಎದ್ದರೆ ದೂರದಲ್ಲಿ ಮಿನುಗುವ ಸಮುದ್ರ, ಹಸಿರುಡೆಯುಟ್ಟು ಬಿಸಿಲಿನಲ್ಲಿ ಝಗಝಗಿಸುವ ಬೆಟ್ಟ ಗುಡ್ಡಗಳು. ಮಲೇರಿಯಾ ರೋಗ ಸಾವು ಇತ್ಯಾದಿಗಳೆಲ್ಲ ಎಂದೋ ಬಿದ್ದ ದುಃಸ್ವಪ್ನದಂತಾಗಿ ಅದನ್ನು ಅಲಕ್ಷಿಸಿ ಇವತ್ತು ಎಲ್ಲಿಗೆ ಅಲೆದಾಡಲು ಹೋಗೋಣೆಂದು ಲೆಕ್ಕ ಹಾಕುತ್ತಿದ್ದೆವು.

* * *

ನಮ್ಮ ಯೂಥ್ ಹಾಸ್ಟೆಲ್ ಎದುರಿಗೆ ದೂರದಲ್ಲಿ ಒಂದು ಚಿಕ್ಕ ದ್ವೀಪ ಕಾಣುತ್ತಿತ್ತು. ಅದರ ಹೆಸರು ರಾಸ್ ಐಲೆಂಡ್ ಎಂದು. ಒಂದು ದಿನ ಪ್ರಶಾಂತ್ ಬಂದು 'ನಾಳೆ ಅಲ್ಲಿಗೆ ಹೋಗೋಣ, ನೌಕಾಪಡೆಯ ಅಧಿಕಾರಿಗಳಿಂದ ಅಲ್ಲಿಗೆ ಹೋಗಲು ಪರವಾನಗಿ ದೊರೆತಿದೆ' ಎಂದು ಹೇಳಿದರು. ಆ ದ್ವೀಪ ನೌಕಾಪಡೆಯ ಆಡಳಿತದಲ್ಲಿ ಇದೆಯಂತೆ!

ನಾನು ಚಂದ್ರು ಸಮುದ್ರದ ದಂಡೆಗೆ ಹೋಗಿ ಕೋರಲ್‌ಗಳನ್ನು ಸಂಗ್ರಹಿಸಿ, ಬಂಡೆಗಳ ಬಳಿ ಇರುವ ರಾಕ್ ಫಿಷ್‌ಗಳನ್ನು ಹಿಡಿಯಬೇಕೆಂದು ಹಂಚಿಕೆ ಹೂಡಿದ್ದೆವು. ಯಾವುದನ್ನು ಸಾಕಷ್ಟು ಅಭ್ಯಾಸ ಮಾಡಲು ಸಮಯ ಸಿಗುತ್ತಿಲ್ಲ, ಬರೇ ತಿರುಗಾಟದಲ್ಲೇ ಕಾಲ ಸರಿಯುತ್ತಿದೆ ಎಂದು ನನಗೆ ಕಳವಳ ಆಗತೊಡಗಿತ್ತು. ಅದಕ್ಕಾಗಿ ನಾವು ರಾಸ್ ಐಲೆಂಡಿಗೆ ಬರುವುದಿಲ್ಲ, ನೀವೇ ಹೋಗಿ ಎಂದು ಹೇಳಿದೆವು. ರಾಜೇಶ್ವರಿ, ಉಷಾ, ಮಲ್ಲಿಕ್, ಶಾಂತ, ಬಸವರಾಜು, ನಿರ್ಮಲಾ, ರಾಮದಾಸ್ ಇಷ್ಟು ಜನವೂ ರಾಸ್ ಐಲೆಂಡಿಗೆ ಹೊರಟರು.

ನಾವು ಸಮುದ್ರದಿಂದ ವಾಪಸ್ ಬಂದಾಗ ರಾಸ್ ಐಲೆಂಡಿಗೆ ಹೋದ ಗ್ಯಾಂಗು ಹಿಂದಿರುಗಿದ್ದರು. ರಾಜೇಶ್ವರಿ ನೀವು ಅಲ್ಲಿಗೆ ಬರದೆ ತುಂಬಾ ತಪ್ಪು ಮಾಡಿದಿರಿ ಎಂದು ಹೇಳಿ ರಾಸ್ ಐಲೆಂಡಿನ ವರ್ಣನೆ ಮಾಡಿದಳು. ಬಹುಕಾಲದ ಹಿಂದೆ ಬ್ರಿಟಿಷರು ಕಟ್ಟಿಸಿದ ಮರಾರಗಳು ಅವರ ಚರ್ಚ್, ರುದ್ರಭೂಮಿ ಪ್ರತಿಯೊಂದೂ ಇನ್ನೂ ಇದೆ. ಎಲ್ಲದರ ಮೇಲೂ ಆಲದ ಮರಗಳು ಬೆಳೆದು

This PDF was created using the Sonic PDF Creator.
To remove this watermark, please license this product at www.investintech.com

ಕೊಂಡು ಅವುಗಳ ಬೇರಿನ ಪಂಜರದಲ್ಲಿ ಕಟ್ಟಡಗಳೆಲ್ಲಾ ಕುಸಿಯದೆ ನಿಂತಿರು ವುದನ್ನು ನೋಡಲು ಅದ್ಭುತವಾಗಿದೆ ಎಂದು ಹೊಗಳಿದಳು.

ಆ ದ್ವೀಪಕ್ಕೆ ಕ್ಯಾಮರಾಗಳನ್ನು ಒಯ್ಯುವಂತಿಲ್ಲ. ಫೋಟೋಗಳನ್ನು ತೆಗೆಯುವಂತಿಲ್ಲ. ವಿನಾಕಾರಣ ಅದನ್ನು ಗೋಪ್ಯ ಸ್ಥಳವೆಂದೂ ಯಾಕೆ ನಿರ್ಣಯಿಸಿದ್ದಾರೋ ಗೊತ್ತಾಗಲಿಲ್ಲ!

"ಅದ್ಯಾಕೆ ಅಲ್ಲಿಗೆ ಪರ್ಮಿಶನ್ ತಗೊಂಡು ಹೋಗಬೇಕು. ಅಲ್ಲೇನಾದರೂ ನೌಕಾಪಡೆಯ ಸಾಧನಗಳಿವೆಯ?'' ಎಂದು ಕೇಳಿದೆ. ನೌಕಾಪಡೆಯ ಇಬ್ಬರು ಕಾವಲುಗಾರರನ್ನು ಬಿಟ್ಟರೆ ಅಲ್ಲಿ ಇನ್ನೇನೂ ಇರಲಿಲ್ಲ ಎಂದು ರಾಜೇಶ್ವರಿ ಹೇಳಿದಳು. ಮಲ್ಲಿಕ್ "ಅಲ್ಲಿ ಕೋಟ್ಯಂತರ ರೂಪಾಯಿ ಚಿನ್ನ ಇದೆಯಂತೆ!'' ಎಂದರು. ನಾನು ಮೊದಲು ಅವರು ತಮಾಷೆ ಮಾಡಲು ಹೇಳುತ್ತಿದ್ದಾರೆ ಎಂದು ಊಹಿಸಿದೆ. ಆದರೆ ನಿಜವಾಗಿಯೂ ಹಾಗೊಂದು ಪ್ರತೀತಿ ಇದೆಯೆಂದು ಗೊತ್ತಾಯ್ತು.

ಬ್ರಿಟಿಷರು ಅಂಡಮಾನ್ ದ್ವೀಪಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಾಗ ಆಗಿನ ಪರಿಸ್ಥಿತಿ ಈಗಿನದಕ್ಕಿಂತ ಭಿನ್ನವಾಗಿತ್ತು. ಅಂಡಮಾನ್ ದ್ವೀಪಗಳು ಕಾಡುಜನರಿಂದ ತುಂಬಿದ್ದವು. ಅವರನ್ನು ಬಿಟ್ಟರೆ ಅಲ್ಲಿದ್ದವರು ಜೇಲಿನ ಕಳ್ಳರು. ಇವುಗಳಿಂದಾಗಿ ಅಂಡಮಾನ್ ಬ್ರಿಟಿಷರಿಗೆ ಅಪಾಯಕರ ಜಾಗವಾಗಿತ್ತು. ಆದ್ದರಿಂದ ಬ್ರಿಟಿಷರು ತಮ್ಮ ವಠಾರವನ್ನು ಪೂರ್ತಿ ರಾಸ್ ಐಲೆಂಡಿನಲ್ಲಿ ನಿರ್ಮಿಸಿಕೊಂಡಿದ್ದರು. ಸಂಜೆಯಾಗುತ್ತಿದ್ದಂತೆಯೇ ರಕ್ಷಿತ ಪ್ರದೇಶವಾದ ರಾಸ್ ಐಲೆಂಡಿಗೆ ಎಲ್ಲ ಯೂರೋಪಿಯನ್ನರೂ ತೆರಳುತ್ತಿದ್ದರು. ರಾಸ್ ಐಲೆಂಡಿನಲ್ಲೇ ಬಾಳಿಬದುಕಿ ಸತ್ತ ಅನೇಕ ಬ್ರಿಟಿಷರ ಗೋರಿಗಳೂ ತಲೆಬರಹದೊಂದಿಗೆ ಅಲ್ಲಿವೆ.

ಜಪಾನೀಯರು ಅಂಡಮಾನ್ ದ್ವೀಪಗಳ ಮೇಲೆ ದಾಳಿ ಆರಂಭಿಸಿದಾಗ ಬ್ರಿಟಿಷರು ಹಿಮ್ಮೆಟ್ಟಿ ಕೊನೆಗೆ ಅಂಡಮಾನ್ ದ್ವೀಪಗಳನ್ನು ತ್ಯಜಿಸಬೇಕಾಯ್ತು. ಬೇರೆಬೇರೆ ಪೂರ್ವದೇಶಗಳಿಂದ ಕೊಳ್ಳೆ ಹೊಡೆದು ತಂದಿದ್ದ ಸಂಪತ್ತು, ಚಿನ್ನ ಎಲ್ಲವೂ ಅಂಡಮಾನ್‌ನಲ್ಲಿ ದಾಸ್ತಾನು ಇಟ್ಟಿದ್ದರಂತೆ. ಬ್ರಿಟಿಷರು ಜಪಾನೀಯರ ಹಠಾತ್ ದಾಳಿಗೆ ತುತ್ತಾದಾಗ ಅವನ್ನೆಲ್ಲಾ ಹೊತ್ತೊಯ್ಯಲು ಅವರಿಗೆ ಸಾಧ್ಯವಾಗದೆ ರಾಸ್ ಐಲೆಂಡಿನಲ್ಲಿಯೇ ಅವನ್ನು ಎಲ್ಲೊ ಬಚ್ಚಿಟ್ಟು ಹಡಗು ಹತ್ತಿ ಪರಾರಿಯಾದರಂತೆ. ಜಪಾನೀಯರಿಗೆ ಅವು ಸಿಕ್ಕಿರುವ ದಾಖಲೆಗಳು ಇಲ್ಲದಿರುವುದರಿಂದ ಅದು ಇನ್ನೂ ರಾಸ್ ಐಲೆಂಡಿನಲ್ಲಿಯೇ ಎಲ್ಲೋ ನೆಲದಾಳ

This PDF was created using the Sonic PDF Creator.
To remove this watermark, please license this product at www.investintech.com

ದಲ್ಲಿ ಇದೆ ಎನ್ನುವ ಪ್ರತೀತಿ. ಆದರೆ ಬ್ರಿಟಿಷರು ತಾವು ದಾಸ್ತಾನು ಮಾಡಿದ್ದ ಧನಕನಕಾದಿಗಳನ್ನು ಅಲ್ಲಿ ಹುಗಿದಿಟ್ಟಿರುವುದಕ್ಕೆ ಯಾವ ದಾಖಲೆಗಳಿವೆಯೋ ಗೊತ್ತಿಲ್ಲ. ಪಾಳು ಬಿದ್ದ ಊರಿನ ಸುತ್ತಲ್ಲ ಕಾಡು ಹಬ್ಬುವಂತೆ ಈ ಕತೆಗಳೂ ಹಬ್ಬುವುದನ್ನು ನೋಡಿದ್ದೇನೆ. ಇವುಗಳಿಂದಾಗಿಯೇ ಹಾಳೂರುಗಳು ರಹಸ್ಯ ಮಯವಾಗುತ್ತ ಹೋಗುತ್ತದೆ. ಕೊನೆಗೆ ಅಲ್ಲಿ ಚಿನ್ನವನ್ನು ಕಾದುಕೊಂಡಿರುವ ಏಳು ಹೆಡೆಯ ಸರ್ಪಗಳು ಉದ್ಭವವಾಗುತ್ತವೆ. ನರಬಲಿ ಕೊಡುವವರೂ, ಅಂಜನ ಹಾಕಿ ಗುಪ್ತನಿಧಿ ಪತ್ತೆಮಾಡುವ ವಾಮಾಚಾರಿಗಳೂ ಅಲ್ಲಿಗೆ ಆಗಮಿಸುತ್ತಾರೆ! ರಾಸ್ ಐಲೆಂಡಿಗೆ ಪರವಾನಗಿ ಪಡೆದವರು ಮಾತ್ರ ಹೋಗಬೇಕೆಂದು ನೌಕಾಪಡೆ ಪ್ರತಿಬಂಧಿಸಿರುವುದು ಈ ದೃಷ್ಟಿಯಿಂದ ಒಳ್ಳೆಯದೇ ಇರಬಹುದು. ನಾನೇ ನಾದರೂ ಅಲ್ಲಿಗೆ ಹೋಗಿದ್ದರೆ ಒಂದೆರಡು ಕಡೆಗಳಲ್ಲಾದರೂ ನೆಲ ಕೆರೆದು ನೋಡುವ ಚಪಲಕ್ಕೆ ಸಿಕ್ಕಿಕೊಳ್ಳುತ್ತಿದ್ದೆನೆಂದು ಕಾಣುತ್ತದೆ.

*　　　*　　　*

“ಎಸ್ ಕಮೀನ್” ಎಂದು ಕೋಣೆಯೊಳಗಿನಿಂದ ಒಂದು ದನಿ ನಾನು ಬಾಗಿಲು ತಟ್ಟಿದಾಗ ಉತ್ತರಿಸಿತು. ನಾನು ಚಂದ್ರು ಬಾಗಿಲನ್ನು ತಳ್ಳಿಕೊಂಡು ಒಳಕ್ಕೆ ಹೋದೆವು. ಒಳಗೆ ಕನ್ನಡಕಧಾರಿ ವ್ಯಕ್ತಿಯೊಬ್ಬ ನಾಲ್ಕಾರು ಕಬ್ಬಿಣದ ಬೀರುಗಳ ನಡುವೆ ಲೆಫ್ಟಿನೆಂಟ್ ಗೌರ್ನರ್ ರೀತಿಯಲ್ಲಿ ಕುಳಿತಿದ್ದ. ನಾವು ಆತನ ಮೇಜಿನೆದುರು ನಿಂತೊಡನೆಯೆ ಕತ್ತೆತ್ತಿ ನೋಡಿ,

“ಯೆಸ್! ವಾಟ್ ಡುಯು ವಾಂಟ್?” ಎಂದ.

ಮಲೇರಿಯಾ ಮಹಾತ್ಮೆ ಕೇಳಿಕೇಳಿ ಬೇಜಾರಾಗಿ ಕೊನೆಗೂ ಮಲೇರಿಯಾ ನಿರೋಧಕ ಗುಳಿಗೆಗಳನ್ನು ತರಲು ನಾನು ಚಂದ್ರು ಹೆಲ್ತ ಡಿಪಾರ್ಟ್‌ಮೆಂಟಿಗೆ ಬಂದಿದ್ದೆವು. ಅಲ್ಲಿ ಕೆಲವಾರು ಕಾರಿಡಾರುಗಳನ್ನು ಸುತ್ತಿ ಕೊನೆಗೆ ಈ ಮಹಾನುಭಾವನ ಕಛೇರಿ ಪತ್ತೆ ಮಾಡಿದೆವು.

ಆತನ ತಲೆಯ ಮೇಲೆ ತಿರುಗುತ್ತಿದ್ದ ಫ್ಯಾನು, ಆತನ ಸುತ್ತಮುತ್ತ ಅಡಗಿದ್ದ ರಾಶಿ ರಾಶಿ ಫೈಲು, ಆತನ ಕೈಗೆ ನಮ್ರತೆಯಿಂದ ಫೈಲುಗಳನ್ನು ಕೊಟ್ಟು ಕೊಟ್ಟು ರುಜು ಹಾಕಿಸಿಕೊಳ್ಳುತ್ತಿದ್ದ ಸಹಾಯಕರು, ಇವರನ್ನೆಲ್ಲಾ ನೋಡಿ ನಾವು ಈತ ಸರ್ಜನ್ ಜನರಲ್ಲೋನೋ ಅಥವಾ ಆರೋಗ್ಯ ಇಲಾಖೆಯ ಡೈರೆಕ್ಟರೋ ಇರಬೇಕೆಂದು ತಿಳಿದೆವು. ಆಫೀಸನ್ನು ನೋಡಿ ನನಗೆ ವಿನಾಕಾರಣ ಗಲಿಬಿಲಿ ಗಾಬರಿಗಳು ಆರಂಭವಾದವು. ಯಾವುದೋ ಮೂರುಕಾಸಿನ ಮಾತ್ರೆ!

This PDF was created using the Sonic PDF Creator.
To remove this watermark, please license this product at www.investintech.com

ಅದರ ಹೆಸರು ಗೊತ್ತಿದ್ದರೆ ನಾವೇ ಅಂಗಡಿಯಲ್ಲಿ ಕೊಳ್ಳುತ್ತಿದ್ದೆವು. ಈ ಆಫೀಸಿನೊಳಕ್ಕೆ ಯಾಕಪ್ಪಾ ಬಂದೆವು! ಎಂದೆನ್ನಿಸಿತು.

"ನಾವು ಇಲ್ಲಿಗೆ ಪ್ರವಾಸಿಗಳಾಗಿ ಬಂದಿದ್ದೇವೆ!"

"ಓಹೋ"

"ನಮಗೆ ಕೊಂಚ ಮಲೇರಿಯಾ ಗುಳಿಗೆ?"

"ವಾಟ್? ವಾಟ್ ಮಲೇರಿಯಾ?"

ನಾವು ಮಲೇರಿಯಾ ಎನ್ನುತ್ತಿದ್ದಂತೆಯೇ ಅವನ ಸ್ವಂತ ವಿಷಯವನ್ನೇನೋ ಮಾತಾಡಿದೆವು ಎನ್ನುವಂತೆ ಕುರ್ಚಿಯಲ್ಲೇ ಕುಮುಟಿ ಬಿದ್ದ.

"ವೇರ್ ಈಸ್ ದಿ ಪೇಶಂಟ್?

"ಮಲೇರಿಯಾ ಯಾರಿಗೂ ಬಂದಿಲ್ಲ. ಇಲ್ಲಿ ತುಂಬಾ ಮಲೇರಿಯಾ ಇದೆ ಎಂದು ಕೆಲವರು ಹೇಳಿದರು. ಅದಕ್ಕೆ ನಿಮ್ಮ ಬಳಿ ರೋಗನಿರೋಧಕ ಗುಳಿಗೆ ಇದ್ದರೆ ಕೊಡಿ" ಚಂದ್ರು ಹೇಳಿದರು.

ಈ ಮಾತನ್ನು ಕೇಳಿ ಆತ ಇನ್ನಷ್ಟು ಕೆರಳಿದಂತೆ ಕಂಡಿತು. ತನ್ನ ಸಹಾಯಕರನ್ನು ಆಚೆಗೆ ಕಳಿಸಿ ವಿಚಾರಣೆ ನಡೆಸುವವನಂತೆ ನಮಗೆ ಎದುರಿನ ಕುರ್ಚಿ ತೋರಿಸಿ "ಪ್ಲೀಸ್ ಟೇಕ್ ಯುವರ್ ಸೀಟ್" ಎಂದ. ಆತನ ನಮ್ರತೆಯ ಹಿಂದೆ ಕಠೋರತೆಯನ್ನು ನಾನು ಗುರುತಿಸಿದೆ. "ನೋಡಿ ಮುಚ್ಚುಮರೆ ಯಾಕೆ? ನಿಮಗೆ ಇರೋದನ್ನು ತಿಳಿಸುತ್ತೇನೆ. ಅದಿರಲಿ, ಯಾರು ನಿಮಗೆ ಹೇಳಿದರು ಇಲ್ಲಿ ಮಲೇರಿಯಾ ಇದೆ ಅಂತ. ಇನ್ನೊಮ್ಮೆ ಯಾರಾದರೂ ಹಾಗೆ ಹೇಳಿದರೆ ಅವರ ಹೆಸರು ವಿಳಾಸ ತಗೊಳ್ಳಿ" ಎಂದ.

"ನಾವು ಇನ್ನೊಂದೆರಡು ದಿನದಲ್ಲೇ ಊರಿಗೆ ವಾಪಾಸಾಗುತ್ತೇವೆ. ವಿಳಾಸಗಳನ್ನು ತಿಳಿದು ನಿಮಗೆ ರಿಪೋರ್ಟ್ ಮಾಡಲು ನಮಗೆ ಸಮಯವೇ ಇಲ್ಲ. ತಾವು ಮಲೇರಿಯಾ ನಿರೋಧಕ ಗುಳಿಗೆ ಕೊಟ್ಟರೆ ನಾವು ಕೃತಜ್ಞರಾಗಿರುತ್ತೇವೆ" ಎಂದು ಹೇಳಿದೆ.

"ಯಾರು ಪ್ರವಾಸಿಗಳಿಗೆ ಹೀಗೆಲ್ಲಾ ಸುದ್ದಿ ಹಬ್ಬಿಸುತ್ತಾರೆ ಎಂದು ನಾನು ತಿಳಿಯಬೇಕಿದೆ! ಏನು ಜನ ಇವರು? ಈ ರೀತಿಯ ಬೇಜವಾಬ್ದಾರಿ ಹೇಳಿಕೆಗಳಿಂದ ಅಂಡಮಾನ್ ಟೂರಿಸಂ ಡೆವಲಪ್ ಆಗ್ತಾನೇ ಇಲ್ಲ. ಇದ

This PDF was created using the Sonic PDF Creator.
To remove this watermark, please license this product at www.investintech.com

ಬಹುದು, ಹುಡುಕಿದರೆ ಎಲ್ಲೋ ಒಂದೆರಡು ಮಲೇರಿಯಾ ಕೇಸು ಸಿಗಬಹುದು. ಹಾಗೆ ನೋಡಿದರೆ ಈಗ ಮಲೇರಿಯಾ ಎಲ್ಲಿ ಇಲ್ಲ? ಕಮಾನ್.....ಹೇಳಿ. ಡೆಲ್ಲಿ! ಡೆಲ್ಲಿಯಂಥ ಸಿಟಿಯಲ್ಲಿ ನಿಮಗೆ ತೋರಿಸಿ ಕೊಡ್ಲಾ ಮಲೇರಿಯಾನ? ಡೆಲ್ಲಿ ಯಾಕೆ ಕಾಶ್ಮೀರ್! ಆ ಚಳಿಯಲ್ಲಿ ಸೊಳ್ಳೆಗಳು ಬದುಕೋದೆ ಕಷ್ಟ. ಅಂಥಲ್ಲಿ ತೋರಿಸಿಕೊಡಲೋ ನಿಮಗೆ ಮಲೇರಿಯಾ?''

''ಇರಬಹುದು ಸಾರ್. ನಮಗೀಗ ಮಲೇರಿಯಾ ನಿರೋಧಕ ಗುಳಿಗೆ ಕೊಟ್ಟರೆ......''

''ಮಲೇರಿಯಾ! ನಾನ್ಸೆನ್ಸ್! ನಾನಿರಬೇಕಾದರೆ ನಿಮಗೆ ಯಾಕೆ ಹೆದರಿಕೆ. ಜಸ್ಟ್ ಫೋರ್ ಟ್ಯಾಬ್ಲೆಟ್ಸ್, ಮಲೇರಿಯಾ ವಿಲ್ ವ್ಯಾನಿಷ್! ಜೇಸ್ಟ್ ಫೋರ್ ಟ್ಯಾಬ್ಲೆಟ್ಸ್!'' ಎಂದು ಗುಟುರು ಹಾಕಿದ.

''ಅದು ಸರಿ. ಅದು ಮಲೇರಿಯಾ ಬಂದಾಗ. ಈಗ ನಮಗೆ ಮಲೇರಿಯಾ ನಿರೋಧಕ ಗುಳಿಗೆ ಬೇಕಾಗಿರೋದು.''

''ಮಲೇರಿಯಾ ನಿರೋಧಕ ಗುಳಿಗೆ ಅಂತ ಜಗತ್ತಿನಲ್ಲಿ ಯಾವುದೂ ಇಲ್ಲ. ಅದೂ ಅಲ್ಲದೆ ಅದನ್ನ ವಾಸಿ ಮಡೋದಕ್ಕೆ ಗುಳಿಗೆ ಇರಬೇಕಾದರೆ ನಿರೋಧಕ ಗುಳಿಗೆ ಯಾಕೆ? ಜೇಸ್ಟ್ ಫೋರ್ ಟ್ಯಾಬ್ಲೆಟ್ಸ್! ಮಲೇರಿಯಾ ವಿಲ್ ವ್ಯಾನಿಷ್!

''ಹಾಗಾದರೆ ನಮಗೆ ಮಲೇರಿಯಾ ನಿರೋಧಕ ಗುಳಿಗೇಂತ ಎಲ್ಲ ಹೇಳಿದರಲ್ಲ!''

''ನೋಡಿ ಮಲೇರಿಯಾ ರೋಗಿಗಳಲ್ಲಿ ಎರಡು ವಿಧ. ಒಂದು ಮೆಂಟಲ್ ಕೇಸು. ಇನ್ನೊಂದು ಫಿಜಿಕಲ್ ಕೇಸು. ಅವರಿವರ ಮಾತು ಕೇಳಿಕೊಂಡು ಮಲೇರಿಯಾ ಬಂದವರ ಹಾಗೇ ಆಡುತ್ತಾರಲ್ಲ, ಅವರಿಗೆ ಸೈಕಾಲಜಿಕಲ್ ಸ್ಯಾಟಿಸ್‌ಫ್ಯಾಕ್ಷನ್ ಬೇಕಾಗಿರುತ್ತೆ. ಅವರಿಗೆ ಎರಡು ಗುಳಿಗೆ ಕೊಟ್ಟರೆ ಸಾಕು.'' ಪಕ್ಕದ ಬೀರುವಿನಿಂದ ಹಸುರು ಡಬ್ಬಿಯೊಂದನ್ನು ತೆಗೆದು ಮಾತ್ರೆಗಳನ್ನು ಅದರಿಂದ ಸುರುವಿಕೊಂಡು ಎಣಿಸುತ್ತಾ ''ಇನ್ನು ನಿಜವಾದ ಫಿಜಿಕಲ್ ಕೇಸುಗಳಿಗೆ ನಾಲ್ಕು ಮಾತ್ರೆ ಜೇಸ್ಟ್ ಫೋರ್ ಟ್ಯಾಬ್ಲೆಟ್ಸ್! ಮಲೇರಿಯಾ ವಿಲ್‌ವ್ಯಾನಿಷ್'' ಎಂದು ಅಟ್ಟಹಾಸ ಮಾಡುತ್ತಾ ಮಲೇರಿಯಾ ಫಿಜಿಕಲ್ ಕೇಸುಗಳ ಗುಣ ಲಕ್ಷಣಗಳನ್ನು ಹತ್ತು ನಿಮಿಷ ಕೊರೆದ.

This PDF was created using the Sonic PDF Creator.
To remove this watermark, please license this product at www.investintech.com

ಈ ಅವಿವೇಕಿಯ ಮಲೇರಿಯಾ ನಿರೋಧಕ ಮಾತ್ರೆ ಪೋರ್ಟ್‌ಬ್ಲೇರಲ್ಲಿ ಜನಪ್ರಿಯವಾಗಿರೋದನ್ನು ಕಂಡರೆ ಈತ ಮಲೇರಿಯಾ ಬಗ್ಗೆ ಚಕಾರ ಎತ್ತಿದವರಿಗೆಲ್ಲಾ ಮೆಂಟಲ್ ಕೇಸುಗಳೆಂದು ಎರಡೆರಡು ಗುಳಿಗೆ ನುಂಗಿಸಿರುವಂತೆ ಕಂಡಿತು.


ಆತನ ಕೈಯಿಂದ ಮಾತ್ರೆಗಳನ್ನು ತೆಗೆದುಕೊಂಡು "ತಮ್ಮ ಹೆಸರೇನು ತಾವು ಇಲ್ಲಿ ಏನಾಗಿದ್ದೀರಿ" ಎಂದು ಕೇಳಿದೆ. ಆತನ ಹೆಸರು ಈಗ ಮರೆತು ಹೋಗಿದೆ. ಆತ ಅಲ್ಲಿಯ ಸ್ಟೋರ್‌ಕೀಪರ್ ಎಂದು ಹೇಳಿದ ನಮ್ಮನ್ನು ಪರಿಚಯಿಸಿಕೊಂಡೆವು. ಚಂದ್ರುವನ್ನು ಪರಿಚಯಿಸುತ್ತಾ "ಡಾಕ್ಟರ್ ಚಂದ್ರಶೇಖರ್ ಎಂದು ಇವರ ಹೆಸರು. ಇವರು ಪೆಥಾಲಜಿಸ್ಟ" ಎಂದು ಹೇಳಿದೆ. ಆತ ಚಂದ್ರು ಎಂಬಿಬಿಸ್ ಡಾಕ್ಟರ್ ಎಂದು ತಿಳಿದನೋ ಏನೋ. ಅವನ ಮುಖ ಸ್ವಲ್ಪ ಬಿಳಿಚಿಕೊಂಡಿತು.

ಬರುತ್ತಾ ಚಂದ್ರು "ನಮ್ಮ ಆಸಾಮಿಗಳಿಗೆಲ್ಲಾ ಹೋದತಕ್ಷಣ ಟೂ ಟ್ಯಾಬ್ಲೆಟ್ಸ್" ಎಂದರು.

ನಾನು ಆಶ್ಚರ್ಯದಿಂದ "ಯಾಕ್ರಿ?" ಎಂದೆ.

"ಹೇಳಿದಾನಲ್ಲ.... ಫಾರ್ ಮೆಂಟಲ್ ಕೇಸ್, ಟೂ ಟ್ಯಾಬ್ಲೆಟ್ಸ್। ಮಲೇರಿಯ ವಿಲ್ ಸಿಂಪ್ಲಿ ವ್ಯಾನಿಷ್।"

This PDF was created using the Sonic PDF Creator.
To remove this watermark, please license this product at www.investintech.com



# 8. ಅಂಡಮಾನಿನ ಲಾಬ್‌ಸ್ಟರ್, ಮಡ್‌ಕ್ರ್ಯಾಬ್ ಮತ್ತು ಜಯಂಟ್ ಆಯಿಸ್ಟರ್

ನಾವು ವಂಡೂರಿಗೆ ಹೊರಟಿದ್ದೆವು. ಹವಳದ ಬಳ್ಳಿಗಳ ಸಮುದ್ರ ತೀರಗಳನ್ನುಳ್ಳ ಈ ದ್ವೀಪಸಮುದಾಯವನ್ನು ಈಚೆಗೆ ರಾಷ್ಟ್ರೀಯ ಉದ್ಯಾನವೆಂದೂ ಘೋಷಿಸಿ ಇಲ್ಲಿ ಹವಳದ ಬಳ್ಳಿಗಳನ್ನು ಕೀಳುವುದನ್ನೂ ಮೀನುಗಾರಿಕೆಯನ್ನೂ ನಿಷೇಧಿಸಲಾಗಿತ್ತು.

ಪೋರ್ಟ್‌ಬ್ಲೇರಿನ ಬಸ್‌ಸ್ಟ್ಯಾಂಡು ಅಂಡಮಾನಿನ ಪೇಟೆಯ ಮಧ್ಯದಲ್ಲಿದೆ. ಇಡೀ ಪೋರ್ಟ್‌ಬ್ಲೇರ್ ನಗರ ಬೆಟ್ಟಗುಡ್ಡಗಳ ಮೇಲಿರುವುದರಿಂದ ಇಲ್ಲಿ ಸಮತಟ್ಟಾದ ರಸ್ತೆಗಳೇ ಇಲ್ಲ. ಕೊಡಗಿನ ಮಡಕೇರಿಯನ್ನು ಹೋಲುವ ಈ ನಗರ ಮಡಕೇರಿಯಷ್ಟು ಅನೇಕ ವಿಷಯಗಳಲ್ಲಿ ಮುಂದುವರಿದಿಲ್ಲ. ಇಡೀ ನಗರಕ್ಕೆ ಇರುವುದು ಒಂದೇ ಒಂದು ಪೆಟ್ರೋಲು ಬಂಕು. ಅಂಡಮಾನ್ ದ್ವೀಪ ಸಮುದಾಯದ ಮತ್ಯಾವ ಊರಿನಲ್ಲೂ ನಾನು ಪೆಟ್ರೋಲ್‌ಬಂಕನ್ನು ನೋಡಲೇ

This PDF was created using the Sonic PDF Creator.
To remove this watermark, please license this product at www.investintech.com

ಇಲ್ಲ. ಅಂಡಮಾನು ಪುಟ್ಟ ಪುಟ್ಟ ನೂರಾರು ದ್ವೀಪಗಳ ಸಮುದಾಯವಾದ್ದರಿಂದ ರಸ್ತೆ ಸಾರಿಗೆಗೆ ಇಲ್ಲಿ ಬಹು ಪರಿಮಿತ ಅವಕಾಶವಿದೆಯಷ್ಟೆ.

ಈಗ ಇಡೀ ಅಂಡಮಾನ್ ದ್ವೀಪಗಳಿಗೆಲ್ಲ ಸಂಪರ್ಕಿಸುವಂತ ಒಂದು ರಸ್ತೆಯನ್ನು ನಿರ್ಮಿಸಲು ಆರಂಭಿಸಿದ್ದಾರೆ. ಇದನ್ನೇ "ದಿ ಗ್ರೇಟ್ ಅಂಡಮಾನ್ ಟ್ರಂಕ್ ರೋಡ್'' ಎಂದು ಕರೆಯುತ್ತಾರೆ. ರಾಜಧಾನಿ ಪೋರ್ಟ್‌ಬ್ಲೇರ್‌ನಿಂದ ಉತ್ತರದ ತುತ್ತತುದಿಯ ದಿಗ್ಲಿಪುರದವರೆಗೆ ಇದನ್ನು ನಿರ್ಮಿಸ ಹೊರಟಿದ್ದಾರೆ. ಮಧ್ಯ ಮಧ್ಯ ಅಡ್ಡಬರುವ ಸಮುದ್ರಕ್ಕೆ ಸೇತುವೆ ನಿರ್ಮಿಸುತ್ತಾರೋ ಫೆರ್‍ರಿ ಮೂಲಕ ವಾಹನ ದಾಟಿಸುತ್ತಾರೋ ತಿಳಿಯಲಿಲ್ಲ. ರಸ್ತೆ ಮಾಡಲು ದಟ್ಟ ಕಾಡಿನ ನಡುವೆ ಬುಲ್‌ಡೋಜರುಗಳನ್ನು ಬಳಸಿ ನೆಲ ಮಟ್ಟ ಮಾಡುತ್ತಿರುವುದು ಕಂಡಿತು.

ಈ ಕೆಲಸಕ್ಕೆ ಅಂಡಮಾನಿನ ಝುರವಾ ಕಾಡು ಜನರಿಂದ ಪ್ರತಿರೋಧ ಬರುತ್ತಿದೆಯೆಂದೂ ರಸ್ತೆ ಕೆಲಸಗಾರರಲ್ಲಿ ಕೆಲವರನ್ನು ವಿಷಪೂರಿತ ಬಾಣಗಳಿಂದ ಕೊಂದಿದ್ದಾರೆಂದೂ ಹೇಳಿದರು. ಆದಕ್ಕಾಗಿಯೇ ಆಯುಧ ಸಜ್ಜಿತ ಕಾವಲುಗಾರರ ಬೆಂಗಾವಲಿನಲ್ಲಿ ಕೆಲಸ ನಡೆಯುತ್ತಿತ್ತು. ಪ್ರಶಾಂತ ಹೇಳಿದರು ಝುರವಾಗಳು ಪ್ರತಿಭಟಿಸುತ್ತಿರುವುದು ನಿಜ ಹಾಗೂ ಸಹಜ. ಆದರೆ ಈವರೆಗೆ ನಮ್ಮ ಕಾವಲುಗಾರರೇ ಅನೇಕ ಝುರವಾ ಜನಗಳನ್ನು ಕೊಂದಿದ್ದಾರೆ. ಸುಮಾರು ಎಪ್ಪತ್ತು ಜನರನ್ನು ಈವರೆಗೆ ಕೊಂದಿದ್ದಾರೆ ಎಂದು ಅನಧಿಕೃತವಾಗಿ ಹೇಳಲಾಗುತ್ತಿದೆ. ಈ ಕೊಲೆಗಳು ಹೀಗೇ ಮುಂದುವರಿದರೆ ಟ್ರಂಕ್ ರಸ್ತೆ ಪೂರ್ಣವಾಗುವ ವೇಳೆಗೆ ಅಂಡಮಾನಿನಲ್ಲಿ ಈಗ ಕೇವಲ ಮುನ್ನೂರು ಜನರಿರುವ ಝುರವಾಗಳ ನಾಮಾವಶೇಷವೂ ಪೂರ್ಣವಾಗುತ್ತದೆ ಎಂದು!

ನನಗೆ ಅಂಡಮಾನನ್ನು ಈ ರೀತಿಯಾಗಿ ಅಭಿವೃದ್ಧಿಪಡಿಸುವುದು ಸರಿಯೆ? ಎಂದು ಯೋಚನೆಯಾಯಿತ್ತು.

ಭಾರತದಲ್ಲಿ ಇವತ್ತು ನಿತ್ಯ ಹರಿದ್ವರ್ಣದ ಉಷ್ಣವಲಯದ ಕಾಡುಗಳು ತಮ್ಮ ಮೂಲ ಸ್ವರೂಪಗಳಲ್ಲಿ ಉಳಿದಿರುವುದು ಅಂಡಮಾನಿನಲ್ಲಿ ಮಾತ್ರ. ಇಲ್ಲಿಗೆ ಜನ ಎಲ್ಲೆಡೆಗಳಿಂದಲೂ ನುಗ್ಗಿ ಈ ಕಾಡುಗಳನ್ನೆಲ್ಲಾ ಕಡಿದು ಇದನ್ನು ನಮ್ಮ ಸಾಂಪ್ರದಾಯಿಕ ಕೃಷಿಗೆ ಒಳಪಡಿಸಿದರೆ ಹೇಗೆ? ಇಡೀ ಅಂಡಮಾನಿನಾದ್ಯಂತ ನಾನು ಒಂದೇ ಒಂದು ಒಳ್ಳೆಯ ಕೃಷಿ ಕ್ಷೇತ್ರವನ್ನೂ ನೋಡಲಿಲ್ಲ. ತೆಂಗು ಅಡಿಕೆ ಭತ್ತ ಇತ್ಯಾದಿಗಳೆಲ್ಲ ಸಾರಹೀನ ನೆಲದಲ್ಲಿ ಜಾಯಿಲೆ ಹಿಡಿದು

This PDF was created using the Sonic PDF Creator.
To remove this watermark, please license this product at www.investintech.com

ಕೊರಗುತ್ತಾ ಇದ್ದವು. ಕಾಡಿನ ಹೊದಿಕೆಯನ್ನು ತೆಗೆದು ನೆಲ ಉಳುಮೆಮಾಡುತ್ತಿದ್ದಂತೆಯೇ ಅಂಡಮಾನಿನ ಮಳೆಗಾಲದ ಬಿರುಮಳೆಗೆ ಸಾರವತ್ತಾದ ಮೇಲ್ಮಣ್ಣೆಲ್ಲ ಕೊಚ್ಚಿ ಸಮುದ್ರ ಸೇರಿ ನೆಲ ಬಂಜರು ಬೀಳುತ್ತಿತ್ತು. ಅಲ್ಲಿನ ಕೃಷಿ ವಿಜ್ಞಾನಿಗಳೊಡನೆ ನಾನು ಮಾತಾಡಿದಾಗಲೂ ಅವರೆಲ್ಲಾ ಇದೇ ಅಭಿಪ್ರಾಯಪಟ್ಟರು.

ಅಂಡಮಾನಿನ ಇಕಾಲಜಿ ವಿಪರೀತ ಸೂಕ್ಷ್ಮವಾಗಿರುವಂತೆ ತೋರುತ್ತದೆ. ಪೂರ್ವಾಪರ ಪ್ರಜ್ಞೆಯಿಲ್ಲದೆ ಇಲ್ಲಿ ಏನು ಮಾಡಿದರೂ ಅಪಾಯಕರ ಎಂಬುದು ತಜ್ಞರ ಅಭಿಪ್ರಾಯ. ಅಂಡಮಾನಿನ ಅರಣ್ಯ ಇಲಾಖೆ ಅಂಡಮಾನಿನಲ್ಲಿರುವ ಕಾಡಿನ ಪ್ರಮಾಣದ ಬಗ್ಗೆ ಏನೇನೂ ಕೊಚ್ಚಿಕೊಂಡರೂ ಉಪಗ್ರಹಗಳಿಂದ ತೆಗೆದ ಫೋಟೋಗಳಲ್ಲಿ ಅರಣ್ಯ ಇಲಾಖೆಯವರ ಹೇಳಿಕೆಗೆ ತದ್ವಿರುದ್ಧವಾಗಿ ಕಾಡು ನೆಲಸಮವಾಗಿ ನೆಲ ಬಂಜರು ಬೀಳುತ್ತಿರುವುದು ಕಾಣುತ್ತಿದೆ.

ಅಂಡಮಾನ್ ಅಭಿವೃದ್ಧಿಯ ಬಗ್ಗೆ ಇನ್ನೊಂದು ಯೋಜನೆಯೆಂದರೆ ಪೋರ್ಟ್‌ಬ್ಲೇರ್ ಪಟ್ಟಣವನ್ನು ತೆರಿಗೆ ರಹಿತ ಬಂದರನ್ನಾಗಿ ಪರಿವರ್ತಿಸಬೇಕೆನ್ನುವುದು. ಸಿಂಗಾಪುರ, ಹಾಂಕಾಂಗ್‌ಗಳ ಮಾದರಿಯಲ್ಲಿ ಇದನ್ನೂ ಅಂತರರಾಷ್ಟ್ರೀಯ ಷಾಪಿಂಗ್‌ಸೆಂಟರ್ ಮಾಡಬೇಕೆನ್ನುವುದು. ಇದರಿಂದ ಏನಾಗದಿದ್ದರೂ ಅಂಡಮಾನ್ ಮಾದಕವಸ್ತು ವ್ಯಾಪಾರಿಗಳ ಮತ್ತು ಕಳ್ಳಸಾಗಣೆದಾರರ ಸ್ವರ್ಗವಾಗುವುದರಲ್ಲಿ ಸಂಶಯವಿಲ್ಲ. ಪೋರ್ಟ್‌ಬ್ಲೇರ್ ಬಾರುಗಳಿಂದಲೂ, ವೇಶ್ಯಾಗೃಹಗಳಿಂದಲೂ ತುಂಬಿ ತುಳುಕುತ್ತದೆ. ಸದ್ಯಕ್ಕಂತೂ ಅಲ್ಲಿ ಕಳ್ಳತನದ ಸುಳಿವೇ ಇಲ್ಲ. ಭಿಕ್ಷುಕರು ಇಲ್ಲವೇ ಇಲ್ಲ. ಅದು ಫ್ರೀ ಪೋರ್ಟ್ ಆಗುತ್ತಿದ್ದಂತೆಯೇ ಕಳ್ಳರು, ಭಿಕ್ಷುಕರು, ಸೂಳೆಯರು ದಾಳಿ ಇಡುತ್ತಾರೆ. ಭಾರತದಿಂದ ಹೆಣ್ಣುಮಕ್ಕಳ ಅಪಹರಣ ಮತ್ತು ಸಾಗಣೆ ಶುರುವಾಗುತ್ತದೆ. ಪೋರ್ಟ್‌ಬ್ಲೇರನ್ನು ಫ್ರೀಪೋರ್ಟ್ ಮಾಡಬೇಕೆನ್ನುವ ಯೋಜನೆ ಇದೆಯೆನ್ನುವ ಗಾಳಿ ವರ್ತಮಾನಕ್ಕೇ ಅಲ್ಲಿ ಮನೆ ಕಟ್ಟುವ ಸೈಟುಗಳ ಬೆಲೆ ತಾರಾಮಾರಿ ಏರತೊಡಗಿದೆ.

ಕೃಷಿ ವಿಜ್ಞಾನಿ ಶರ್ಮಾರವರನ್ನು ಅಂಡಮಾನನ್ನು ಯಾವರೀತಿ ಅಭಿವೃದ್ಧಿ ಪಡಿಸಬಹುದೆಂದು ಕೇಳಿದೆ. "ಅಂಡಮಾನಿನ ಈ ಅಮೂಲ್ಯ ಸಾಗರ ಮತ್ತು ವನ್ಯ ಸಂಪತ್ತನ್ನು ಉಳಿಸಿಕೊಳ್ಳಬೇಕೆಂದು ಸರ್ಕಾರಕ್ಕೆ ಏನಾದರೂ ಇಷ್ಟ ಇದ್ದರೆ, ನಮ್ಮ ಸಾಂಪ್ರದಾಯಕ ಅಭಿವೃದ್ಧಿ ಕಲ್ಪನೆಗಳನ್ನು ಅಂಡಮಾನಿನ ಮೇಲೆ ಹೇರಬಾರದು. ಗ್ಯಾಲಪಾಗೋಸ್ ದ್ವೀಪವನ್ನು ಹೇಗೆ ಸಂರಕ್ಷಿಸ

This PDF was created using the Sonic PDF Creator.
To remove this watermark, please license this product at www.investintech.com

ಲಾಗುತ್ತಿದೆಯೋ ಹಾಗೇ ಇದನ್ನೂ ಸಂರಕ್ಷಿಸಿ ಅರಣ್ಯ ಮತ್ತು ಸಾಗರ ಉತ್ಪನ್ನಗಳ ಆದಾಯ ಇಷ್ಟಕ್ಕೇ ಅಂಡಮಾನಿನ ವಹಿವಾಟುಗಳನ್ನು ಸೀಮಿತ ಗೊಳಿಸಬೇಕು. ಈ ಸಂಪನ್ಮೂಲಗಳು ಹಾಳಾಗದಂತೆ ಸಂರಕ್ಷಿಸುತ್ತಲೇ ಇವು ಗಳಿಂದ ಆದಾಯ ಪಡೆಯುವ ವಿಧಾನಗಳನ್ನು ನಾವು ಕಂಡುಕೊಳ್ಳಬೇಕು'' ಎಂದು ಹೇಳಿದರು.

ಶರ್ಮಾ ಸರಿಯಾಗಿ ಯೋಚಿಸುತ್ತಿದ್ದಾರೆಂದು ನನಗನ್ನಿಸಿತು. ಆದರೆ ಭಾರತದಲ್ಲಿಯೇ ಅಭಿವೃದ್ಧಿಯ ಹೆಸರಿನಲ್ಲಿ ನಾವು ಮಾಡುತ್ತಿರುವ ಅನಾಹುತ ಗಳನ್ನು ಗಮನಿಸಿದರೆ, ರಾಜೀವ್‌ಗಾಂಧಿ ನಮ್ಮ ಜನಗಳಿಗೆ ಹತ್ತಿಸಿರುವ ಇಪ್ಪತ್ತೊಂದನೆಯ ಶತಮಾನದ ಓತ್ತ ನೋಡಿದರೆ ಇನ್ನು ಹತ್ತು ವರ್ಷ ಗಳೊಳಗಾಗಿ ಅಂಡಮಾನ್ ನಾಶವಾಗಬಹುದೆಂದು ನನಗನ್ನಿಸುತ್ತದೆ.

ಅಂಡಮಾನಿನ ಜನಸಂಖ್ಯೆಯಲ್ಲಿ ಪ್ರಮುಖರಾಗಿರುವವರೆಂದರೆ ಬಂಗಾಳಿ ಗಳು, ತಮಿಳರು, ಮಲಯಾಳಿಗಳು. ಪಾಕಿಸ್ತಾನ ವಿಭಜನೆಯ ಕಾಲದಲ್ಲಿ ಮತ್ತು ಬಾಂಗ್ಲಾದೇಶ ಉದಿಸುವ ಕಾಲದಲ್ಲಿ ಇಲ್ಲಿರುವ ಬಂಗಾಳಿಗಳೆಲ್ಲಾ ನಿರಾಶ್ರಿತರಾಗಿ ಬಂದವರು. ಭಾರತ ಸರ್ಕಾರ ಇವರಿಗೆಲ್ಲಾ ಇಲ್ಲಿ ಪುನರ್ವಸತಿ ನಿರ್ಮಿಸಿದೆ. ಇನ್ನು ಇಲ್ಲಿರುವ ತಮಿಳರಲ್ಲಿ ಬಹುಜನ ಮಲಯಾ ಸಿಲೋನು ಗಳಿಂದ ಓಡಿಸಲ್ಪಟ್ಟ ನಿರಾಶ್ರಿತರು, ಹಾಗೂ ಮದ್ರಾಸಿನಿಂದ ವಲಸೆ ಬಂದವರು ಮಲಯಾಳಿಗಳಾರೂ ನಿರಾಶ್ರಿತರಾಗಿ ಬಂದವರಲ್ಲ. ಇಲ್ಲಿನ ವನಸಂಪತ್ತನ್ನು ನೋಡಿ ತಮ್ಮ ಕೊಡಲಿಗಳಿಗೆ ಕೆಲಸ ದೊರೆಯುತ್ತದೆಂದು ಬಂದವರು. ನನಗಂತೂ ಮರಗಳಿದ್ದಲ್ಲಿ ಮಲಯಾಳಿಗಳನ್ನು ನೋಡಿದರೆ ಶಕುನ ನೋಡಿದಂತಾಗುತ್ತದೆ. ಕೊಡಗು ಚಿಕ್ಕಮಗಳೂರಿನ ಮಹಾರಣ್ಯಗಳೆಲ್ಲ ಲೂಟಿಯಾದುದು ಇವರ ಸಹಾಯದಿಂದಲೇ. ಇವರು ಕಣ್ಮುಚ್ಚಿಬಿಡುವುದರೊಳಗೆ ರಾತ್ರೋರಾತ್ರಿ ಮರ ಗಳನ್ನು ಮಾಯ ಮಾಡಬಲ್ಲರು!

ನಮ್ಮೂರಿನ ಸಾಮಿಲ್ಲಿನ ಸಾಹುಕಾರರೆಲ್ಲ ಒಂದೊಂದು ಮಲಯಾಳಿ ಗಳ ಬೆಟಾಲಿಯನ್ ಸಾಕಿಕೊಂಡಿದ್ದಾರೆ. ಬೆಳಗಿನ ಹೊತ್ತಿನಲ್ಲಿ ಇವರಾರೂ ಕಣ್ಣಿಗೆ ಬೀಳುವುದಿಲ್ಲ. ಕತ್ತಲಾಗುತ್ತಿದ್ದಂತೆಯೆ ಕೊಡಲಿ, ಗರಗಸ, ಮರ ದೂಡುವ ಸಬ್ಬಲ್‌ಗಳೊಂದಿಗೆ ಇವರು ಹಾಜರಾಗುತ್ತಾರೆ. ಮರ ಸಾಗಿಸುವ ಅಟ್ಟೆಗಳಿಲ್ಲದ ಲಾರಿಗಳು ಬಂದು ನಿಲ್ಲುತ್ತವೆ. ಎಲ್ಲ ಯಾವುದೋ ದಿಕ್ಕಿಗೆ

This PDF was created using the Sonic PDF Creator.
To remove this watermark, please license this product at www.investintech.com

ಹೊರಡುತ್ತಾರೆ. ಬೆಳಗಾಗುವುದರೊಳಗೆ ಹಲವಾರು ಎಕರೆ ಅರಣ್ಯಗಳು ಸ್ಮಶಾನವಾಗಿರುತ್ತವೆ.

ಈ ವ್ಯವಹಾರಗಳಲ್ಲಿ ಕಾಳಧನದ ಪ್ರವಾಹ ಹೇಗೆ ಹರಿಯುತ್ತಿದೆ ಎಂದರೆ ಅರಣ್ಯ ಇಲಾಖೆಯವರು ಇದಕ್ಕೆ ಅಡ್ಡ ಬಂದರೆ ಖೂನಿಯಾಗುತ್ತಾರೆ. ಷಾಮೀಲಾದರೆ ಅನೇಕ ಸೈಟುಗಳು ಮಹಡಿ ಮನೆಗಳು ದೊರೆಯುತ್ತವೆ. ಅನ್ನ ತಿನ್ನುವ ನರಮನುಷ್ಯರಾದ ಅಧಿಕಾರಿಗಳು ಇವೆರಡರಲ್ಲಿ ಯಾವುದನ್ನು ಆರಿಸಿಕೊಳ್ಳುತ್ತಾರೆ ನೀವೇ ಊಹಿಸಿರಿ.

* * *

ವಂಡೂರಿಗೆ ಬಸ್ ಕಾಯಲು ಬಸ್‌ಸ್ಟ್ಯಾಂಡಿಗೆ ಹೋಗುತ್ತ ಅಲ್ಲಿಗೆ ಕೊಂಚವೇ ದೂರದಲ್ಲಿ ದಾರಿ ಬದಿ ಮೀನು ಮಾರ್ಕೆಟ್ ಇದೆ. ನಾವು ನಮ್ಮ ಗಾಳಗಳಿಗೆ ಚುಚ್ಚಲು ಪುಡಿ ಮೀನುಗಳು ದೊರೆಯುತ್ತವೆಯೇ ನೋಡಲು ಅತ್ತ ಹೋದೆವು. ಪೋರ್ಟ್‌ಬ್ಲೇರ್‌ನ ಮೀನು ಮಾರ್ಕೆಟ್ಟು ನಾವು ಅಲ್ಲಿದ್ದಷ್ಟು ದಿನವೂ ಪ್ರಮುಖ ಆಕರ್ಷಣೆಯಾಗಿತ್ತು. ಅಲ್ಲಿ ರಾಶಿ ಹಾಕಿರುತ್ತಿದ್ದ ತರತರದ ಆಕೃತಿ ಬಣ್ಣಗಳ ಮೀನುಗಳನ್ನು ನೋಡುವುದೇ ನಮಗೆ ಹಬ್ಬವಾಗಿತ್ತು. ಇಬ್ರಾಹಿಂ ಹೇಳಿದ್ದ "ಕಪತಾರಿಣಿ" ಮೀನಿನ ಹೆಸರನ್ನು ಉರುಹಚ್ಚಿದ್ದ ಚಂದ್ರು ಅದನ್ನು ಹುಡುಕಲಾರಂಭಿಸಿದರು. ಆದರೆ ನಾಲ್ಕಾರು ಜನ ನಾಲ್ಕಾರುತರದ ಮೀನನ್ನು ಇದೇ ಕಪತಾರಿಣಿ ಎಂದು ಹೇಳಿದ್ದರಿಂದ ಯಾವುದು ಇದರಲ್ಲಿ ಕಪತಾರಿಣಿ ಎಂದು ನಮಗೆ ಅನುಮಾನ ಆರಂಭವಾಯ್ತು. ಆ ಎಲ್ಲ ಮೀನನ್ನೂ ಅಷ್ಟಷ್ಟು ಕೊಂಡು ಚೀಲಕ್ಕೆ ಹಾಕಿಕೊಂಡೆವು.

ನಮ್ಮೂರಲ್ಲಿ ತುಂಬಾ ತುಟ್ಟಿಯಾದ ಅಂಜಲಿ, ಸುರುಮಾಯಿ, ಮಾಂಜಿ ಮುಂತಾದ ಮೀನುಗಳೆಲ್ಲ ನಂಬಲಾಗದಷ್ಟು ಅಗ್ಗವಾಗಿ ದೊರೆಯುತ್ತಿತ್ತು. ನಾವೇ ಅಡಿಗೆ ಮಾಡಿಕೊಳ್ಳುವ ಅವಕಾಶ ಇರಲಿಲ್ಲ. ಇಲ್ಲದಿದ್ದರೆ ನಾವು ಅಂಡಮಾನಿನಲ್ಲಿರುವಷ್ಟು ದಿನವೂ ಅನ್ನ ತಿನ್ನುವ ಗೋಜಿಗೇ ಹೋಗದೆ ಇದರಲ್ಲೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೆವು. ಈ ಮೀನುಗಳ ಜೊತೆಗೇ ನಾವು ನಮ್ಮ ಸಮುದ್ರದ ತೀರದಲ್ಲಿ ಎಂದೂ ನೋಡಿರದಿದ್ದ ವಿಚಿತ್ರ ಆಕಾರದ ಮೀನುಗಳೆಲ್ಲ ಅಲ್ಲಿ ಕಂಡವು. ನಾನು ಚಂದ್ರು ಇಬ್ಬರೂ ಅಲ್ಲಿಯ ಗಲೀಜು, ವಾಸನೆಗಳೊಂದನ್ನೂ ಲೆಕ್ಕಿಸದೆ ಆ ಮೀನುಗಳ ರುಚಿ, ಹೆಸರು ಇತ್ಯಾದಿಗಳನ್ನು ವಿಚಾರಿಸಲಾರಂಭಿಸಿದೆವು.

This PDF was created using the Sonic PDF Creator.
To remove this watermark, please license this product at www.investintech.com

ಸಮುದ್ರದ ಸೀಗಡಿಗಳಂತೂ ಬಾಯಲ್ಲಿ ನೀರೂರಿಸುವಂತೆ ಬುಟ್ಟಿಗಟ್ಟಲೆ ಬಿದ್ದಿದ್ದವು. ಮಂಗಳೂರು ಮಲ್ಪೆ ಇಲ್ಲೆಲ್ಲಾ ಕೇವಲ ರಫ್ತು ಮಾಡಲು ಮೀಸಲಿಟ್ಟಿರುವ ದೊಡ್ಡ ದೊಡ್ಡ ಸೀಗಡಿಗಳು ಅಲ್ಲಿ ಕೇವಲ ಕೇಜಿಗೆ ಹತ್ತರಿಂದ ಹದಿನೈದು ರೂಪಾಯಿಗಳು ಮಾತ್ರ. ಇಲ್ಲಿ ಅವನ್ನು ಕೇಜಿಗೆ ನೂರಿಪ್ಪತ್ತು ರೂಪಾಯಿಗಳಿಗೆ ಕಡಿಮೆ ಕೇಳಿದರೆ ಮಾರುವವರು ಹೊಡೆಯಲಿಕ್ಕೇ ಬರುತ್ತಾರೆ!

ಇಬ್ರಾಹಿಂ ಹೋಟೆಲಿನಲ್ಲಿ ಮದ್ರಾಸಿನಿಂದ ತರಿಸಿದ ತರ್ಕಾರಿ ಸಾರನ್ನು ಕೊಡುತ್ತಿದ್ದರು. ಸೀಗಡಿ ನೋಡಿ ಹೊಟ್ಟೆ ಉರಿದುಹೋದ ನಾವು ಇಬ್ರಾಹಿಂ ಹತ್ತಿರ ಇಂಥ ಒಳ್ಳೇ ಮೀನು, ಸೀಗಡಿ ಸಿಗಬೇಕಾದರೆ ಈ ದರಿದ್ರ ನುಗ್ಗೇಕಾಯಿ ಸಾರು ಬಡಿಸುತ್ತಿದ್ದೀರಲ್ಲಾ ಎಂದು ಜಗಳಾಡಿದೆವು.

ಮೀನು ಮಾರ್ಕೆಟ್ಟಿಗೆ ನಾವು ದಿನಾ ಹೋಗುತ್ತಿದ್ದುದಕ್ಕೆ ಗಾಳಕ್ಕೆ ಚುಚ್ಚುವ ಪುಡಿಮೀನನ್ನು ಕೊಳ್ಳುವುದಲ್ಲದೇ ಇನ್ನೊಂದು ಕಾರಣವೂ ಇತ್ತು. ಅದೇ "ಅಂಡಮಾನ್ ಲ್ಯಾಂಡ್ ಕ್ರಾಬ್." ಅಂಡಮಾನಿನಲ್ಲಿ ಒಂದು ವಿಚಿತ್ರವಾದ ಮತ್ತು ಪ್ರಖ್ಯಾತವಾದ ಏಡಿ ಇದೆ. ನೆಲದ ಮೇಲೆ ಚಲಿಸುವ ಈ ಏಡಿ ತೆಂಗಿನ ಮರ ಹತ್ತಿ ಕಾಯಿಗಳನ್ನು ಬೀಳಿಸಿ ತನ್ನ ಕೊಂಬಿನಿಂದ ತೆಂಗಿನ ಕಾಯಿಯನ್ನು ಕತ್ತರಿಸಿ ಅದರೊಳಗಿನ ತಿರುಳನ್ನು ತಿನ್ನುತ್ತದೆ. ಇದರ ಬಗ್ಗೆ ಸಲೀಂ ಅಲಿ ಬರೆದಿದ್ದರು. ಅವರಿಗಿಂತ ಮೊದಲೇ ಚಾರ್ಲ್ಸ್ ಡಾರ್ವಿನ್ ತನ್ನ "ವಯೇಜ್ ಆಫ್ ಬಿಗಲ್"ಯಲ್ಲಿ ಈ ಭೀಮಕಾಯದ ಏಡಿಗಳ ಬಗ್ಗೆ ಬರೆಯುತ್ತಾನೆ. ತೆಂಗಿನಕಾಯನ್ನು ತನ್ನ ಕೊಂಬುಗಳಿಂದ ಕತ್ತರಿಸುವುದೇನೆಂದರೆ ಸಾಮಾನ್ಯವೇನಲ್ಲ.

ಒಮ್ಮೆ ನಮ್ಮ ಗೆಳೆಯ ಶಾಮಣ್ಣನವರ ಜಮೀನಿನ ಪಕ್ಕದಲ್ಲಿ ಏತ ನೀರಾವರಿ ಯೋಜನೆಯ ಪಂಪ್‌ಸೆಟ್ ಪ್ರಾರಂಭೋತ್ಸವ ಇತ್ತು. ಸ್ವಿಚ್ ಆನ್ ಮಾಡುವ ಮೊದಲು ಪೂಜೆಯಾಯ್ತು. ಪೂಜೆಯ ನಂತರ ಯಂತ್ರಕ್ಕೆ ತೆಂಗಿನ ಕಾಯಿ ಒಡೆಯಬೇಕಲ್ಲ! ಪೂಜೆಯ ಭಟ್ಟನಿಗೆ ತೆಂಗಿನಕಾಯಿ ಒಡೆಯಲು ಸುತ್ತಮುತ್ತ ಯಾವ ಕಲ್ಲಾಗಲೀ ಕತ್ತಿಯಾಗಲೀ ಕಾಣಲಿಲ್ಲ. ಹಾಗಾಗಿ ಆತ ಕಾಯನ್ನು ಪಂಪ್‌ಸೆಟ್ಟಿನ ಉಕ್ಕಿನ ಕವಚದ ಮೇಲೆ ಕುಕ್ಕಿದ. ಭಟ್ಟನ ಕೈಯ್ಯಲ್ಲಿದ್ದ ತಿಪಟೂರಿನ ತೆಂಗಿನಕಾಯಿ ಹೇಗಿತ್ತೊ ಹಾಗೇ ಇತ್ತು! ಕಿರ್ಲೋಸ್ಕರ್ ಪಂಪ್‌ಸೆಟ್ಟು ಮಾತ್ರ ಸರಿಯಾಗಿ ಎರಡು ಹೋಳಾಯ್ತು! ಇದು ನಮ್ಮ ಪಂಕ್ತಿನ ಯೋಗ್ಯತೆಯನ್ನು ತೋರಿಸುತ್ತೋ! ಅಥವಾ ನಮ್ಮ ತೆಂಗಿನ

This PDF was created using the Sonic PDF Creator.
To remove this watermark, please license this product at www.investintech.com

ಕಾಯಿಯ ಮಹಾತ್ಮೆಯನ್ನು ಹೇಳುತ್ತೋ! ಅಥವಾ ಆ ಮೂರ್ಖ ಪೂಜಾರಿಯ ಅವಿವೇಕವನ್ನು ತೋರಿಸುತ್ತೋ ಗೊತ್ತಿಲ್ಲ. ಆದರೆ ಇಂತಹ ತೆಂಗಿನ ಕಾಯಿಗಳನ್ನು ತಮ್ಮ ಉಕ್ಕಿನ ಇಕ್ಕಳದಂಥ ಕೊಂಬಿನಿಂದ ಕಟ್ ಮಾಡಲು ಏಡಿಗಳಿಗೆ ಅಸಾಧಾರಣ ಸಾಮರ್ಥ್ಯ ಇರಬೇಕೆನ್ನುವುದಂತೂ ನಿಜ.

ಒಮ್ಮೆ ಎಲ್ಲಿಂದಲೋ ಬಂದು ಬಸ್ಸಿಳಿದವರು ರೂಮಿನ ಕಡೆಗೆ ಗಡಿಬಿಡಿಯಲ್ಲಿ ಹೆಜ್ಜೆ ಹಾಕುತ್ತಿದ್ದವು. ನಾನು ಹಾಗೂ ಮೀನು ಮಾರ್ಕೆಟ್ಟಿನ ಕಡೆಗೆ ಕಣ್ಣು ಹಾಯಿಸಿದೆ! ಒಂದು ಮೂಲೆಯಲ್ಲಿ ಯಾರೋ ಒಬ್ಬ ಅಪರಿಚಿತವಾದುದೇನನ್ನೋ ಇಟ್ಟುಕೊಂಡು ಕುಳಿತಿದ್ದಂತೆ ಕಂಡಿತು. ಕೊಂಚ ಹತ್ತಿರ ಹೋಗಿ ನೋಡಿದೆ. ಏಡಿಗಳು. ಚಂದ್ರುಗೂ ಮಲ್ಲಿಕ್‌ಗೂ ತೋರಿಸೋಣವೆಂದು ಕೂಗಿ ಕರೆದೆ ಆದರೆ ಅವರು ಗಡಿಬಿಡಿಯಲ್ಲಿ ತುಂಬಾ ಮುಂದೆ ಹೋಗಿದ್ದರು.

ನಾನು ಅವನ ಬಳಿಗೆ ಹೋಗಿ ನೋಡಿದೆ. ಮೂರು ಏಡಿಗಳನ್ನು ಒಂದೊಂದು ಕಂತೆಯಾಗಿ ನಾರಿನಲ್ಲಿ ಕಟ್ಟಿ ಮಾರುತ್ತಿದ್ದ. ನಾನು ಅಷ್ಟೊಂದು ಭೀಮಗಾತ್ರದ ಏಡಿಗಳನ್ನು ನೋಡುವುದಿರಲಿ, ಊಹಿಸಿಯೂ ಇರಲಿಲ್ಲ. ಒಂದೊಂದು ಏಡಿಯೂ ಸುಮಾರು ಒಂದು ಕೇಜಿ ಮೇಲೆ ತೂಗುತ್ತಿದ್ದಿರಬಹುದು ಮೂರು ಏಡಿಗಳಿಗೆ ಇಪ್ಪತ್ತೈದು ರೂಪಾಯಿಯಂತೆ ಮಾರುತ್ತಿದ್ದ. ಅದರಲ್ಲಿ ನನಗೆ ವಿಚಿತ್ರವಾಗಿ ಕಂಡುದೆಂದರೆ ಆ ಏಡಿಗಳ ಎರಡರಷ್ಟು ಗಾತ್ರಕ್ಕಿದ್ದ ಅದರ ಕೊಂಬುಗಳು. ಆ ಏಡಿಗಳು ಯಾವೂ ಸತ್ತಿರಲಿಲ್ಲ. ಚೆನ್ನಾಗಿ ಜೀವವಿದ್ದು ಅವನು ಕಟ್ಟಿದ್ದ ನಾರಿನ ಗಂಟಿನಿಂದ ಬಿಚ್ಚಿಕೊಳ್ಳಲು ಸತತವಾಗಿ ಹವಣಿಸುತ್ತಿದ್ದವು.

ಈ ನಾರನ್ನು ಅವು ಯಾಕೆ ಕೊಂಬಿನಿಂದ ತುಂಡರಿಸುತ್ತಿಲ್ಲ ಎಂದು ಅವುಗಳ ಕೊಂಬನ್ನು ಪರೀಕ್ಷಿಸಿದೆ. ಕಬ್ಬಿಣದ ತಂತಿಗಳಿಂದ ಅವು ತಮ್ಮ ಕೊಂಬನ್ನು ತೆರೆಯಲಾರದಂತೆ ಬಿಗಿದು ಕಟ್ಟಿದ್ದರು. ಅವುಗಳ ದೈತ್ಯ ಕೊಂಬುಗಳು ಕರ್‌ಗೆ ಕಟಿಂಗ್‌ಪ್ಲೆಯರಿನಂತೆ ಕಾಣುತ್ತಿದ್ದವು. ನನಗೆ ನೋಡಿಯೇ ದಿಗಿಲಾಯ್ತು. ಏಕೆಂದರೆ ನಮ್ಮೂರಲ್ಲೇ ಏಡಿಗಳನ್ನು ಹಿಡಿಯಹೋದಾಗ ಅವು ತಮ್ಮ ಕಟಿಂಗ್‌ಪ್ಲೆಯರುಗಳಿಂದ ಕಚ್ಚಿ ಹಿಡಿದು ಕುಯ್ಯೋ ಎಂದು ಕೂಗಿಸಿದ್ದವು. ಈ ಏಡಿಗಳ ಇನ್ನೊಂದು ದುಷ್ಟತಂತ್ರ ಎಂದರೆ ಇವು ಕೊಂಬುಗಳಲ್ಲಿ ಕಚ್ಚಿ ನಾವು ನೋವಿನಲ್ಲಿ ಒದರಾಡಿ ಕೊಳ್ಳುತ್ತಿರಬೇಕಾದರೆ ಅವು ಕೊಂಬನ್ನು ಕಚ್ಚಿ ಹಿಡಿದಿರುವಂತೆಯೇ ಕಳಚಿಬಿಟ್ಟು ತಾವು ಪರಾರಿಯಾಗಿ ಬಿಡುತ್ತವೆ. ಕೊಂಬು

This PDF was created using the Sonic PDF Creator.
To remove this watermark, please license this product at www.investintech.com

ಮಾತ್ರ ಬೀಗ ಹಾಕಿದಂತೆ ಕಚ್ಚಿಕೊಂಡೇ ಇರುತ್ತದೆ. ಏಡಿಗಳಿಗೆ ಕೊಂಬುಗಳಾಗಲೀ ಕಾಲಾಗಲಿ ಮುರಿದುಹೋದರೆ ಮತ್ತೆ ಅವಕ್ಕೆ ಹೊಸ ಅಂಗಗಳು ಹುಟ್ಟುತ್ತವೆ.

ಈ ಏಡಿಗಳು ಅಪಾಯಕಾರಿಗಳೇ? ಎಂದು ಅದನ್ನು ಮಾರುತ್ತಿದ್ದವನನ್ನು ಕೇಳಿದೆ. ಅದಕ್ಕೆ ಅವನು ಪಕ್ಕದಲ್ಲಿ ಕುಳಿತಿದ್ದವನಿಗೆ ಏನನ್ನೋ ಹೇಳಿದ. ಅವನು ಬಲಗೈ ತೋರಿಸಿ ಕಿರುಬೆರಳು ತುಂಡಾಗಿರುವುದನ್ನೂ ಮಿಕ್ಕ ಬೆರಳುಗಳಲ್ಲಿನ ಗಾಯದ ಕಲೆಗಳನ್ನೂ ತೋರಿಸಿ ನನಗರ್ಥವಾಗದ ಹಿಂದಿಯಲ್ಲಿ ವಿವರಿಸತೊಡಗಿದ. ಅವನೇ ಬಹುಶಃ ಏಡಿಗಳನ್ನು ಹಿಡಿಯುವವನಿರಬೇಕು. ಪಕ್ಕ ಕುಳಿತಿದ್ದವನು ಮಾರಿಕೊಡುವ ದಳ್ಳಾಳಿ ಇರಬೇಕು. ಅವನ ಹಿಂದಿ ನನಗೆ ಅರ್ಥವಾಗುವ ಅಗತ್ಯವಿರಲಿಲ್ಲ. ಆ ಏಡಿಗಳ ಭಯಂಕರ ಕೊಂಬುಗಳನ್ನೂ ಇವನ ತುಂಡಾದ ಕೈ ಬೆರಳನ್ನೂ ನೋಡಿದ ಯಾವನಿಗೂ ಭಾಷೆಯ ಸಹಾಯವಿಲ್ಲದೆ ಅರ್ಥವಾಗುತ್ತದೆ, ಆ ದಡಿಯ ಕೊಂಬುಗಳ ನಡುವೆ ಸಿಕ್ಕ ಕೈಬೆರಳಿನ ಕತೆ ಏನಾಗುತ್ತದೆ ಎಂದು.

ಭೋಜನಕೂಟ ಒಂದರಲ್ಲಿ ನನಗೆ ಕರ್ನಾಟಕದವರೇ ಆದ ಅರಣ್ಯಾಧಿಕಾರಿಗಳೊಬ್ಬರು ಸಿಕ್ಕಿದ್ದರು. ಆಗ ಅವರಿಗೆ ನಾನು ಮಾರ್ಕೆಟ್ಟಿನಲ್ಲಿ ಕಂಡ ಏಡಿಗಳನ್ನು ವರ್ಣಿಸಿ ಅದನ್ನೇ ಅಂಡಮಾನ್ ಏಡಿಗಳೆಂದು ಕರೆಯುತ್ತಾರೆಯೇ? ಎಂದು ಕೇಳಿದೆ. ಅವರು ಮೊದಲು ಹೌದೆಂದೂ ಆಮೇಲೆ, ಡಾರ್ವಿನ್, ಸಲೀಂ ಆಲಿ ಇವರ ವಿವರಣೆಗಳನ್ನೆಲ್ಲಾ ಹೇಳಿದ ಮೇಲೆ, ನಾನು ನೋಡಿದವು ಅಂಡಮಾನ್ ಮಡ್‌ಕ್ರಾಬ್‌ಗಳೆಂದೂ, ತೆಂಗಿನಕಾಯಿ ಕಟ್ ಮಾಡುವ ಏಡಿಗಳು ಈಗ ಈ ದ್ವೀಪಗಳಲ್ಲಿ ವಿರಳವೆಂದು ಹೇಳಿ, ಅವು ಸೆಂಟಿನಲ್ ದ್ವೀಪದಲ್ಲಿ ಮಾತ್ರ ಈಗ ಹೆಚ್ಚಾಗಿ ಕಾಣಸಿಗುತ್ತದೆಂದು ತಿಳಿಸಿದರು. ಅವು ನಾನು ನೋಡಿದ ಏಡಿಗಳಿಗಿಂತ ಬಲವಾದ ಕೊಂಬುಗಳನ್ನು ಹೊಂದಿವೆ ಎಂದು ಹೇಳಿದರು. ಹಾಗಾದರೆ ಕೈಯ್ಯೇ ಕತ್ತರಿಸಿ ಹೋದವನೊಬ್ಬ ಅದನ್ನು ಮಾರುತ್ತ ಕುಳಿತಿರಬಹುದೆಂದು ನಾನು ಊಹಿಸಿದೆ!

* * *

ಈ ಏಡಿಯ ಜಾತಿಗೇ ಸೇರಿದ ಇನ್ನೊಂದು ವಿಶೇಷ ಜೀವಿಯನ್ನು ನಾವು ನೋಡಿದ್ದೆಂದರೆ "ಅಂಡಮಾನ್ ಲಾಬ್‌ಸ್ಟರ್". ಸಮುದ್ರದ ಮತ್ತು ಸಿಹಿನೀರಿನ ಎಲ್ಲ ಏಡಿಗಳು, ಸೀಗಡಿಗಳು, ಲಾಬ್‌ಸ್ಟರುಗಳು ಜಾತಿಯಿಂದ ಕ್ರಸ್ಟೇಷಿಯನ್

This PDF was created using the Sonic PDF Creator.
To remove this watermark, please license this product at www.investintech.com

ಪಂಗಡಕ್ಕೆ ಸೇರಿದವು. ನಾವು ಭಯಪಡುವ ವಿಷಪೂರಿತ ಚೇಳುಗಳೂ ಸಹ ಈ ಪಂಗಡಕ್ಕೆ ಸೇರಿದವಾಗಿವೆ.

ಈ ಏಡಿಗಳು ಲಾಬ್‌ಸ್ಟರುಗಳು ಸೀಗಡಿಗಳು ನೋಡಲು ವಿಚಿತ್ರವಾಗಿದ್ದರೂ ಅತ್ಯಂತ ರುಚಿಕರ ಆಹಾರವೆಂದು ಪ್ರಪಂಚ ಪ್ರಸಿದ್ಧವಾಗಿವೆ. ಒಮ್ಮೆ ಬಾಯಿಗಿಟ್ಟರೆ ಆಮೇಲೆ ಬಿಡಲು ಮನಸ್ಸೇ ಬರುವುದಿಲ್ಲ. ಪಶ್ಚಿಮ ದೇಶಗಳಲ್ಲಿ ಇವತ್ತಿಗೂ ಅತಿ ದುಬಾರಿಯಾದ ಊಟವೆಂದರೆ "ಲಾಬ್‌ಸ್ಟರ್ ಡಿನ್ನರ್." ನಮ್ಮ ಪಶ್ಚಿಮಘಟ್ಟಗಳ ಬಳಿಯ ಅರಬ್ಬೀ ಸಮುದ್ರ ತೀರದಲ್ಲಿ ಈ ಲಾಬ್‌ಸ್ಟರ್‌ಗಳು ದೊರೆಯುವುದು ಅಪೂರ್ವ. ಏಲ್ಲೋ ಒಮ್ಮೆ ಕಾರ್ವಾರದ ತೀರದಲ್ಲಿ ಮೀನುಗಾರರು ತಾವು ಹಿಡಿದ ಮೀನುಗಳನ್ನೆಲ್ಲಾ ರಾಶಿ ಹಾಕಿಕೊಂಡು ವರ್ಗೀಕರಿಸುತ್ತಿದ್ದಾಗ ಚಿಕ್ಕ ಲಾಬ್‌ಸ್ಟರೊಂದನ್ನು ನೋಡಿದ್ದೆ. ಆದರೆ ಅದು ಅಂಡಮಾನ್ ಲಾಬ್‌ಸ್ಟರಿನಷ್ಟು ದೊಡ್ಡದಾಗಿ ವರ್ಣಮಯವಾಗಿ ಇರಲಿಲ್ಲ.

ನೋಡುವುದಕ್ಕೆ ಸೀಗಡಿಯನ್ನು ಹೋಲುವ ಇದು ಸುಮಾರು ಮುಕ್ಕಾಲು ಕೇಜಿ ತೂಗುತ್ತಿತ್ತು. ಒಂದೂವರೆ ಅಡಿಯಷ್ಟು ಉದ್ದದ ಬಣ್ಣ ಬಣ್ಣದ ಮೀಸೆಗಳಿದ್ದವು. ಇದರ ಮೈಮೇಲಿನ ಹೊದಿಕೆ ಸೀಗಡಿಗೆ ಇರುವಂತೆ ಪಾರದರ್ಶಕವಾಗಿರದೆ ನೀಲಿ ಮತ್ತು ಕೆಂಪು ಪಟ್ಟೆಗಳಿಂದ ತುಂಬಿತ್ತು. ಈ ಲಾಬ್‌ಸ್ಟರ್‌ಗಳಲ್ಲಿ ವಿಶ್ವದಾಖಲೆಯ ಗಾತ್ರ ಹದಿನೇಳು ಕೇಜಿ. ಅಮೆರಿಕಾದ ಫ್ಲೋರಿಡಾ ತೀರಗಳು ಲಾಬ್‌ಸ್ಟರುಗಳಿಗೆ ಪ್ರಖ್ಯಾತವಾಗಿದ್ದವು. ಮಾಂಸದ ರುಚಿಗಾಗಿ ಇವುಗಳನ್ನು ಹಿಡಿದು ಹಿಡಿದು ಅಮೇರಿಕಾದ ಸಮುದ್ರ ತೀರದಲ್ಲಿ ಇವು ವಿರಳವಾಗತೊಡಗಿ ಅಮೆರಿಕಾ ಹೊರದೇಶಗಳಿಂದ ಲಾಬ್‌ಸ್ಟರ್‌ಗಳನ್ನು ಆಮದು ಮಾಡಿಕೊಳ್ಳತೊಡಗಿದೆ.

ಅಂಡಮಾನ್ ಲಾಬ್‌ಸ್ಟರನ್ನು ಯಾರೋ ಕೊಂಡು ತಂದವರ ಬಳಿ ನೋಡಿದ್ದರಿಂದ ಅದನ್ನು ಎಲ್ಲಿ ಹಿಡಿದರು? ಹೇಗೆ ಹಿಡಿಯುತ್ತಾರೆ? ಇತ್ಯಾದಿಗಳನ್ನು ತಿಳಿಯಲಾಗಲಿಲ್ಲ. ಇವುಗಳನ್ನು ಹಿಡಿಯಲು ಒಂದು ಬಗೆಯ ಬೋನುಗಳನ್ನು ಉಪಯೋಗಿಸಲಾಗುತ್ತದೆ. ಒಳಗಡೆ ಮಾಂಸದ ಚೂರುಗಳನ್ನಿಟ್ಟು ಈ ಬೋನುಗಳನ್ನು ಸಮುದ್ರದಲ್ಲಿ ಮುಳುಗಿಸಿಡುತ್ತಾರೆ. ತಿಂಡಿಯ ಆಸೆಗೆ ಒಳನುಗ್ಗಿದ ಲಾಬ್‌ಸ್ಟರುಗಳು ಸಿಕ್ಕಿಬೀಳುತ್ತವೆ.

ಅಂಡಮಾನಿನ ಅಂಗಡಿಗಳಲ್ಲಿ ಕಂಡ ಇನ್ನೊಂದು ವಿಚಿತ್ರ ವಸ್ತುವೆಂದರೆ ಅಂಡಮಾನಿನ ದೈತ್ಯ ಕಪ್ಪೆ ಚಿಪ್ಪು (ಜಯಂಟ್ ಆಯಿಸ್ಟರ್). ಅಂಡ

This PDF was created using the Sonic PDF Creator.
To remove this watermark, please license this product at www.investintech.com

ಮಾನಿನಲ್ಲಿ ಕಪ್ಪೆಚಿಪ್ಪಿನಿಂದ ಮಾಡುವ ಬಗೆಬಗೆಯ ಆಭರಣಗಳ ಅಂಗಡಿಗಳಿವೆ. ಇವರು ಈಚೆಗೆ ಪ್ರತಿಬಂಧಿಸಲಾಗಿರುವ ಹವಳದ ಬಳ್ಳಿಗಳನ್ನೂ ಕದ್ದು ಮಾರುತ್ತಾರೆ. ಆಂಧ್ರಪಾಲಜಿ ಮ್ಯೂಜಿಯಂ ಬಳಿ ಇರುವ ಅಂಗಡಿಯೊಂದರಲ್ಲಿ ರಾಜೇಶ್ವರಿ ಉಷಾ ಇಬ್ಬರೂ ಕಪ್ಪೆಚಿಪ್ಪಿನ ಆಭರಣಗಳನ್ನು ಕೊಳ್ಳಲು ಚೌಕಾಸಿ ನಡೆಸುತ್ತಿದ್ದರು. ಆ ಅಂಗಡಿಯ ಹಿಂದುಗಡೆ ಕಪ್ಪೆಚಿಪ್ಪುಗಳನ್ನು ಕತ್ತರಿಸಿ ಪಾಲಿಷ್ ಕೊಡುವ ಯಂತ್ರವನ್ನು ಇಟ್ಟಿದ್ದರು. ಅದನ್ನು ನೋಡಲು ಹೋದಾಗ ನಾನು ಈ ದೈತ್ಯ ಕಪ್ಪೆಚಿಪ್ಪನ್ನು ಮೊದಲು ನೋಡಿದ್ದು. ದೊಡ್ಡ ಹರಿವಾಣದಷ್ಟು ದೊಡ್ಡದಾಗಿದ್ದ ಇದರ ಒಳಭಾಗ ಮುತ್ತಿನ ಬಣ್ಣದಲ್ಲಿ ಹೊಳೆಯುತ್ತಿರುತ್ತದೆ. ಇದನ್ನು ಪಾಲಿಷ್ ಮಾಡಿ ಟ್ರೇಯಂತೆ ಉಪಯೋಗಿಸಲು ಮಾರಾಟಕ್ಕಿಟ್ಟಿರುತ್ತಾರೆ.

ನಾವು ಚೆರಿಯಾ ಟಾಪು, ವಂಡೂರುಗಳಿಗೆ ಹೋದಾಗ ಸಮುದ್ರ ತೀರದಲ್ಲಿ ಇವು ಬಿದ್ದಿರುವುದನ್ನು ನೋಡಿದೆವು. ಆದರೆ ಏಳೆಂಟು ಕೇಜಿ ತೂಕವಿರುವ ಇದನ್ನು ಹೊತ್ತುಕೊಂಡು ತಿರುಗಲು ಹಿಂಜರಿದು ಅದನ್ನು ಅಲ್ಲಿಯೇ ಬಿಸಾಡಿದೆವು. ಜೆರಾಲ್ಡ್ ಡ್ಯುರೆಲ್ ಮಾರಿಷಸ್ ದ್ವೀಪಗಳ ಬಳಿಯೂ ಇವುಗಳು ಸಿಗುತ್ತವೆಂದು ತಿಳಿಸುತ್ತಾ ಡ್ರೈವರ್‌ಗಳಿಗೆ ಇವು ಉಂಟುಮಾಡುವ ಅಪಾಯವನ್ನು ತಿಳಿಸುತ್ತಾನೆ. ಸಮುದ್ರದ ತಳದ ಬಂಡೆಗಳಿಗೆ ಬಲವಾಗಿ ಕಚ್ಚಿ ಅಂಟಿಕೊಂಡಿರುವ ಜಲಚರಗಳನ್ನು ಬಂಧಿಸಿಬಿಡುತ್ತವೆ. ಒಳಗೆ ಒಸರುವ ಜೀರ್ಣರಸದಲ್ಲಿ ಅವು ಅನಂತರ ಕರಗಿ ಕಪ್ಪೆಚಿಪ್ಪಿನೊಳಗಿರುವ ಜೀವಿಗೆ ಆಹಾರವಾಗಿಬಿಡುತ್ತವೆ. ಎಲ್ಲ ಕಪ್ಪೆಚಿಪ್ಪುಗಳ ಆಹಾರಾನ್ವೇಷಣೆಯ ಜೀವನ ಕ್ರಮವೇ ಇದು.

ಸಣ್ಣಪುಟ್ಟ ಕಪ್ಪೆಚಿಪ್ಪುಗಳಿಂದ ಮುಳುಗುವವರಗೆ ಯಾವ ಅಪಾಯವೂ ಇಲ್ಲ. ಅಪಾಯ ಇರುವುದು ಈ ದೈತ್ಯ ಚಿಪ್ಪುಗಳಿಂದ ಮಾತ್ರ. ಮುಳುಗಿದವರು ಅಕಸ್ಮಾತ್ ಅರಿಯದೆ ಈ ಚಿಪ್ಪುಗಳ ಕಳೆದುಕೊಂಡಿರುವ ಬಾಯಿಯ ನಡುವೆ ಕಾಲಿಟ್ಟರೆ ಅವು ಟಪಕ್ಕನೆ ಮುಚ್ಚಿಕೊಂಡು ಬಿಡುತ್ತವೆ. ಎಷ್ಟು ಬಲವಾಗಿ ಕಾಲುಗಳನ್ನು ಎಳೆದರೂ ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ಅಂಥ ಯಮಪಾಶ ಈ ಕಪ್ಪೆಚಿಪ್ಪುಗಳದ್ದು!

ಬಂಡೆಗೆ ಬಲವಾಗಿ ಕಚ್ಚಿಹಿಡಿದಿರುವ ಇವುಗಳ ಸಮೇತ ಈಜಿ ಮೇಲೆ ಬರುವುದೂ ಅಸಾಧ್ಯ. ಮುಳುಗಿದವ ಕೆಲವೇ ನಿಮಿಷಗಳಲ್ಲಿ ಉಸಿರಿಲ್ಲದೆ ನೀರಿನೊಳಗೆ ಸಾಯಬೇಕಾಗುತ್ತದೆ. ಇದರ ಮುಚ್ಚಿದ ಬಾಯನ್ನು ಕೈಯಿಂದಂತೂ

This PDF was created using the Sonic PDF Creator.
To remove this watermark, please license this product at www.investintech.com

ಮತ್ತೆ ಎಳೆದು ಕಳೆಸಲು ಸಾಧ್ಯವಿಲ್ಲ. ಕಪ್ಪೆಚಿಪ್ಪಿನ ಬುಡದಲ್ಲಿ ಎರಡೂ ಚಿಪ್ಪುಗಳನ್ನೂ ಒತ್ತಿ ಹಿಡಿದಿರುವ ಮಾಂಸದ ಸ್ನಾಯುಗಳನ್ನು ಕತ್ತರಿಸಿದರೆ ಮಾತ್ರ ಇದರ ಬಾಯಿ ಮತ್ತೆ ತೆರೆಯುತ್ತದೆ. ಆದಕ್ಕಾಗೆ ಮಾರಿಷಸ್ ಸಮುದ್ರದಲ್ಲಿ ಮುಳುಗುವವರು ಕಡ್ಡಾಯವಾಗಿ ಸೊಂಟದಲ್ಲಿ ಚಾಕುವನ್ನು ಒಯ್ಯುತ್ತಾರೆ.

ನಾವೆಲ್ಲಾ ರಸ್ತೆಬದಿಯ ಮೀನು ಮಾರ್ಕೆಟ್ಟಿನಲ್ಲಿ ಬಣ್ಣದ ಮೀನುಗಳನ್ನು ನೋಡಿ ಪ್ರಶಂಶಿಸುತ್ತಾ ಅವುಗಳ ಹೆಸರು ಇತ್ಯಾದಿಗಳನ್ನು ವಿಚಾರಿಸುತ್ತಾ ಇರಬೇಕಾದರೆ ವಂಡೂರಿನ ಬಸ್ಸು ಹೊರಟುಹೊಯ್ತು. ಮತ್ತೊಂದು ಬಸ್ಸಿಗೆ ಕಾದುಕಾದು ಬೇಸರವಾಗಿ ಕೊನೆಗೆ ಪ್ರಶಾಂತ ಚಿರಿಯಾಟಾಪುವಾಗೆ ಹೋಗೋಣವೆಂದು ತೀರ್ಮಾನಿಸಿದರು.

This PDF was created using the Sonic PDF Creator.
To remove this watermark, please license this product at www.investintech.com



# 9. ಚೆರಿಯಾಟಾಪಿನ ನೀಲಿಯ ಮೀನು, ಇಂಪೀರಿಯಲ್ ಪಿಜನ್, ಆಕ್ಟೋಪಸ್

ಚೆರಿಯಾ ಟಾಪುವಿನಲ್ಲಿ ಏನು ವಿಶೇಷ ಎಂದು ಪ್ರಶಾಂತನನ್ನು ಕೇಳಿದೆ. ಅದೊಂದು ಬೆಟ್ಟದ ತುದಿ ಇರಬಹುದೆಂದು ನನ್ನ ಊಹೆ. ಪ್ರಶಾಂತ ತಮಗೆ ಗೊತ್ತಿಲ್ಲೆಂದೂ, ರಾಜೀವ್‌ಗಾಂಧಿ ಅಲ್ಲಿಗೆ ಭೇಟಿಕೊಡಬಹುದೆಂದು ಅಲ್ಲೊಂದು ಹೆಲಿಪ್ಯಾಡ್ ನಿರ್ಮಿಸಿದ್ದಾರೆ ಎಂದು ಮಾತ್ರ ಕೇಳಿದ್ದೇನೆಂದು ಹೇಳಿದರು. ನಮ್ಮ ಬಸ್ಸು ಅಂಕುಡೊಂಕಿನ ಘಾಟಿ ರಸ್ತೆಯಲ್ಲಿ ತುಂಬಾ ದೂರ ಸಾಗಿತ್ತು. ದಾರಿಯ ಪಕ್ಕದಲ್ಲೆಲ್ಲಾ ತೆಂಗಿನತೋಟ, ಕುಯ್ಲಾದ ಗದ್ದೆಗಳು, ದೂರದಲ್ಲಿ ದಟ್ಟಕಾಡು. ಯಾವ ತೋಟಗಳೂ ಚೆನ್ನಾಗಿ ಕಾಣಲಿಲ್ಲ. ಹೆಸರಿಗೆ ನಾಲ್ಕು ಕಾಯಿ ಹಿಡಿದು ಹೆಸರಿನ ಮರ್ಯಾದೆ ಉಳಿಸಿಕೊಂಡಿದ್ದುವಷ್ಟೆ.

ರಸ್ತೆ ಪಕ್ಕದಲ್ಲಿ ಅಲ್ಲಲ್ಲಿ ಮರದ ಹಲಗೆಗಳಿಂದ ಕಟ್ಟಿದ ಮನೆಗಳು ಕಾಣಬರುತ್ತಿದ್ದವು. ಪಟ್ಟಣಗಳನ್ನು ಬಿಟ್ಟರೆ ಅಂಡಮಾನಿನುದ್ದಕ್ಕೂ ನಮಗೆ

This PDF was created using the Sonic PDF Creator.
To remove this watermark, please license this product at www.investintech.com

ಇಟ್ಟಿಗೆ ಮನೆಗಳ ಬದಲು ಮರದ ದಿಮ್ಮಿಗಳ ಮನೆಗಳೇ ಕಾಣುತ್ತಿದ್ದವು. ಸಿಮೆಂಟ್ ಸಹ ಭಾರತದಿಂದ ತರಿಸಿಕೊಳ್ಳಬೇಕಾದುದರಿಂದ ಮರದಲ್ಲಿ ಮನೆ ಕಟ್ಟುವುದೇ ಅವರಿಗೆ ಸುಲಭವಿದ್ದಿರಬೇಕು. ದೊಡ್ಡ ದೊಡ್ಡ ಮರದ ಕಂಬ ಗಳನ್ನು ನೆಟ್ಟು ಅದರ ಮೇಲೆ ಅಟ್ಟ ಒಂದನ್ನು ನಿರ್ಮಿಸಿ ಮರದ ಹಲಗೆಗಳಿಂದ ಮನೆಗಳನ್ನು ನಿರ್ಮಿಸಿದ್ದರು. ಸೂರುಗಳು ಸಾಧಾರಣವಾಗಿ ಜಿಂಕ್‌ಶೀಟಿನವು, ಇಲ್ಲವೇ ಹುಲ್ಲಿನದು. ಅಂಡಮಾನಿನಲ್ಲಿ ಎಲ್ಲೂ ದೊಡ್ಡ ನದಿಗಳಿಲ್ಲ. ಆದ್ದ ರಿಂದ ಜಲವಿದ್ಯುತ್ ಯೋಜನೆಗೆ ಅವಕಾಶವೇ ಇರಲಿಲ್ಲ. ಮುಖ್ಯ ಪಟ್ಟಣಗಳಿಗೆ ವಿದ್ಯುತ್ ಸರಬರಾಜಿಗೆ ಪೆಟ್ರೋಲಿಯಂ ಇಂಧನವನ್ನೇ ಬಳಸಿ ವಿದ್ಯುದುತ್ಪಾದನೆ ಮಾಡಬೇಕಿತ್ತು.

ಬಸ್ಸಿನ ತುಂಬಾ ಬಂಗಾಳಿಗಳು ತುಂಬಿಕೊಂಡು ಒಂದೇಸಮ ಬಂಗಾಳಿ ಭಾಷೆಯಲ್ಲಿ ಗಳಗುಟ್ಟುತ್ತಿದ್ದರು. ತೋಟಗಳೆಲ್ಲಾ ಮುಗಿದು ದಟ್ಟಡವಿ ಆರಂಭ ವಾದ ಕೂಡಲೇ ಒಂದು ಚಿಕ್ಕ ಹಳ್ಳಿ ಸಿಕ್ಕಿತು. ಅಲ್ಲೊಂದಿಷ್ಟು ಟೀ ಷಾಪು ಗಳಿದ್ದವು. ಬಸ್ ನಿಂತುದರಿಂದ ನಾವು ಟೀ ಕುಡಿಯಲು ಇಳಿದೆವು. ಬಸ್ಸೊಳ ಗಿದ್ದ ಮುಕ್ಕಾಲು ಜನರೆಲ್ಲಾ ಅಲ್ಲಿಯೇ ಇಳಿಯತೊಡಗಿದ್ದರಿಂದ ಬಸ್ ಖಾಲಿ ಯಾಯಿತ್ತು. ಕೆಲವರು ಬಸ್ ಮೇಲೆ ಹತ್ತಿ ತಮ್ಮ ತಮ್ಮ ಸಾಮಾನುಗಳನ್ನು ಇಳಿಸಿ ಕೊಳ್ಳಲು ಹುಡುಕತೊಡಗಿದ್ದರು.

ನಾವು ಮತ್ತೆ ಬಸ್ ಹತ್ತಿದಾಗ ಬಸ್ಸೊಳಗೆ ಒಂದು ಅನವಶ್ಯಕ ಜಗಳ ಆರಂಭವಾಯಿತ್ತು. ಜಗಳದ ದೆಸೆಯಿಂದ ಮುಂದಿನ ಕಾಡುದಾರಿಯಲ್ಲಿ ಅಕ್ಕಪಕ್ಕ ಏನಿತ್ತೆಂದು ಗಮನಿಸಲು ಸಾಧ್ಯವಾಗಲಿಲ್ಲ.

ಜಗಳಕ್ಕೆ ಕಾರಣ ಇಷ್ಟೇ. ನಾನು ಟೀ ಕುಡಿದು ಬಸ್ಸಿನೊಳಗೆ ಹತ್ತಿದಾಗ ನನ್ನ ಸೀಟಿನಲ್ಲಿ ಯಾರೋ ಒಂದು ಚರ್ಮದ ಫೈಲನ್ನು ಇಟ್ಟಿದ್ದರು. ನಾನು ಅದನ್ನು ತೆಗೆದು ಖಾಲಿಯಿದ್ದ ಪಕ್ಕದ ಸೀಟಿನ ಮೇಲೆ ಇಟ್ಟೆ. ನನ್ನ ಪಕ್ಕ ರಾಜೇಶ್ವರಿ ಕುಳಿತುಕೊಳ್ಳುತ್ತಿರುವಾಗ ಬಸ್ ಹತ್ತಿದ ಯಾವನೋ ಒಬ್ಬ ನನ್ನ ಬಳಿ ಬಂದು ನನ್ನ ಸೀಟು ತೋರಿಸುತ್ತಾ ಇದು ನನ್ನ ಜಾಗ ಎಂದು ಅಬ್ಬರಿಸಿ ಕೂಗಿದ.

ನನಗೂ ಇದು ನಾನು ಕುಳಿತಿದ್ದ ಜಾಗ ಅಲ್ಲವೇ ಎಂದು ಅನುಮಾನ ಬಂದು ರಾಜೇಶ್ವರಿಗೂ ಏಳಲು ಹೇಳಿ ನಾನೂ ಎದ್ದೆ. ಬಸ್ಸಿನಲ್ಲಿ ಖಾಲಿ ಜಾಗ ಗಳಿಗೇನೂ ಕೊರತೆ ಇರಲಿಲ್ಲ. ನನ್ನ ಮುಂದಿನ ಸೀಟಿನಲ್ಲಿ ಪ್ರಶಾಂತ್ ಮತ್ತು ಮಲ್ಲಿಕ್ ಕುಳಿತಿದ್ದರು. ಆತನ ಮಾತು ಕೇಳಿಸಿಕೊಂಡವರೇ ಹಿಂದಕ್ಕೆ ತಿರುಗಿದರು.

This PDF was created using the Sonic PDF Creator.
To remove this watermark, please license this product at www.investintech.com

ಏಳುತ್ತಿದ್ದ ನನ್ನನ್ನು ನೋಡಿ "ನೀವು ಕೂತ್ಕೊಳ್ಳಿ. ಅದು ಹೇಗೆ ಅವನ ಜಾಗ, ಕೇಳ್ತೀನಿ. ನೀವು ನಮ್ಮ ಸೀಟಿನ ಹಿಂದೆ ಕುಳಿತಿದ್ದಲ್ಲವೆ?" ಎಂದು ನನ್ನನ್ನು ಅದುಮಿ ಕುಳ್ಳಿರಿಸಿ ನನ್ನ ಪರವಾಗಿ ಅವನ ಹತ್ತಿರ ಜಗಳ ತೆಗೆದರು.

"ಅದು ಹೇಗಯ್ಯಾ ನಿನ್ನ ಜಾಗ?" ಎಂದರು ಮಲ್ಲಿಕ್.

"ನನ್ನ ಫೈಲ್ ಇಲ್ಲಿ ಇಟ್ಟಿರಲಿಲ್ಲವೆ?"

"ನಿನ್ನನ್ನು ಯಾರು ಇಲ್ಲಿ ಫೈಲ್ ಇಡಲು ಹೇಳಿದರು."

"ಆ ಜಾಗ ಕಾದಿರಿಸಲು ಫೈಲ್ ನಾನೇ ಇಟ್ಟೆ."

"ನಾವು ಪೋರ್ಟ್‌ಬ್ಲೇರ್‌ನಿಂದ ಇಲ್ಲಿ ಕುಳಿತುಕೊಂಡು ಬಂದಿದ್ದು ನೀನು ನೋಡಲಿಲ್ಲವೆ?"

"ಅವರು ಇಳಿದು ಹೋಗಲಿಲ್ಲವೆ?"

"ನೀನೂ ಇಳಿಯಲಿಲ್ಲವೆ?"

"ಅವರೂ ನನ್ನ ಹಾಗೇ ಅವರ ಜಾಗದಲ್ಲಿ ಏನಾದರೂ ಇಟ್ಟು ಹೋಗಬೇಕಿತ್ತು."

"ಅವರ ಹತ್ತಿರ ಇಟ್ಟುಹೋಗಲು ಏನೂ ಇಲ್ವಲ್ಲ."

"ಆದರೆ ಬೇರೊಬ್ಬರ ವಸ್ತುವನ್ನು ಮುಟ್ಟಲು ಇವರಿಗೇನು ಅಧಿಕಾರ?"

"ಬೇರೊಬ್ಬರ ಸೀಟಿನ ಮೇಲೆ ನಿನ್ನ ಫೈಲ್ ಇಡಲು ನಿನಗೇನು ಅಧಿಕಾರ?"

ಮಲ್ಲಿಕ್ ಹಾಗೂ ಆ ಫೈಲಿನ ಯಜಮಾನನ ಜಗಳ ನೋಡಿ ಇಂಗ್ಲಿಷಿನಲ್ಲಿ ಜಗಳವಾಡುವುದು ಎಷ್ಟೊಂದು ಕಷ್ಟ ಎಂದು ನನ್ನ ಅರಿವಿಗೆ ಬಂತು. ಇಬ್ಬರ ಜಗಳವೂ ಅವರ ಕೋಪಾವೇಶದ ಅಭಿವ್ಯಕ್ತಿಯಂತೆ ಕಾಣದೆ ಯಾವುದೋ ಸರ್ಕಾರಿ ವ್ಯವಹಾರದಂತೆ ಕಾಣುತ್ತಿತ್ತು. ಅದೇ ತಮ್ಮ ಮಾತೃಭಾಷೆಯಲ್ಲಿ ಜಗಳ ಆಡಿದ್ದರೆ ಇಬ್ಬರೂ ಮರ್ಮಕ್ಕೆ ತಾಗುವಂತೆ ವಾಗ್ಬಾಣಗಳನ್ನು ಬಿಟ್ಟು ಈ ವೇಳೆಗೆ ಸಲೀಸಾಗಿ ಕೈ ಕೈ ಮಿಲಾಯಿಸುವ ಹಂತಕ್ಕೆ ಜಗಳ ಹೋಗುತ್ತಿತ್ತು. ಈಗಲಾದರೋ ಇಬ್ಬರೂ ಇಂಗ್ಲಿಷ್ ಗ್ರಾಮರನ್ನು ಮರೆಯದೆ ವಾಕ್ಯ ರಚನೆಯ ಕಡೆಗೆಲ್ಲಾ ಗಮನವಿಟ್ಟು ಜಗಳವಾಡಬೇಕಿತ್ತು. ಮಾತೃಭಾಷೆ ಎಷ್ಟೊಂದು

This PDF was created using the Sonic PDF Creator.
To remove this watermark, please license this product at www.investintech.com

ಆಪ್ತ ಮತ್ತು ಆತ್ಮೀಯ ಎಂದು ನಾನು ಯೋಚಿಸಿದೆ. ನಮ್ಮ ಆಲೋಚನೆಗೂ ಅಭಿವ್ಯಕ್ತಿಗೂ ಮಧ್ಯೆ ಕಂದರವೇ ಇರುವುದಿಲ್ಲ.

ಬಸ್ ದಟ್ಟಡವಿಯ ನಡುವೆ ನುಸುಳುವ ದಾರಿಯಲ್ಲಿ ಸಾಗುತ್ತಾ ಇತ್ತು. ಒಂದು ಮರದ ತುಂಬ ಆಕರ್ಷಕವಾದ ವಿಚಿತ್ರ ಆರ್ಕಿಡ್ ಮರದ ಮೈಯ್ಯೆ ಕಾಣದಂತೆ ಹಬ್ಬಿತ್ತು. ಏನು ಮಾಡುವುದು? ನಾನು ಅತ್ತ ಗಮನ ಕೊಡು ವಂತಿರಲಿಲ್ಲ. ಮಲ್ಲಿಕ್ ನನ್ನ ಪರವಾಗಿ ವಕಾಲತ್ತು ವಹಿಸಿ ಆ ಬಂಗಾಳಿ ಜೊತೆ ಜಗಳವಾಡುತ್ತಿರಬೇಕಾದರೆ ನಾನು ನಿರಾಸಕ್ತನಾಗಿದ್ದರೆ ನನ್ನ ಕೇಸ್ ಬಲಹೀನ ವಾಗಬಹುದಲ್ಲವೆ? ನಾನು ಕೆಲವು ಕಾರಣಗಳಿಗಾಗಿ ತೀರಾ ತಾಳ್ಮೆವಹಿಸಿದ್ದ. ಆ ಬಂಗಾಳಿ ಬಹುಶಃ ಪೂರ್ವಪಾಕಿಸ್ತಾನದಿಂದ ಬಂದ ನಿರಾಶ್ರಿತರಲ್ಲಿ ಒಬ್ಬನಿರ ಬಹುದು. "ಶರ್ಲಸೊಳೇ ಮಗನೆ, ಇದಕ್ಕೇ ನಿನ್ನನ್ನ ಸಾಬರು ದೇಶಬಿಟ್ಟು ಓಡಿಸಿದ್ದು" ಎಂದು ಒಂದೇಒಂದು ಮಾತೃಭಾಷೆಯ ಉದ್ಗಾರ ಸಾಕಿತ್ತು ಜಗಳ ಕೈಕೈ ಮಿಲಾಯಿಸುವ ಹಂತಕ್ಕೆ ಒಯ್ಯಲು.

ಕಿರಿಚಾಡುತ್ತಿದ್ದ ಬಂಗಾಳಿ ಜೊತೆಗೆ ಇನ್ನೊಬ್ಬ ಬಂಗಾಳಿ, ಕನ್ನಡಕ ದವ ಸೇರಿಕೊಂಡ. ಇಬ್ಬರೂ ಅವರ ಭಾಷೆಯಲ್ಲಿ ಏನೋ ಸಮಾಲೋಚನೆ ನಡೆಸಿದರು. ಕನ್ನಡಕದವ ಬಂಗಾಳಿಕಡೆ ಸಹಾನುಭೂತಿ ವ್ಯಕ್ತಪಡಿಸಿ ನಮ್ಮ ಕಡೆ ತಿರುಗಿ–

"ಇಂಜಸ್ಟೀಸ್। ನೀವು ಅನ್ಯಾಯ ಮಾಡಿದೀರಿ" ಎಂದ.

"ನತ್ತಿಂಗ್, ಯಾಕೆ ಅನ್ಯಾಯ? ಯಾರು ಇವನಿಗೆ ಫೈಲ್ ಇಡು ಅಂದವರು?" ಮಲ್ಲಿಕ್ ಜಗ್ಗುವಂತೆ ಕಾಣಲಿಲ್ಲ.

ದೈಹಿಕ ಬಲದಲ್ಲಾಗಲೀ ಸಂಖ್ಯಾಬಲದಲ್ಲಾಗಲೀ ನಾವು ಯಾರಿಗೂ ಅಲ್ಲಿ ಹೆದರಬೇಕಾದ ಪರಿಸ್ಥಿತಿ ಇರಲಿಲ್ಲ. ನಾನು ತಾಳ್ಮೆಯಿಂದ ಮಲ್ಲಿಕ್‌ಗೂ ಬಂಗಾಳಿಗೂ ಸಮಾಧಾನ ಹೇಳಿ ಹೇಳಿ "ನಿನಗೆ ಇಲ್ಲೇ ಕುಳಿತುಕೊಳ್ಳಬೇಕೆಂದು ಇಷ್ಟ ಇದ್ದರೆ ಈಗಲೂ ಜಾಗಬಿಟ್ಟು ಕೊಡುತ್ತೇನೆ. ಕುಳಿತುಕೊ. ಬಸ್ಸಿನಲ್ಲಿ ಬೇಕಾದಷ್ಟು ಸೀಟು ಖಾಲಿ ಇದೆ" ಎಂದು ಹೇಳಿದೆ.

"ನನಗೆ ಜಾಗ ಮುಖ್ಯ ಅಲ್ಲ. ನ್ಯಾಯ. ನೀನು ಯಾಕೆ ನನ್ನ ವಸ್ತುವನ್ನು ನನ್ನ ಅನುಮತಿಯೇ ಇಲ್ಲದೆ ಮುಟ್ಟಿದ್ದು. ನೀನು ನಾನು ಬರುವ

This PDF was created using the Sonic PDF Creator.
To remove this watermark, please license this product at www.investintech.com

ವರೆಗೂ ಇಲ್ಲೇ ನಿಂತಿದ್ದು ನನ್ನ ಅನುಮತಿ ಪಡೆದು ಫೈಲ್ ಎತ್ತಿಟ್ಟು ಕುಳಿತು ಕೊಳ್ಳಬೇಕಿತ್ತು'' ಎಂದು ಮತ್ತೆ ಆ ಬಂಗಾಳಿ ಕೂಗಾಡತೊಡಗಿದ.

"ನೀನು ಪೋರ್ಟ್‌ಬ್ಲೇರ್‌ನಿಂದ ಕುಳಿತಿದ್ದ ಜಾಗ ಬದಲಾಯಿಸು ಅಂತ ಹೇಳಿದ್ದು ಯಾರು?'' ಎಂದು ಮತ್ತೆ ಸುಮ್ಮನೆ ಕುಳಿತಿದ್ದ ಮಲ್ಲಿಕ್ ತಿರುಗಿ ಬಿದ್ದರು.

ನಾನು "ನಾವು ಸಾವಿರಾರು ಮೈಲಿ ಪ್ರಯಾಣ ಮಾಡಿ ಬಂದಿರೋದು ಜಗಳ ಆಡೋದಕ್ಕಲ್ಲ. ನೀನು ಬೇಕಾದರೆ ಇಲ್ಲಿ ಬಂದು ಕುಳಿತುಕೋ. ಇಲ್ಲಾ ಜಗಳ ನಿಲ್ಲಿಸು'' ಎಂದು ಬಂಗಾಳಿಗೆ ಹೇಳಿದ. ನನ್ನ ಸಮಾಧಾನದ ಧೋರಣೆ ನೋಡಿ "ಏನ್ರಿ ಅವನ ಫೈಲು ಬಿಸಾಕಿದ ಜಾಗವೆಲ್ಲಾ ಅವನದ್ದೋ? ಅದ್ಯಾಕೆ ನೀವು ಏಳಬೇಕು?'' ಎಂದು ನನ್ನ ಮೇಲೆ ಮಲ್ಲಿಕ್ ಎಗರಿ ಬಿದ್ದರು. ನನ್ನ ಲಾಯರ್ ನನಗೇ ರಾಂಗ್ ಹೊಡೆಯೋದನ್ನು ಕಂಡು ನನಗೂ ಗಾಬರಿಯಾಯ್ತು.

ಅಷ್ಟರಲ್ಲಿ ಹೆಂಗಸರ ಸೀಟಿನಿಂದ ಒಬ್ಬ ಬಂಗಾಳಿ ಮಹಿಳೆ ಎದ್ದು ಬಂದು ಜಗಳವಾಡುತ್ತಿದ್ದ ಬಂಗಾಳಿಗಳಿಬ್ಬರಿಗೂ ಅವರ ಭಾಷೆಯಲ್ಲಿ "ಕಬೆಕಬೆಕಬೆ'' ಎಂದು ಏನನ್ನೋ ಸಂಜ್ಞೆ ಮಾಡಿದಳು. ಆಕೆಯ ಹಸ್ತಕ್ಷೇಪದ ನಂತರ ನ್ಯಾಯಕ್ಕಾಗಿ ಅವರಿಬ್ಬರೂ ನಡೆಯಿಸುತ್ತಿದ್ದ ಹೋರಾಟ ನಿಂತಿತು. ಆದರೆ ಈ ಅವಿವೇಕಿಯ ವಿರುದ್ಧ ಸೌಮ್ಯ ಧೋರಣೆ ತಳೆದು ಸಮಾಧಾನದ ಮಾತಾಡಿದ ಬಗ್ಗೆ ಮಲ್ಲಿಕ್ ಮುಂತಾದವರಿಗೆ ನನ್ನ ಮೇಲೆ ಬಂದ ಕೋಪ ಮಾತ್ರ ಆರಿರಲಿಲ್ಲ.

ವಾಸ್ತವವಾಗಿ ನನಗೆ ಕಪಾಳಕ್ಕೆ ಬಿಗಿಯುವಷ್ಟು ಕೋಪ ಬಂದಿತ್ತು. ಆದರೆ ನಾನು ಅದನ್ನು ಅದಷ್ಟುಬೇಗ ಜಗಳ ನಂದಿಸಲು ಯತ್ನಿಸಿದ ಕಾರಣಗಳೇ ಬೇರೆ. ಬಸ್ಸಿನ ಮುಂದುಗಡೆ ಡ್ರೈವರ್ ಸೀಟಿನ ಬಳಿ ಕುಳಿತಿದ್ದ ರಾಮದಾಸ್ ಮತ್ತು ಚಂದ್ರಶೇಖರ್ ಎಂಬ ಇಬ್ಬರು ಜಗಳಾಗ್ರೇಸರ ಗೆಳೆಯರ ಗಮನಕ್ಕೆ ಇದು ಬೀಳದಂತೆ ನೋಡಿಕೊಳ್ಳಲು ಶ್ರಮಿಸಿದ್ದೆ. ಅಂಡಮಾನಿಗೆ ಹೊರಟಾಗಿನಿಂದಲೂ ಈ ಇಬ್ಬರೂ ಎಲ್ಲೂ ತರಲೆ ತೆಗೆದಿರಲಿಲ್ಲ. ಚಂದ್ರು ಹೊಡೆದಾಟ ಮಾಡುವಂಥ ರೌಡಿ ಅಲ್ಲದಿದ್ದರೂ ಸತತವಾಗಿ ಎದುರಾಳಿಯ ಪ್ರಜ್ಞೆ ತಪ್ಪುವವರೆಗೆ ವಾದ ವಿವಾದದಲ್ಲಿ ತೊಡಗುವ ಮನಶ್ಶಕ್ತಿ ಇತ್ತು. ಚಂದ್ರು ಫೈಲ್ ಓಪನ್ ಮಾಡಿದ ರೆಂದರೆ ಅದನ್ನು ಕ್ಲೋಸ್ ಮಾಡುವುದೇ ಕಷ್ಟ ಎನ್ನುವುದು ಅಜುಬಾಜಿ ನವರಿಗೆಲ್ಲಾ ಗೊತ್ತಿದ್ದ ವಿಷಯ.

This PDF was created using the Sonic PDF Creator.
To remove this watermark, please license this product at www.investintech.com

ಇನ್ನು ಜಗಳದಲ್ಲಿ ಗೆಳೆಯ ರಾಮ್‌ದಾಸ್‌ರ ಸಹಾಯ ತಗೊಂಡ[illegible] ನಮ್ಮ ಯಾವ ವೈರಿಯಿಂದಲೂ ಒದಗದಷ್ಟು ತೊಂದರೆಗಳು ಖಾತರಿ. [illegible] ಜಗಳಗಳಲ್ಲಿ ರಾಮದಾಸ್ ಇದ್ದಕ್ಕಿದ್ದಂತೆ ನುಗ್ಗಿ ನಮ್ಮ ವಕಾಲತ್ ವ[illegible] ಪರಿಸ್ಥಿತಿ ಕ್ರಿಮಿನಲ್ ಕೇಸುಗಳವರೆಗೆ ಬಿಗಡಾಯಿಸಿದ ಅನೇಕ ದೃಷ್ಟಾಂತಗಳ[illegible] ನಾನು ಕೊಡಬಲ್ಲೆ. ವೈಯ್ಯಕ್ತಿಕ ಜಗಳಗಳಿಗೆ ಒಂದು ಸೈದ್ಧಾಂತಿಕ ಸ್ವರೂಪವನ್ನು ಆರೋಪಿಸಿ ಅದನ್ನು ಆದರ್ಶಗಳ ಯುದ್ಧವನ್ನಾಗಿ ಪರಿವರ್ತಿಸುವುದು ರಾಮ್‌ದಾಸ್‌ಗೆ ಕರಗತವಾಗಿರುವ ಕಲೆ. ಹಾಗಾಗಿ ರಾಮದಾಸ್ ನಮ್ಮ ಪರವಾಗಿ ಜಗಳಕ್ಕೆ ಇಳಿದರೆ ವೈರಿಗಳಿಗೆ ಗಾಬರಿಯಾಗುವುದಕ್ಕಿಂತ ಹೆಚ್ಚಾಗಿ ಮಿತ್ರರಿಗೆ ನಡುಕ ಶುರುವಾಗಿರುತ್ತದೆ.

ಚಂದ್ರು ಮುಂದುಗಡೆ ಸೀಟಿನಿಂದ ಎದ್ದುಬಂದು ತಮ್ಮ ವಾದದ ಅಕ್ಷಯಪಾತ್ರೆಯ ಮುಚ್ಚಳ ತೆಗೆದರೆ ಏನು ಕತೆ? ರಾಮದಾಸ್ ಬಂದು ಬೇರೊಬ್ಬರ ಸೀಟಿನ ಮೇಲಿಟ್ಟ ಫೈಲನ್ನು ಕಿಟಕಿಯಿಂದ ಆಚೆಗೆ ಎಸೆಯುವುದು ಭಾರತದ ಎಲ್ಲ ಪ್ರಜೆಗಳ ಸಂವಿಧಾನದತ್ತ ಹಕ್ಕು ಎಂದು ತೆಗೆದು ಎಸೆದರೆ ಏನು ಕತೆ?

ನಾನೂ ಜಗಳ ಆದಷ್ಟುಬೇಗ ಫೈಸಲ್ ಮಾಡಲೆತ್ನಿಸಿದ್ದಕ್ಕೆ ಇದೊಂದು ಮುಖ್ಯ ಕಾರಣ. ಇನ್ನೊಂದು ಕಿಟಕಿಯಿಂದ ಆಚೆಗೆ ಸರಿಯುತ್ತಿದ್ದ ಅಂಡಮಾನಿನ ದಟ್ಟಡವಿಯನ್ನು ನೋಡೋಣ ಎಂಬುದು. ಆದರೆ ಜಗಳ ನಿಂತು ಸಮಾಧಾನ ನೆಲಸುವ ಹೊತ್ತಿಗೆ ಚಿರಿಯಾ ಟಾಪು ಬಂದೇಬಿಟ್ಟಿತು. ಬಸ್ಸಿಳಿದ ನಂತರ ಮಲ್ಲಿಕ್ ಚಂದ್ರುಗೂ ರಾಮದಾಸ್‌ಗೂ ನಡೆದುದನ್ನೆಲ್ಲಾ ಹೇಳಿದರು. ರಾಮ್‌ದಾಸ್ "ಏನ್ರಿ ಅವನಿಗೆ ಸರಿಯಾಗಿ ಬುದ್ಧಿಕಲಿಸೋದು ಬಿಟ್ಟು" ಎಂದು ನನ್ನ ಹೇಡಿತನವನ್ನು ಬಯ್ದರು. "ಅದು ಹ್ಯಾಗೆ ನಿಮ್ಮದು ಅನ್ಯಾಯ ಅಂತೆ? ಕೈಯಲ್ಲಿ ಮುಟ್ಟದೆ ಫೈಲನ್ನು ಸೀಟಿನಿಂದ ಸ್ಥಳಾಂತರಿಸೋದು ಹ್ಯಾಗೆ? ಸ್ವಲ್ಪ ಕೇಳಬೇಕಿತ್ತು ಅವನಿಗೆ" ಎಂದು ಚಂದ್ರು ವಾದದ ಕೆಲವು ಪಾಯಿಂಟ್‌ಗಳನ್ನು ಹೇಳಿಕೊಟ್ಟರು.

* * *

ಚಿರಿಯಾ ಟಾಪುವಿನಲ್ಲಿ ನಮ್ಮನ್ನು ಇಳಿಸಿದ ಬಸ್ಸು ಅಲ್ಲಿಂದ ಹಿಂದಿರುಗಿ ಪೋರ್ಟ್‌ಬ್ಲೇರಿಗೆ ಹೊರಟು ಹೋಯ್ತು. ನಾವು ಬಂದ ದಾರಿ ಅಲ್ಲಿಗೆ ಕೊನೆಯಾಗಿತ್ತು. ನಾನು ಊಹಿಸಿದಂತೆ ಅದೇನೂ ಬೆಟ್ಟದ ತುದಿಯಾಗಿರಲಿಲ್ಲ.

This PDF was created using the Sonic PDF Creator.
To remove this watermark, please license this product at www.investintech.com

ರಸ್ತೆಯ ಎಡಕ್ಕೆ [illegible]
ದಟ್ಟವಾಗಿಯೂ ಇತ್ತು. [illegible]
ನುಗ್ಗಿತ್ತು. [illegible] ಸಮುದ್ರದ [illegible]
ಕಡಿಮೆ [illegible]
ಸಾಮಾನ್ಯ [illegible]
ಬಂದವೋ? [illegible]

[illegible]
ವಸತಿಗೃಹ ಇತ್ತು. [illegible]
ಕಟ್ಟಿಸಿದ್ದಿರಬಹುದು [illegible]
ಚಿಕ್ಕ ಮನೆಗಳ ಸಾಲುಗಳಿದ್ದವು. [illegible]
ಮನೆಗಳ ಬಳಿ ನೆರಳಲ್ಲಿ [illegible]
ಕುಡಿದುಕೊಂಡು [illegible]
ಕೊಡಲಿದ

ಅವನ ಕೊದಲ್ಲುವಿಗಿಂದ ನಾವು ಗ್ರಹಿಸಿದ್ದಂದರೆ ಅವನು ಅಲ್ಲಿಯ ತೋಟಿ. ಅಲ್ಲಿದ್ದಷ್ಟೂ ಮನೆಗಳ ಸಾಲು ರಾಜೀವ್‌ಗಾಂಧಿ ಮತ್ತು ಅವರ ಪರಿವಾರದವರಿಗೆ ಮೂತ್ರ ವಿಸರ್ಜನೆಗೆ ಕಟ್ಟಿಸಿದ ಟಾಯ್ಲೆಟ್‌ಗಳಂತೆ. ರಾಜೀವ್‌ಗಾಂಧಿ ಬರಲೇ ಇಲ್ಲ. ಆದರೆ ಮೇಲಧಿಕಾರಿ ಯಾವಾಗಬೇಕಾದರೂ ಬರುವ ಸಾಧ್ಯತೆ ಇದೆ ಎಂದು ಹೇಳಿರೋದರಿಂದ ಈತ ತುಂಬಾ ದೂರದಿಂದ ನೀರು ಹೊತ್ತು ತಂದು ದಿನವೂ ತೊಳೆಯುತ್ತಿದ್ದಾನಂತೆ. "ನೀವು ಬೇಕಾದರೆ ನನಗೆ ಕುಡಿಯಲು ಐದು ರೂಪಾಯಿ ಕೊಟ್ಟು ಅದನ್ನು ಉಪಯೋಗಿಸಬಹುದು'' ಎಂದು ಹೇಳಿದ. ನಮಗೆ ಅಂಡಮಾನಿನಲ್ಲಿ ಐದು ರೂಪಾಯಿ ತೆತ್ತು ಮೂತ್ರ ವಿಸರ್ಜನೆ ಮಾಡುವ ಅಗತ್ಯ ಕಂಡು ಬರಲಿಲ್ಲ.

ನಾವು ಅರಣ್ಯ ಇಲಾಖೆಯ ಹೊಸ ವಸತಿಗೃಹದ ಬಳಿಗೆ ಹೋದಾಗ ಒಂದು ಸಣ್ಣ ಕಾಲುಹಾದಿ ಎದುರಿನ ಸಮುದ್ರದಂಡೆಗುಂಟ ಎಡಕ್ಕೆ ಹೋಗಿರುವುದು ಕಂಡಿತು. ಆ ದಾರಿ ಹಿಡಿದು ಹೊರಟೆವು. ಸಮುದ್ರದ ನೀರು ಇಳಿಯತೊಡಗಿತ್ತು. ದಂಡೆಯಲ್ಲಿದ್ದ ಮ್ಯಾಂಗ್ರೂ ಮರಗಳೆಲ್ಲ ಜೇಡರ ಕಾಲಿನಂತೆ ಬೇರು ಬಿಟ್ಟುಕೊಂಡು ನೀರಲ್ಲಿ ನಿಂತಿದ್ದವು.

This PDF was created using the Sonic PDF Creator.
To remove this watermark, please license this product at www.investintech.com

ನಡೆನಡೆದಂತೆ ದಾರಿ ಸಮುದ್ರದ ದಂಡೆಯಿಂದ ದೂರ ಸರಿಯುತ್ತಾ ಕಾಡೊಳಗೆ ಸಾಗತೊಡಗಿತು. ತಲೆ ಎತ್ತಿ ನೋಡಿದರೆ ಕುತ್ತಿಗೆ ಉಳುಕುವಷ್ಟು ಎತ್ತರದ ಮರಗಳು! ತರತರದ ಆರ್ಕಿಡ್‌ಗಳು ಫರ್ನಗಳು, ಬಂದಳಿಕೆಗಳು. ವಿಚಿತ್ರವೆಂದರೆ ಇವುಗಳಲ್ಲಿ ಬಹುಪಾಲು ನಮಗೆ ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಚಿರಪರಚಿತವಾಗಿರುವಂಥದೆ. ಶಿವನೆ, ಹೊನ್ನೆ, ನೇರಲು, ಸುರಗಿ, ಸುರಹೊನ್ನೆ ಇತ್ಯಾದಿ ಮರಗಳು. ವಿಶೇಷವೆಂದರೆ ಇವೆಲ್ಲ ನಾವು ಗುರುತು ಹಿಡಿಯಲಾರದಷ್ಟು ಭೀಕರ ಆಕಾರ ತಳೆದಿದ್ದವು.

ಸುರಹೊನ್ನೆ ಮರವನ್ನು ಹೂ ಬಿಡುವ ಗಿಡದೆತ್ತರದ ಸಸ್ಯವನ್ನಾಗಿ ನೋಡಿದ್ದ ನಮಗೆ ಭೂತಾಕಾರದ ಮರವಾಗಿ ನೋಡಿದಾಗ ಗುರುತು ಹಿಡಿಯಲು ಕಷ್ಟವೇ ಸರಿ. ಇದರೊಡನೆ ಅನೇಕ ಅಪರಿಚಿತ ಮರಗಳೂ ಕಂಡವು. ಆದರೆ ಅವು ಅಂಡಮಾನಿಗೆ ವಿಶಿಷ್ಟವಾದವೋ ಅಲ್ಲವೋ ಗೊತ್ತಾಗಲಿಲ್ಲ. ಬೆಂಗಳೂರಿನ ನರ್ಸರಿಗಳಲ್ಲಿ ತುಂಬಾ ದುಬಾರಿ ಬೆಲೆಗೆ ಮಾರಾಟವಾಗುವ ಸೈಕಸ್‌ಮರದ ಕಾಡುಗಳನ್ನೇ ನೋಡಿದೆವು. ಕೆಲವಂತೂ ಬೃಹದಾಕಾರವಾಗಿ ಬೆಳೆದು ತೆಂಗಿನ ಮರಗಳನ್ನು ಹೋಲುತ್ತಿದ್ದವು. ಬೆಂಗಳೂರಿನ ಬೆಲೆಯ ಲೆಕ್ಕದಲ್ಲಿ ಅಲ್ಲಿ ಹಲವಾರು ಕೋಟಿ ರೂಪಾಯಿಗಳಷ್ಟು ಸೈಕಸ್ ಗಿಡಗಳಿತ್ತೆಂದು ಹೇಳಬಹುದು.

ನಿಕೋಬಾರ್ ದ್ವೀಪ ಸಮುದಾಯಕ್ಕೆ ಹೋದರೆ ಅಲ್ಲಿನ ವನಸಂಪತ್ತು ಸಂಪೂರ್ಣ ಭಿನ್ನವಾಗಿದೆಯೆಂದೂ ಅವು ಇಂಡೋನೇಷ್ಯ ಮಲಯ ಮತ್ತು ಸುಮಾತ್ರದ ಕಾಡುಗಳನ್ನು ಹೋಲುತ್ತವೆಂದು ಪ್ರಶಾಂತ್ ನಮಗೆ ಹೇಳಿದರು. ಅಂಡಮಾನ್ ದ್ವೀಪ ಸಮುದಾಯದ ಕಾಡುಗಳು ಮಾತ್ರ ಹೆಚ್ಚಾಗಿ ಭಾರತದ ಪಶ್ಚಿಮಘಟ್ಟಗಳ ಕಾಡುಗಳನ್ನೇ ಹೋಲುತ್ತಿತ್ತು.

ಕಾಡಿನ ದಟ್ಟಣಿಯ ನಡುವೆ ನಡೆಯುತ್ತಿರಬೇಕಾದರೆ ನಾನೊಂದು ವಿಚಿತ್ರವಾದ ಹಕ್ಕಿಯ ಕೂಗನ್ನು ಕೇಳಿದೆ. ಎಲ್ಲೋ ಕೇಳಿರುವ ಕೂಗಿನಂತೆ ಕೇಳಿಸಿತು. "ಗುವೂಕ್ ಗುವೂಕ್'' ಎನ್ನುವ ಕೂಗು. ಜ್ಞಾಪಿಸಿಕೊಳ್ಳಲೆತ್ನಿಸಿದೆ. ತಟ್ಟಕ್ಕನೆ ಹೊಳೆಯಿತು. ಗುಮ್ಮಾಡಲು ಹಕ್ಕಿ! ಇಂಪೀರಿಯಲ್ ಪಿಜನ್ ಎಂದು ಕರೆಯುವ ಹದ್ದಿನಷ್ಟು ದೊಡ್ಡದಾದ ಒಂದು ಪಾರಿವಾಳ. ಹಸಿರು ಮತ್ತು ಕಂದುಬಣ್ಣದ ಈ ಪಾರಿವಾಳ ಹೆಚ್ಚಾಗಿ ಅತ್ಯಂತ ಎತ್ತರದ ಮರಗಳಿರುವ ಕಾಡುಗಳಲ್ಲಿ ಮಾತ್ರ ವಾಸಿಸುತ್ತದೆ. ಧೂಪದ ಕಾಯಿಗಳನ್ನು ಇಡಿಇಡಿಯಾಗಿ

This PDF was created using the Sonic PDF Creator.
To remove this watermark, please license this product at www.investintech.com

ನುಂಗುವ ಇದು ಬರಿಯ ಹಣ್ಣುಗಳನ್ನು ಮಾತ್ರ ತಿಂದು ಬದುಕುತ್ತದೆ. ಎಂದೂ ನೆಲಕ್ಕೆ ಇಳಿಯುವುದೇ ಇಲ್ಲ.

ಅಂಡಮಾನಿನಲ್ಲಿ ಈ ದ್ವೀಪಕ್ಕೇ ವಿಶಿಷ್ಟವಾದ ಅಂಡಮಾನ್ ಇಂಪೀರಿಯಲ್ ಪಿಜನ್ ಎಂಬುದೊಂದಿದೆ ಎಂದು ಸಲೀಂ ಅಲಿ ಬರೆದಿದ್ದರು. ಮಲ್ಲಿಕ್‌ಗೂ ಚಂದ್ರುಗೂ ಈ ವಿಷಯ ತಿಳಿಸಿ ಅದನ್ನು ನೋಡಲು ಪ್ರಯತ್ನಿಸೋಣ ಎಂದು ಹೇಳಿದೆ.

ಮರಗಳಿಂದ ಅವುಗಳ ಕೂಗು ಕೇಳಿಸುತ್ತಿತ್ತೇ ಹೊರತು ಅವುಗಳು ಮಾತ್ರ ಕಾಣುತ್ತಿರಲಿಲ್ಲ. ಮರಗಳ ಹತ್ತಿರ ಹೋದರೆ ಬಡಬಡ ರೆಕ್ಕೆ ಬಡಿದು ಕೊಂಡು ಹಾರಿಹೋಗುತ್ತಿದ್ದವು. ಎಷ್ಟು ಪ್ರಯತ್ನಿಸಿದರೂ ಅವು ಕುಳಿತಿರುವಂತೆ ಅವನ್ನು ನೋಡಲು ಸಾಧ್ಯವಾಗಲಿಲ್ಲ. ಕೊನೆಗೊಮ್ಮೆ ಹಕ್ಕಿಯೊಂದು ಹಾರಿ ಬಂದು ಕುಳಿತುದನ್ನು ನೋಡಿದೆ. ಅದು ಕುಳಿತ ಜಾಗವನ್ನು ಚೆನ್ನಾಗಿ ಗುರುತಿಟ್ಟು ಕೊಂಡು ಪೊದೆಗಳಡಿಯಲ್ಲಿ ನುಸುಳಿಕೊಂಡು ಹೋಗಿ ದೂರದರ್ಶಕದಲ್ಲಿ ನೋಡಿದೆವು. ಕೊಂಬೆಗಳ ಸಂದಿಯಲ್ಲಿ ಎಲೆಗಳ ನಡುವೆ ಕುಳಿತಿತ್ತು. ಗಾತ್ರದಲ್ಲಿ ಒಂದು ಕೋಳಿಯಷ್ಟು ದೊಡ್ಡಕ್ಕೆ ಕಾಣುತ್ತಿತ್ತು. ಆದರೆ ಹಕ್ಕಿಯ ಹಿನ್ನಲೆಗೆ ಪ್ರಕಾಶಮಾನ ಆಗಸ ಇದ್ದುದರಿಂದ ಆ ಹಕ್ಕಿಯ ಬಣ್ಣಗಳ ವಿವರಗಳು ಯಾವುವೂ ಕಾಣಸಿಗಲಿಲ್ಲ. ಹಾಗಾಗಿ ನಮ್ಮೂರಿನ ಹಕ್ಕಿಗೂ ಇದಕ್ಕೂ ಏನೂ ವಿಶಿಷ್ಟವಾದ ವ್ಯತ್ಯಾಸವೆಂದೂ ಗೊತ್ತಾಗಲಿಲ್ಲ. ಹಕ್ಕಿ ನಮ್ಮ ಚಲನವಲನಗಳನ್ನು ಕುತ್ತಿಗೆ ಓರೆ ಮಾಡಿಕೊಂಡು ಸಂಶಯದಿಂದ ನೋಡಿ ಹಾರಿಹೋಯ್ತು. ನಾವು ಮತ್ತೆ ಗುರಿಯಿರದ ಆ ದಾರಿಯಲ್ಲಿ ಮುಂದುವರಿದೆವು.

* * *

ಕೆಲವು ಮೈಲುಗಳು ನಡೆದನಂತರ ಆ ರಸ್ತೆ ಮತ್ತೆ ಬಲಕ್ಕೆ ತಿರುಗಿ ಕಡಲದಂಡೆಯ ಕಡೆಗೆ ಸಾಗತೊಡಗಿತು. ದೂರದಲ್ಲಿ ಬಿಳಿಯ ಮರಳಿನ ದಂಡೆ ಕಾಣುತ್ತಿತ್ತು. ಅಲ್ಲಿಗೇ ತಲುಪುವ ವೇಳೆಗಾಗಲೇ ನಾವೆಲ್ಲ ಬಿಸಿಲಿನ ಝಳಕ್ಕೆ ಬಸವಳಿದು ಸುಸ್ತಾಗಿ ಹೋಗಿದ್ದೆವು. ಸಮುದ್ರದ ಶುಭ್ರ ಮರಳಿನ ತೀರಕ್ಕಿಂತಲೂ ದಂಡೆಯ ಮರಗಳ ಕರಿನೆರಳೇ ಆಪ್ಯಾಯಮಾನವಾಗಿ ಕಂಡಿತು.

ಎಲ್ಲರಿಗೂ ಬಾಯಾರಿಕೆ. ಹಸಿವನ್ನು ಹಿಂಗಿಸಲು ತಿಂಡಿಯನ್ನೇನೋ ಸಾಕಷ್ಟು ತಂದಿದ್ದೆವು. ಆದರೆ ನೀರು ತಂದಿರಲಿಲ್ಲ. ಎಲ್ಲಾದರೂ ಸಿಕ್ಕಬಹುದೆಂದು ತಿಳಿದಿದ್ದೆವು ಆದರೆ ಆ ನಿರ್ಜನ ಪ್ರದೇಶದಲ್ಲಿ ಎಲ್ಲಿಯೂ ಕುಡಿಯುವ

This PDF was created using the Sonic PDF Creator.
To remove this watermark, please license this product at www.investintech.com

ನೀರು ಕಾಣಲಿಲ್ಲ. ನಮಗೆ ಆಚ್ಚರಿಯಾಗುವಂತೆ ಅಲ್ಲಿನ ದಟ್ಟಕಾಡಿನ ನಡುವೆ ದೂರದಲ್ಲಿ ಒಂದು ಹುಲ್ಲಿನ ಸೂರು ಕಾಣಿಸಿತು. ಅಂದ ಮೇಲೆ ಅಲ್ಲಿ ಯಾವು ದಾದರೂ ಮ ನುಷ್ಯಪ್ರಾಣಿ ಇರುವುದು ಖಂಡಿತ ಎಂದು ನಾನು ಮಲ್ಲಿಕ್ ಇಬ್ಬರೂ ಅಲ್ಲಿಗೆ ಹೋದೆವು. ಅಲ್ಲೊಬ್ಬಳು ಲಾಚಾರಾಗಿ ಹೋಗಿದ್ದ ಒಂದು ನೂರು ವರ್ಷ ಹಳೆಯದಿರಬಹುದಾದ ಮುದುಕಿ ಕುಳಿತಿದ್ದಳು. ಆದರ ಕಣ್ಣು ಕಿವಿ ಗಳೊಂದು ಸುಸ್ಥಿತಿಯಲ್ಲಿರುವಂತೆ ತೋರಲಿಲ್ಲ. ಆಕೆ ನಮಗೆ ನೀರು ಕೊಡುವು ದಿರಲಿ, ಅದರ ಬಾಯಿಗೆ ಯಾರಾದರೂ ನೀರು ಬಿಟ್ಟರೆ ಆಕೆ ಸಂತೋಷದಿಂದ ಸ್ವರ್ಗ ಸೇರಬಹುದೆಂದು ನಮಗನ್ನಿಸಿತು.

ಅವಳ ಹತ್ತಿರ ನೀರು ಕೇಳಿದ್ದಕ್ಕೆ ಆಕೆ ಕಣ್ತೆತ್ತಿ ಆಕಾಶ ನೋಡುತ್ತಾ ಏನನ್ನೋ ಗೊಣಗಿದಳು, ನಮಗೇನೂ ಅರ್ಥವಾಗಲಿಲ್ಲ. ಆದರೆ ಅಲ್ಲಿ ಮನುಷ್ಯರ ವಾಸ ಇದ್ದಮೇಲೆ ಎಲ್ಲಾದರೂ ಕುಡಿಯುವ ನೀರು ಇರಲಿಕ್ಕೇಬೇಕೆನಿಸಿತು. ಮೊದಲು ಒಬ್ಬ ದೋಣಿಯವನನ್ನು ಕೇಳಿದಾಗ ಅವನಿಗೆ ಉತ್ತರಿಸುವ ವ್ಯವಧಾನ ವಿಲ್ಲದೆ ದೂರಪರ್ವತಗಳತ್ತ ಕೈ ತೋರಿಸಿ ಹುಟ್ಟುಹಾಕುತ್ತ ಹೊರಟು ಹೋಗಿದ್ದ. ಅದನ್ನು ಜ್ಞಾಪಕ ಇಟ್ಟುಕೊಂಡು ಗುಡಿಸಿಲಿಂದ ಕಾಡೊಳಗೆ ಹೋಗಿದ್ದ ಸಣ್ಣ ಕಾಲುಹಾದಿಯೊಂದನ್ನು ಹಿಡಿದೆವು. ಕೊಂಚ ದೂರದಲ್ಲೇ ಸಣ್ಣಗುಂಡಿಯೊಂದರಲ್ಲಿ ತಿಳಿನೀರೂ ಪಕ್ಕ ಒಂದು ಹಗ್ಗ ಕಟ್ಟಿದ ಡಬ್ಬವೂ ಇತ್ತು.

ಎಲ್ಲರೂ ಮರಳಿನ ಅಂಚಿನಲ್ಲಿದ್ದ ಮರಗಳ ನೆರಳಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳತೊಡಗಿದರು. ನಾನು ಮುಂದಕ್ಕೆ ಹೊರಟೆ. ನೆರಳಿನಲ್ಲಿ ಒಂದು ನಿಮಿಷ ಕುಳಿತರೂ ಆನಂತರ ಮೇಲೇಳಲು ಮನಸ್ಸು ಬರುವುದಿಲ್ಲೆಂದು ನನಗೆ ಗೊತ್ತಿತ್ತು. ದೂರದಲ್ಲಿ ಬಂಡೆಗಳ ಕಡಿದಾದ ತೀರಕ್ಕೆ ಸಮುದ್ರದ ಅಲೆಗಳು ಬಂದಪ್ಪಳಿಸುತ್ತಿದ್ದವು. ಗಾಳಹಾಕಿ ಮೀನು ಹಿಡಿಯಲು ಅದು ಹೆಚ್ಚು ಪ್ರಶಸ್ತ ವಾದ ಜಾಗವೆನ್ನಿಸಿತು.

ಬಂಡೆಗಳ ಮೇಲೆ ನಾನು ಚಂದ್ರು ಗಾಳಗಳನ್ನು ರೆಡಿಮಾಡಿಕೊಳ್ಳು ತ್ತಿದ್ದಾಗ ನಿರ್ಮಲಾ, ಶಾಂತ, ಬಸವರಾಜು ಎಲ್ಲ ಬರುತ್ತಿರುವುದು ಕಂಡಿತು. ರಾಮದಾಸ್ ಸಹ ಗಾಳ ತೆಗೆದುಕೊಂಡು ಬಂದರಾದರೂ ಬಿಸಿಲಿನ ಝಳ ತಾಳಲಾರದೆ ದೂರದ ಕಾಡೊಳಗೆಲ್ಲೋ ನೆರಳಿನಲ್ಲಿ ಹುದುಗಿ ಕುಳಿತರು. ಬಿಸಿಲು ಉರವಣಿಸಿತ್ತು. ಬಂಡೆಗಳೆಲ್ಲಾ ಕಾದು ಹೋಗಿದ್ದವು. ಅದರ ಮೇಲೆ ಗಾಳ ಬೀಸಿ

This PDF was created using the Sonic PDF Creator.
To remove this watermark, please license this product at www.investintech.com

ರಾಡುಹಿಡಿದು ಕುಳಿತುಕೊಳ್ಳುವುದು ಹರಯೋಗದಂತಿತ್ತು. ಕಡಲಿನ ಅಲೆಗಳಿಂದಲೂ ಬಿಸಿಲು ಲಯಬದ್ಧವಾಗಿ ಪ್ರತಿಫಲಿಸಿ ಮುಖಕ್ಕೆ ಬೀಳುತ್ತಿತ್ತು.

ನಮ್ಮಲ್ಲಿ ಯಾರಿಗೂ ಸಮುದ್ರದಲ್ಲಿ ಗಾಳದಿಂದ ಮೀನು ಹಿಡಿದ ಅನುಭವ ಇರಲಿಲ್ಲ. ಎಲ್ಲಿದ್ದರೂ ಮೀನು ಮೀನೇ, ನೀರು ನೀರೇ, ಎನ್ನುವ ತರ್ಕವನ್ನು ಅನುಸರಿಸಿ ಹೊಳೆ ಕೆರೆಗಳಿಗೆ ಒಯ್ಯುತ್ತಿದ್ದ ದಾರ ರೀಲು ರಾಡುಗಳನ್ನೇ ಇಲ್ಲಿಗೂ ತಂದಿದ್ದೆವು. ನಮ್ಮ ಈ ತೀರ್ಮಾನ ಮುಂದೆ ಎಂಥ ಪೇಚಿಗೆ ಸಿಕ್ಕಿಸುತ್ತದೆ ಎನ್ನುವ ಕಲ್ಪನೆಯೇ ನಮಗಿರಲಿಲ್ಲ.

ನನ್ನ ಗಾಳ ಬೀಸಿದ ಒಂದೆರಡು ಕ್ಷಣಗಳಲ್ಲೇ ನನ್ನ ದಾರ ಬಿಗಿಯಾಗತೊಡಗಿತು. ಮೊದಲು ಸಮುದ್ರದ ಹಿಮ್ಮರಳುವ ಅಲೆಗಳು ಎಳೆಯುತ್ತಿವೆ ಎಂದು ಭಾವಿಸಿದೆ. ಆದರೆ ಕೆಲವೆ ಕ್ಷಣಗಳೊಳಗೇ ದಾರ ತೀರ ಬಿಗಿಯಾಗಿ ದಾರ ರೀಲಿನಿಂದ ಬಿಚ್ಚಿಕೊಳ್ಳತೊಡಗಿತು. ದೂರ ಸಮುದ್ರದಲ್ಲಿ ಗಾಳಕ್ಕೆ ಸಿಕ್ಕಿದ ಮೀನು ಧಡಾರನೆ ನೆಗೆದು ಹಾರಿದ್ದೂ ಕಾಣಿಸಿತು.

ಮೀನು ಎಳೆಯುವುದರ ಅನುಭವ ಹೇಗಿರುತ್ತದೆಂದು ತಿಳಿಯಲು ಶಾಂತ ಬಂಡೆಗಳ ಮೇಲೆ ಹತ್ತಿಬಂದು ರಾಡನ್ನು ಹಿಡಿದುಕೊಂಡರು. ಮೀನು ಸಮುದ್ರದ ಅಲೆಗಳ ಮೇಲೆ ತಕಪಕಾ ಕುಣಿಯುತ್ತಾ ದಾರವನ್ನು ಹಿಗ್ಗಾಮುಗ್ಗಾ ಜಗ್ಗುತ್ತಿತ್ತು. ದಾರ ತುಂಡಾಗದಂತೆ ಜೋಪಾನವಾಗಿ ಆಡಿಸುತ್ತಾ ಅದು ಸುಸ್ತಾದನಂತರ ಅದನ್ನು ದಡದತ್ತ ಎಳೆಯತೊಡಗಿದೆವು.

ವಿಚಿತ್ರವಾದ ಮೀನು, ಹಾವಿನಂತೆ ಉದ್ದವಾಗಿತ್ತು. ಅದರ ಬಾಯಿ ಮೊಸಳೆಯ ಬಾಯಿಯಂತೆಯೇ ಇತ್ತು. ಉದ್ದಕ್ಕೂ ಗರಗಸದಂತೆ ಹರಿತವಾದ ಸಾಲು ಸಾಲು ಹಲ್ಲುಗಳು. ಕಚ್ಚಿದರೆ ಮಾಂಸ ಕಿತ್ತುಬರುವುದರಲ್ಲಿ ಅನುಮಾನವೇ ಇರಲಿಲ್ಲ. ಅಂಡಮಾನಿನಲ್ಲಿ ದೋಣಿಯಲ್ಲಿ ಹೋಗುವಾಗ ಈ ಮೀನುಗಳು ಗುಂಪುಗುಂಪಾಗಿ ಇತರ ಮೀನುಗಳನ್ನು ಬೇಟೆಯಾಡುವುದನ್ನು ನೋಡಿದ್ದೆ. ದಡಕ್ಕೆ ಎಳೆದ ನಂತರ ಅದರ ಹಲ್ಲುಗಳಿಂದ ಕಚ್ಚಿಸಿಕೊಳ್ಳದೆ ಅದಕ್ಕೆ ಹಿಡಿದಿದ್ದ ಗಾಳವನ್ನು ಬಿಚ್ಚುವುದು ಪ್ರಯಾಸದ ಕೆಲಸವಾಯ್ತು. ಹೇಗೋ ಬಿಚ್ಚಿ ಅದನ್ನು ಸಮುದ್ರಕ್ಕೆ ದಬ್ಬಿದೆವು. ಅದು ಕೊಂಚ ಹೊತ್ತು ಸುಧಾರಿಸಿಕೊಂಡು ಈಜಿ ಮಾಯವಾಯ್ತು.

ನಾವು ಈ ಮೀನನ್ನು ಬಿಡುಗಡೆ ಮಾಡುತ್ತಿರಬೇಕಾದರೆ ಚಂದ್ರು ಇದ್ದಕ್ಕಿದ್ದಂತೆ "ಷಾರ್ಕ್ ಷಾರ್ಕ್'' ಎಂದು ಕೂಗಿದರು. ನಾವು ಗಾಬರಿಯಿಂದ

This PDF was created using the Sonic PDF Creator.
To remove this watermark, please license this product at www.investintech.com

ಎಲ್ಲಿ ಎಂದು ಕೇಳುತ್ತ ಅವರ ಕಡೆಗೆ ತಿರುಗಿದೆವು. ನಿರ್ಮಲ ಚಂದ್ರು ಪಕ್ಕ ನಿಂತುಕೊಂಡು ಸಮುದ್ರದ ಕಡೆಗೆ ನೋಡುತ್ತಿದ್ದರು. ಚಂದ್ರು ಹಿಡಿದಿದ್ದ ರಾಡು ಬಿಲ್ಲಿನಂತೆ ಬಾಗಿತ್ತು.

"ನೋಡಿ ದಾರ ಎಳೆದುಕೊಂಡು ಹೋಗ್ತಾ ಇದೆ" ಎಂದು ಚಂದ್ರು ಬೊಬ್ಬೆ ಹೊಡೆದರು. ಯಾವುದೋ ಮೀನು ಚಂದ್ರು ಗಾಣದ ದಾರವನ್ನು ಭಯಂಕರ ವೇಗದಲ್ಲಿ ,ಆಳ ಸಮುದ್ರದ ಕಡೆಗೆ ಎಳೆದುಕೊಂಡು ಹೋಗುತ್ತಾ ಇತ್ತು. ಚಂದ್ರು ಗಾಣದ ರೀಲಿನಿಂದ ದಾರ ಸಿಪ್ಪೆ ಸುಲಿದಂತೆ ಬಿಚ್ಚಿಕೊಳ್ಳುತ್ತಿತ್ತು. ಷಾರ್ಕ್ ಆಗಿದ್ದರೆ ಏನಪ್ಪಾ ಮಾಡುವುದು ಎಂದು ಚಿಂತೆಯಾಯ್ತು. ಏಕೆಂದರೆ ಅದು ಸ್ವಲ್ಪ ಅಪಾಯಕಾರಿಯಾದ ಮೀನೆಂದು ನಾವು ತಿಳಿದಿದ್ದೆವು. ಅನೇಕರು ಅವುಗಳ ಕೈಗೆ ಸಿಕ್ಕು ಪ್ರಾಣ ಕಳೆದುಕೊಂಡಿದ್ದ ಕತೆಗಳನ್ನು ಓದಿದ್ದೆವು.

"ಗಾಬರಿ ಮಾಡಿಕೊಳ್ಳಬೇಡಿ. ಜೋಪಾನವಾಗಿ ದಾರ ತುಂಡಾಗದಂತೆ ಅದನ್ನು ಆಡಿಸಿ ಸುಸ್ತು ಮಾಡಿ" ಎಂದು ಕೂಗಿ ಹೇಳಿದೆ.

"ಇದು ಹೀಗೇ ಎಳೆದರೆ ನನ್ನ ರೀಲಿನ ದಾರ ಖರ್ಚಾಗಿ ಹೋಗತ್ತೆ" ಎಂದು ಚಂದ್ರು ಮತ್ತೆ ಬೊಬ್ಬೆ ಹೊಡೆದರು. ನಾವೆಲ್ಲ ಗಾಳ ಅಲ್ಲೇ ಬಂಡೆಯ ಮೇಲೆ ಬಿಟ್ಟು ಚಂದ್ರುಗೆ "ಮಾರಲ್ ಸಪೋರ್ಟ್" ಕೊಡಲು ಓಡಿದೆವು.

"ಎಲ್ರೀ ಷಾರ್ಕು" ಎಂದು ಕೇಳಿದೆ.

"ನೋಡ್ರಿ ಅಲ್ಲಿ" ಎಂದು ದೂರದ ಸಮುದ್ರದ ಕಡೆಗೆ ಬೆಟ್ಟುಮಾಡಿ ತೋರಿಸಿದರು. ದಾರ ಎಳೆಯುತ್ತಿದ್ದ ಮೀನು ಕೊಂಚ ಸುಸ್ತಾಯಿತೆಂದು ತೋರುತ್ತದೆ. ಎಳೆಯುವುದನ್ನು ನಿಲ್ಲಿಸಿ ಬಲಕ್ಕೆ ತಿರುಗಿತು. ಚಂದ್ರು ರೀಲು ತಿರುಗಿಸ ತೊಡಗಿದಾಗ ಹತ್ತಿರಕ್ಕೆ ಬರತೊಡಗಿತು. ಕೊಂಚ ಹತ್ತಿರ ಬಂದು ನಮ್ಮನ್ನು ನೋಡಿದ್ದೇ ತಡ ಮತ್ತೆ ದಾರ ಎಳೆದುಕೊಂಡು ಹೋಗತೊಡಗಿತು. ಹೀಗೆ ಅನೇಕ ಬಾರಿ ಆಡಿಸಿ ಆಡಿಸಿ ಚಂದ್ರು ಅದನ್ನು ಹತ್ತಿರಕ್ಕೆ ಎಳೆದುಕೊಳ್ಳತೊಡಗಿದರು. ದಾರ ತೀರ ದಡದ ಹತ್ತಿರಕ್ಕೆ ಬಂದಾಗ ಅದರ ತುದಿಯಲ್ಲೊಂದು ಕರಾಳವಾದ ಷಾರ್ಕನ್ನು ನಿರೀಕ್ಷಿಸಿದ್ದ ನಮಗೆ ನೀರಿನಲ್ಲಿ ಏನೂ ಕಾಣಲಿಲ್ಲ. ಆದರೂ ಈ ಅದೃಶ್ಯ ಮೀನು ದಾರ ಜಗ್ಗುವುದನ್ನು ಮಾತ್ರ ಬಿಡಲಿಲ್ಲ.

ಮೀನು ಸಂಪೂರ್ಣ ನೀರಿನ ಮೇಲೆ ಬಂದಾಗ ಅದು ಯಾಕೆ ಕಾಣುತ್ತಿಲ್ಲ ಎಂದು ಗೊತ್ತಾಯ್ತು. ಸಮುದ್ರದ ನೀರೇ ಘನೀಭವಿಸಿದಂತೆ ತಿಳಿನೀಲಿಯ ಬಣ್ಣದ ಮೀನು ಅದು. ಆ ಮೀನಿನ ವರ್ಣ ಸೌಂದರ್ಯ ನೋಡಿ

This PDF was created using the Sonic PDF Creator.
To remove this watermark, please license this product at www.investintech.com

ನಾವೆಲ್ಲ ಮಾರುಹೋದೆವು. ನೀರೊಳಗೆ ಮುಳುಗಿದ ಕೂಡಲೇ ಆ ಮೀನು ಅಂತರ್ಧಾನವಾದಂತೆ ಸಮುದ್ರದ ಬಣ್ಣದಲ್ಲಿ ಐಕ್ಯವಾಗಿಬಿಡುತ್ತಿತ್ತು, ಸುಸ್ತಾದ ಮೀನು ದಡಕ್ಕೆ ಹತ್ತಿರಾಯ್ತು.

''ರಾಮದಾಸ್ ಕರೀರ್ರೋ'' ಎಂದು ಚಂದ್ರು ಅತ್ಯುತ್ಸಾಹದಲ್ಲಿ ಕೂಗಿದರು. ಹಲವಾರು ಕೊರಳುಗಳು ಕಾಡೊಳಗೆ ಮಲಗಿದ್ದ ರಾಮದಾಸ್‌ರನ್ನು ಕೂಗಿದವು.

ನನ್ನ ಕ್ಯಾಮರಾಕ್ಕೆ ಕಲರ್ ಫಿಲ್ಮು ಹಾಕಿದ್ದೆ. ಬಸವರಾಜು ಹತ್ತಿರ ನನ್ನ ಕ್ಯಾಮರಾ ಇಸುಗೊಂಡು ಆ ಮೀನಿನ ಫೋಟೋ ತೆಗೆಯಲು ಸನ್ನದ್ಧನಾದ. ಚಂದ್ರು ಅದನ್ನು ದಡಕ್ಕೆ ಎಳೆಯಲು ಸಮುದ್ರದ ಅಲೆಗಳ ನಡುವೆ ಪ್ರಯತ್ನಿಸುತ್ತಿದ್ದರು. ನಾನು ಆ ಮೀನು ನೀರಿನಿಂದ ಮೇಲೆದ್ದಾಗ ಒಂದೆರಡು ಫೋಟೋ ತೆಗೆದೆ. ಚಂದ್ರು ಆ ಮೀನಿನ ಹತ್ತಿರ ಹತ್ತಿರ ಹೋಗಿದ್ದರು. ಅಷ್ಟರಲ್ಲಿ ಅನಿರೀಕ್ಷಿತವಾಗಿ ಒಂದು ದೊಡ್ಡ ಅಲೆ ಚಂದ್ರು ಮೊಳಕಾಲಿಗಿಂತಲೂ ಎತ್ತರಕ್ಕೆ ನುಗ್ಗಿ ಬಂತು. ಅವರೆಗೂ ಎಚ್ಚರಿಕೆಯಿಂದ ಮೀನಿನೊಡನೆ ದಾರ ತುಂಡಾಗದಂತೆ ಸೆಣೆಸಿದ್ದ ಚಂದ್ರು ನುಗ್ಗಿಬಂದ ಅಲೆಯ ಹೊಡೆತಕ್ಕೆ ಕೊಂಚ ಅಜಾಗರೂಕರಾದರು.

ಜೋರಾಗಿ ಬಂದ ಅಲೆ ಅಷ್ಟೇ ಜೋರಾಗಿ ಹಿಮ್ಮರಳುತ್ತಿತ್ತು. ಆಗೊಮ್ಮೆ ಆ ನೀಲಿಯ ಮೀನು ತನ್ನ ಅಳಿದುಳಿದ ಶಕ್ತಿಯನ್ನೆಲ್ಲಾ ಒಗ್ಗೂಡಿಸಿಕೊಂಡು ಆಳ ಸಮುದ್ರದ ಕಡೆಗೆ ಜಗ್ಗಿತು. ಚಂದ್ರು ಗಡಿಬಿಡಿಯಿಂದ ರಾಡನ್ನು ಸರಿಯಾಗಿ ಹಿಡಿದುಕೊಳ್ಳುವ ಮೊದಲೇ ನೈಲಾನ್ ಮಾನೋ ಫಿಲ್ಮೆಂಟ್ ದಾರ ಪರಾರನೆ ತುಂಡಾಗಿ ಅಷ್ಟು ದಾರವೂ ಚಿಮ್ಮಿ ಬಂದು ಚಂದ್ರು ಮೈಮೇಲೆ ಬಿತ್ತು. ದಾರದ ಪೂರ್ಣ ಶಕ್ತಿಗಿಂತ ಹೆಚ್ಚು ಬಲವಾಗಿ ಮೀನು ಎಳೆದಿತ್ತು. ರೀಲಿನಿಂದ ದಾರ ಕೊಡಲು ಡ್ರ್ಯಾಗ್ ತಿರುಗಲೇ ಇಲ್ಲ. ಮೀನು ಸಾಗರದ ವಿಸ್ತಾರದ ಕಡೆಗೆ ಪಲಾಯನ ಮಾಡಿತು.

ನಾವೆಲ್ಲ ಇಂಗು ತಿಂದ ಮಂಗಗಳ ತರ ದಡದಲ್ಲಿ ನಿಂತುಕೊಂಡು ಒಬ್ಬರನ್ನೊಬ್ಬರು ಬಯ್ದಾಡಿದೆವು. ಶಾಂತ, ನಿರ್ಮಲಾ ಇಬ್ಬರೂ ಎಂಥಾ ಮೀನು ಹೋಯ್ತು ಎಂದು ಹೊಟ್ಟೆ ಉರಿದುಕೊಂಡರು.

ಕಾಡಿನಿಂದ ಓಡಿಬಂದ ರಾಮ್‌ದಾಸ್‌ಗೆ ನಮ್ಮ ಮುಖ ನೋಡಿಯೇ ಏನಾಗಿರಬಹುದೆಂಬುದರ ಕಲ್ಪನೆ ಬಂತು. ಚಂದ್ರು ಮತ್ತೆ ಗಾಳಕ್ಕೆ ಮೀನು ಚುಚ್ಚಿ ಗಾಳಬೀಸಿ ಕುಳಿತರು. ನಾವೆಲ್ಲ ಅಲ್ಲೆ ಸಮುದ್ರಕ್ಕೆ ತಾಗಿಕೊಂಡಂತಿದ್ದ

This PDF was created using the Sonic PDF Creator.
To remove this watermark, please license this product at www.investintech.com

ಹಾಸುಗಲ್ಲಿನ ಬಂಡೆಯ ಮೇಲೆ ಕುಳಿತೆವು. ಶಾಂತ ನೀರಿಗೆ ಕಾಲು ತಾಗಿಸಿಕೊಂಡು ಕುಳಿತಿದ್ದರು. ನಾನು ಚಂದ್ರ ಮೀನಿನೊಡನೆ ಸೆಣಸಿದ ವೈಖರಿಯನ್ನೂ, ಅದು ದಾರ ಎಳೆದ ಭರ ನೋಡಿ ಷಾರ್ಕ್ ಎಂದು ತಪ್ಪು ತಿಳಿದು ಕೂಗಿದ್ದನ್ನೂ ರಾಮದಾಸ್‌ಗೆ ವಿವರಿಸುತ್ತಿದ್ದೆ. ರಾಮದಾಸ್ ಜೊತೆ ಮಾತಾಡುತ್ತಾ ಶಾಂತ ಕಡೆಗೊಮ್ಮೆ ನೋಡಿದಾಗ ಅವರ ಕಾಲಿನ ಕಡೆಗೆ ಏನೋ ಕಂದುಬಣ್ಣದ ನೆರಳೊಂದು ಸಮುದ್ರದಲ್ಲಿ ತೇಲಿ ಬರುತ್ತಿರುವಂತೆ ಕಂಡಿತು. ಹಾಗೇ ಅನುಮಾನದಿಂದ ನಿಟ್ಟಿಸತೊಡಗಿದೆ. ಶಾಂತಾಗೆ ಅದರ ಕಡೆ ಗಮನವೇ ಇರಲಿಲ್ಲ. ಅವರ ಕಾಲ ಹತ್ತಿರದಲ್ಲೇ ಅದು ಮೇಲೇಳತೊಡಗಿದಾಗ ಅದಕ್ಕೆ ಉದ್ದುದ್ದ ಸೊಂಡಿಲಿನಂಥ ಬಾಹುಗಳು ಮೂಡ ತೊಡಗಿದವು. ನನಗೆ ತಟಕ್ಕನೆ ಹೊಳೆಯಿತು. ಆಕ್ಟೋಪಸ್! ನೋಡುತ್ತಿದ್ದಂತೆಯೇ ಶಾಂತ ಕಾಲಿನ ಕಡೆಗೆ ತನ್ನ ಕಾಲುಗಳನ್ನು ಚಾಚಿಯೇ ಬಿಟ್ಟಿತು.

ನಾನು "ಆಕ್ಟೋಪಸ್!" ಎಂದು ಕೂಗಿದೆ. ಶಾಂತ ಕಾಲಕಡೆ ನೋಡಿ ಬೆಚ್ಚಿಬಿದ್ದು "ಅಯ್ಯಮ್ಮಾ" ಎಂದು ಕೂಗಿಕೊಂಡು ನಮ್ಮ ಬಳಿಗೆ ಓಡಿಬಂದರು ಆಕ್ಟೋಪಸ್ ಸಹ ಬೆಚ್ಚಿಬಿದ್ದು ಸಮುದ್ರದ ಕಡೆಗೆ ಕಾಲು ಕಿತ್ತಿತು. ನಾನು ಹೇಗಾದರೂ ಅದನ್ನು ಹಿಡಿದು ದಡದ ಮೇಲಕ್ಕೆ ಎಳೆದು ಹಾಕಬೇಕೆಂದಿದ್ದೆ. ಆದರೆ ಪರಾರಿಯಾಯ್ತು. ಅದೇನೂ ಶಾಂತರನ್ನು ಎಳೆದೊಯ್ಯುವಷ್ಟು ದೊಡ್ಡದಿರಲಿಲ್ಲ. ಹೆಚ್ಚೆಂದರೆ ಕಾಲಿಗೆ ಸುತ್ತಿಕೊಂಡು ನೀರೊಳಗೆ ಬೀಳಿಸಬಹುದಿತ್ತು. ಅಂಡಮಾನ್ ಸಿನೆಮಾದಲ್ಲಿ ಸಮುದ್ರ ಸ್ನಾನದ "ಎ" ಸರ್ಟಿಫಿಕೇಟ್ ಸೀನ್ ಒಂದು ಸೇರ್ಪಡೆಯಾಗುತ್ತಿತ್ತಷ್ಟೆ.

ಹಿಂದಿರುಗಿ ನೋಡಿದಾಗ ಶಾಂತ ದೊಡ್ಡ ಗಂಡಾಂತರ ಒಂದರಿಂದ ಪಾರಾದವರಂತೆ ನಿಟ್ಟುಸಿರು ಬಿಡುತ್ತಾ ಭಯಚಕಿತರಾಗಿ ನಿಂತಿದ್ದರು.

This PDF was created using the Sonic PDF Creator.
To remove this watermark, please license this product at www.investintech.com

# 10. ವಂಡೂರಿನ ಹವಳದ ದಂಡೆಗಳು

ಪೋರ್ಟ್‌ಬ್ಲೇರ್‌ಗೆ ಬಂದ ಮೊದಲ ದಿನ ಸಾಯಂಕಾಲ ನಾನು ಮತ್ತು ಚಂದ್ರು ಮೀನು ಹಿಡಿಯಲು ಕಡಲ ದಂಡೆಗಳತ್ತ ಹೋಗುತ್ತಿದ್ದಾಗ ರಸ್ತೆ ಬದಿಯಲ್ಲಿ ಒಂದು ವಿಚಿತ್ರವಾದ ಬಿಳಿಯ ಕಲ್ಲು ಬಿದ್ದಿದ್ದನ್ನು ನೋಡಿದೆವು. ಚಂದ್ರು ಕುತೂಹಲದಿಂದ ಅದನ್ನು ತೆಗೆದುಕೊಂಡರು. ಅದೊಂದು ಸಮುದ್ರದೊಳಗೆ ಬೆಳೆಯುವ ಹವಳದ ಬಂಡೆಗಳ ಚೂರು. ಇದನ್ನು ಇಂಗ್ಲಿಷಿನಲ್ಲಿ ಕೋರಾಲ್ ಎನ್ನುತ್ತಾರೆ. ಇದನ್ನೆ ನಾನು ಕನ್ನಡದಲ್ಲಿ ಹವಳದ ದಂಡೆ ಎಂದು ಕರೆದಿದ್ದೇನೆ. ನಾವೆಲ್ಲ ಆಭರಣಗಳಿಗೆ ಉಪಯೋಗಿಸುವ ಕಿತ್ತಳೆ ಬಣ್ಣದ ಹವಳವೂ ಸಹ ಈ ಕೋರಾಲ್‌ಗಳ ಒಂದು ಬಗೆಯಷ್ಟೆ.

ಸಮುದ್ರದ ಆಳದ ಕಲ್ಲುಬಂಡೆಗಳ ಬುನಾದಿಯ ಮೇಲೆ ಹೆಬ್ಬಂಡೆಗಳೋಪಾದಿಯಲ್ಲಿ ಮೇಲಕ್ಕೆ ಬೆಳೆಯುತ್ತಾ ಹೋಗುವ ವರ್ಣರಹಿತ ಈ ಹವಳಗಳಲ್ಲದೆ ಇನ್ನೂ ಹಲವಾರು ಬಗೆಯ ಅನೇಕ ವರ್ಣಗಳ ಹವಳದ ಬಳ್ಳಿಗಳೂ ಇವೆ. ಮರ, ಗಿಡ, ಬಳ್ಳಿ, ಮೆದುಳು, ಬೀಸಣಿಗೆ, ಎಲೆ, ಫರ್ನ ಮುಂತಾದ ಆಕಾರಗಳಲ್ಲಿ ಬೆಳೆಯುವ ಕೋರಾಲ್‌ಗಳೆಲ್ಲಾ ಬೇರೆ ಬೇರೆ ಜಾತಿಯವು. ಆದರೆ ಅವಕ್ಕೆಲ್ಲಾ ಮೂಲಾಧಾರ ಈ ಬಂಡೆಗಳೋಪಾದಿಯಲ್ಲಿ ಬೆಳೆಯುವ ಸುಣ್ಣದ ಕಲ್ಲಿನಂತೆ ಕಾಣುವ ಜೇನು ಹಲ್ಲೆಯ ರೂಪದ ಹವಳ. ಅಂಡಮಾನಿನಲ್ಲಿ ನಮಗೆ ಮೊದಲು ದೊರೆತ ಕೋರಾಲ್ ಅದಾದುದರಿಂದ ನಾನು ಚಂದ್ರು ತುಂಬಾ ಹೊತ್ತು ಕುತೂಹಲದಿಂದ ಅದನ್ನು ವೀಕ್ಷಿಸಿದೆವು.

This PDF was created using the Sonic PDF Creator.
To remove this watermark, please license this product at www.investintech.com

ಇಂಥ ಅಮೂಲ್ಯ ವಸ್ತುವನ್ನು ರಸ್ತೆ ಬದಿ ಏಕೆ ಎಸೆದು ಹೋಗಿದ್ದಾರೆಂದು ಆಶ್ಚರ್ಯಪಟ್ಟು ಚಂದ್ರು ಅದನ್ನು ಚೀಲಕ್ಕೆ ಹಾಕಿಕೊಂಡರು. ಆದರೆ ನಾವು ಕೊಂಚ ದೂರ ಹೋಗುವುದರೊಳಗೇ ಕಾರ್ಬೆನ್ಸ್ ಕೋವ್ ಎಂಬಲ್ಲಿ ಸಮುದ್ರದ ದಂಡೆ ಇದಿರಾಯಿತು. ನಾವು ಯಾವ ಕಲ್ಲನ್ನು ತೆಗೆದು ಅಮೂಲ್ಯವೆಂದು ತೆಗೆದು ಇಟ್ಟುಕೊಂಡಿದ್ದವೋ ಅಂಥವು ಆ ದಂಡೆಯಲ್ಲಿ ಲೆಕ್ಕವಿಲ್ಲದಷ್ಟು ಬೆಟ್ಟದಂತೆ ಬಿದ್ದಿತ್ತು. ದೊಡ್ಡವು, ಚಿಕ್ಕವು, ಗುಂಡಾಗಿದ್ದವು, ಚಪ್ಪಡಿಗಳು, ಹೀಗೆ ನಾನಾ ಆಕಾರದವು. ಸಮುದ್ರದ ಅಲೆಗಳ ಹೊಡೆತಕ್ಕೆ ತಳದಿಂದ ಕಳಚಿ ತೂರಿಬಂದು ಅಲ್ಲಿ ಬಿದ್ದಿದ್ದವು. ತುಂಬ ಹೊತ್ತು ನಾವು ಅವುಗಳನ್ನು ನೋಡಿದೆವು. ರಸ್ತೆಗೆಲ್ಲಾ ಜಲ್ಲಿಯ ಕಲ್ಲುಗಳಂತೆ ಅವನ್ನೇ ಹಾಕಿದ್ದರು. ಈ ಹವಳದ ಕಲ್ಲಿನ ಬೆಟ್ಟವನ್ನೇ ನೋಡಿದ ಮೇಲೆ ನಮಗೆ ನಮ್ಮ ಚೀಲದೊಳಗಿದ್ದ ಕಲ್ಲು ಅಮೂಲ್ಯವೆಂದೆನ್ನಿಸದೆ ಅದನ್ನೂ ಆ ರಾಸಿಗೆ ಎಸೆದವು.

ಅಂಡಮಾನಿನ ಸಮುದ್ರದ ದಂಡೆಗಳು ಕೋರಾಲ್ ಅಥವಾ ಹವಳದ ದಂಡೆಗಳಿಂದ ಕೂಡಿವೆ. ಈ ಹವಳದ ದಂಡೆಗಳು ಒಂದು ಬಗೆಯ ಸೂಕ್ಷ್ಮ ಜೀವಿಗಳಿಂದ ರೂಪಿಸಲ್ಪಡುತ್ತವೆ. ಸಮುದ್ರದ ನೀರನ್ನು ವಿಭಜಿಸಿ ಅದರಿಂದ ದೊರೆಯುವ ಕ್ಯಾಲ್ಸಿಯಂ ಅಥವಾ ಸುಣ್ಣವನ್ನು ಉಪಯೋಗಿಸಿಕೊಂಡು ಈ ಜೀವಿಗಳು ಹವಳದ ಚಿಕ್ಕ ಚಿಕ್ಕ ಕೋಶಗಳನ್ನು ಒಂದರ ಪಕ್ಕ ಒಂದರಂತೆ ಕಟ್ಟುತ್ತಾ ಹೋಗುತ್ತವೆ. ಇವು ಹವಳದ ಕಲ್ಲುಗಳನ್ನು ರೂಪಿಸುವುದು ಎಷ್ಟೇ ನಿಧಾನವಾದ ಕ್ರಿಯೆಯಾದರೂ ಮಿಲಿಯಗಟ್ಟಲೆ ವರ್ಷಗಳಿಂದ ನಿಧಾನವಾಗಿ ಮತ್ತು ನಿರಂತರವಾಗಿ ಹವಳದ ಕಲ್ಲುಗಳನ್ನು ರಚಿಸುತ್ತಲೇ ಬರುವುದರಿಂದ ಕಾಲಾಂತರದಲ್ಲಿ ಈ ಹವಳದ ದಂಡೆಗಳು ಮೈಲುಗಟ್ಟಲೆ ಇರುವ ಭೂಖಂಡಗಳೇ ಆಗುತ್ತವೆ.

ಈ ಸೂಕ್ಷ್ಮ ಜೀವಿಗಳು ಸಮುದ್ರದಲ್ಲಿ 100 ಅಡಿಗಳಿಗಿಂತ ಆಳದಲ್ಲಿ ಸಮುದ್ರದ ತಳ ಇದ್ದರೆ ಅಲ್ಲಿ ಬದುಕಲಾರವು. ಎಂದರೆ ಇವುಗಳ ಸೃಷ್ಟಿ ಕ್ರಿಯೆಗೆ ಸೂರ್ಯನ ಬೆಳಕಿನ ಆಗತ್ಯ ಇದ್ದೇ ಇದೆ. ಆದರೆ ಇವು ಸಮುದ್ರ ಮಟ್ಟಕ್ಕಿಂತ ಮೇಲೂ ಬರಲಾರವು. ಇವು ಸದಾ ಸಮುದ್ರದ ನೀರಿನಿಂದ ತೊಯ್ದಿದ್ದರೆ ಮಾತ್ರ ಜೀವಂತವಾಗಿರುತ್ತವೆ. ಸಮುದ್ರದ ಅಲೆಗಳ ನಿರಂತರ ದಾಳಿಗೆ ಪ್ರತಿರೋಧವನ್ನೊಡ್ಡುತ್ತಾ ತಮ್ಮ ಗೂಡುಗಳನ್ನು ರಚಿಸುವ ಈ ಸೂಕ್ಷ್ಮ ಜೀವಿಗಳ ಶಕ್ತಿಯ ಬಗ್ಗೆ ಆಶ್ಚರ್ಯವಾಗುತ್ತದೆ. ಎಷ್ಟೋಸಾರಿ ಸಮುದ್ರದ ದೈತ್ಯ ಅಲೆಗಳು

This PDF was created using the Sonic PDF Creator.
To remove this watermark, please license this product at www.investintech.com

ಬಂದಪ್ಪಳಿಸಿದಾಗ ಈ ಹವಳದ ದಂಡೆಗಳು ಮುರಿದು ಚೂರುಚೂರಾಗಿ ಕಳಚಿ ಬೀಳುತ್ತವೆ. ಅನಂತರ ಸಮುದ್ರದ ಅಲೆಗಳ ತುಯ್ದಾಟದಲ್ಲಿ ದಡದತ್ತ ತಳ್ಳಲ್ಪಡುತ್ತವೆ. ಆದರೂ ಈ ಜೀವಿಗಳ ನಿರಂತರ ದುಡಿಮೆಯೇ ಇವುಗಳನ್ನು ಅಜೇಯವನ್ನಾಗಿ ಮಾಡಿವೆ. ಪೆಸಿಫಿಕ್ ಮಹಾಸಾಗರದ ಅತ್ಯಂತ ಉಗ್ರವಾದ ಅಲೆಗಳ ದಾಳಿಯನ್ನೂ ಪ್ರತಿರೋಧಿಸಿ ರೂಪುಗೊಂಡಿರುವ ಅಟಾಲ್‌ಗಳೂ, ಬ್ಯಾರಿಯರ್ ರೀಫ್‌ಗಳೂ ಇದಕ್ಕೆ ಸಾಕ್ಷಿ.

ಅಂಡಮಾನ್ ಸಮುದ್ರದ ಸ್ಫಟಿಕ ಶುಭ್ರತೆಗೆ ಮತ್ತು ಅದರ ತಿಳಿಹಸುರು ಬಣ್ಣಕ್ಕೆ ಈ ಹವಳದ ತಳವೇ ಕಾರಣ. ಅಂಡಮಾನಿಗೆ ಹೊರಡುವಾಗ ನಮ್ಮ ಅನೇಕ ಮಿತ್ರರು ನನಗೆ ಅಂಡಮಾನಿನಲ್ಲಿ ದೊರೆಯುವ ಸಮುದ್ರದ ಮನೋಹರ ಕೋರಾಲ್‌ಗಳನ್ನು ತಂದುಕೊಡಬೇಕೆಂದು ಕೇಳಿಕೊಂಡಿದ್ದರು. ಆದರೆ ನಾವು ಅಂಡಮಾನಿಗೆ ಹೋಗುವ ವೇಳೆಗೆ ಅಲ್ಲಿ ಸಮುದ್ರದಿಂದ ಕೋರಾಲ್‌ಗಳನ್ನು ತೆಗೆದು ಮಾರಾಟ ಮಾಡುವುದನ್ನು ನಿಷೇಧಿಸಿದ್ದರು. ಅಂಗಡಿಗಳಲ್ಲಿ ಕೋರಾಲ್‌ಗಳಿವೆಯೆ ಎಂದು ಕೇಳಿದರೆ ಕದ್ದುಮುಚ್ಚಿ ಒಳಗೆಲ್ಲೊ ಕರೆದೊಯ್ದು ತೋರಿಸುತ್ತಿದ್ದರು. ಅಷ್ಟಲ್ಲದೆ ವಂಡೂರು, ರೆಡ್‌ಸ್ಕಿನ್, ಜಾಲಿಬಾಯ್ ಇತ್ಯಾದಿಗಳನ್ನೊಳಗೊಂಡ ದ್ವೀಪ ಸಮುದಾಯವನ್ನು ರಾಷ್ಟ್ರೀಯ ಉದ್ಯಾನವೆಂದು ಘೋಷಿಸಲಾಗಿತ್ತು. ಇಲ್ಲಿ ಮೀನುಗಾರಿಕೆ, ಕೋರಾಲ್‌ಗಳನ್ನು ಕೀಳುವುದು ಎಲ್ಲವನ್ನೂ ನಿಷೇಧಿಸಲಾಗಿತ್ತು. ಬಹುಶಃ ಭಾರತದಲ್ಲಿನ ಸಮುದ್ರ ತಳದ ಸಂರಕ್ಷಿತ ರಾಷ್ಟ್ರೀಯ ಉದ್ಯಾನ ಇದೇ ಮೊದಲನೆಯದು ಮತ್ತು ಇದೊಂದೇ ಎಂದು ತೋರುತ್ತದೆ. ಇಲ್ಲಿ ಯದ್ವಾತದ್ವಾ ಕೋರಾಲ್‌ಗಳನ್ನು ಕೀಳುವುದೂ ಹವಳದ ದಂಡೆಗಳನ್ನು ಒಡೆಯಲು ಡೈನಮೈಟುಗಳನ್ನು ಬಳಸುವುದು ಮೊದಲು ಆಚರಣೆಯಲ್ಲಿತ್ತು. ರಾಷ್ಟ್ರೀಯ ಉದ್ಯಾನವೆಂದು ಘೋಷಿಸಿದ ನಂತರ ಇದೆಲ್ಲಾ ನಿಂತಿರಬಹುದು.

ನಾವು ವಂಡೂರಿಗೆ ಹೋದಾಗ ಅಲ್ಲಿ ಕೆಲವರು ವಿದೇಶೀ ಪ್ರವಾಸಿಗರೂ ಬಂದಿದ್ದರು. ಭಾರತದ ಉಷ್ಣವಲಯದ ಬಿಸಿಲನ್ನು ಆಸ್ವಾದಿಸಲು ಅರೆಮೈ ಬಿಟ್ಟುಕೊಂಡು ತಿರುಗುತ್ತಿದ್ದ ಅವರು ಕೊಂಚಹೊತ್ತು ನಮ್ಮ ಗುಂಪಿನ ಗಮನಕ್ಕೆ ಒಳಗಾದರು. ಅವರ ಗುಲಾಬಿ ಬಣ್ಣದ ಚರ್ಮವನ್ನು ರಾಜೇಶ್ವರಿ ಹೊಗಳಿದ್ದರಿಂದ ರಾಮದಾಸ್‌ಗೂ ಆವಳಿಗೂ ವಾಗ್ವಾದ ಆರಂಭವಾಯ್ತು. ಭಾರತೀಯರ ಚರ್ಮದ ಬಣ್ಣದ ಮೇಲಿನ ವ್ಯಾಮೋಹವನ್ನು ರಾಮದಾಸ್ ಟೀಕಿಸಿ ರಾಮಮನೋಹರ

This PDF was created using the Sonic PDF Creator.
To remove this watermark, please license this product at www.investintech.com

ಲೋಹಿಯಾರವರ ಈ ಬಗ್ಗೆಯ ಹೇಳಿಕೆಗಳನ್ನೆಲ್ಲಾ ಉದ್ಧರಿಸಿದರು. ಅಷ್ಟರಲ್ಲಿ ಮಲ್ಲಿಕ್ ಒಬ್ಬ ನಾಡುದೋಣಿಯವನನ್ನು ಕಂಡು ಮಾತಾಡಿದ್ದರು. ಅದೊಂದು ಚಿಕ್ಕ ತೋಡು ದೋಣಿ. ಅದಕ್ಕೆ ಡೀಸೆಲ್ ಎಂಜಿನ್ ಜೋಡಿಸಿದ್ದರು. ನಮ್ಮನ್ನು ದೂರದ ದ್ವೀಪಗಳಿಗೆ ಒಯ್ಯಲು ಆತ ಒಪ್ಪಿಕೊಂಡ. ವಿಶಾಲ ಸಮುದ್ರಯಾನಕ್ಕೆ ಆ ದೋಣಿ ಅನರ್ಹವಾಗಿದ್ದರೂ ಚಿಕ್ಕಪುಟ್ಟ ದ್ವೀಪಗಳಿಗೆ ಹೋಗಿಬರಲು ಅಡ್ಡಿ ಇರಲಿಲ್ಲ. ಸಮುದ್ರದ ಅಲೆಗಳು ಜೋರಾಗಿ ಬಂದಾಗ ಮಾತ್ರ ಅದು ಕೊಂಚ ಅತ್ತಿತ್ತ ಹೊಳ್ಳುತ್ತಿತ್ತು ಮತ್ತು ಅಲೆಗಳ ನೀರು ಮುಖಕ್ಕೆ ಬಡಿಯುತ್ತಿತ್ತು.

ನಾವು ವಂಡೂರು ಅರಣ್ಯ ಮುಖ್ಯಾಧಿಕಾರಿಯ ಬಳಿ ಮೀನನ್ನು ಗಾಳಹಾಕಿ ಹಿಡಿಯಲು ಪರವಾನಗಿ ಕೇಳಿದೆವು. ನಾವು ಹಿಡಿದ ಮೀನನ್ನು ತಿರುಗಿ ಸಮುದ್ರಕ್ಕೆ ಬಿಡುತ್ತೇವೆ, ನಮ್ಮ ಉದ್ದೇಶ ಅವುಗಳನ್ನು ಕೇವಲ ಅಭ್ಯಾಸ ಮಾಡುವುದಷ್ಟೇ ಎಂದು ತಿಳಿಸಿದೆವು. ಆತ ಒಪ್ಪಿಕೊಂಡು ಪರವಾನಗಿ ನೀಡಿದ.

ರೆಡ್‌ಸ್ಕಿನ್ ದ್ವೀಪಕ್ಕೆ ಹೋಗುತ್ತ ದಾರಿಯಲ್ಲಿ ಕೊಂಚವೇ ದೂರ ಹೊರ ಸಮುದ್ರದಲ್ಲಿ ಹೋಗಬೇಕು. ಅಲ್ಲಿನ ಅಲೆಗಳ ಜೋರಿಗೆ ಉಯ್ಯಾಲೆಯಂತೆ ತೂಗುತ್ತ ನಮ್ಮ ಪುಟ್ಟ ತೋಡುದೋಣಿ ಹೋಗಿದ್ದು ಒಂದು ಮರೆಯಲಾರದ ನೆನಪು. ಈ ದ್ವೀಪಗಳ ನಡುವೆ ದೋಣಿಯಲ್ಲಿ ಪ್ರಯಾಣ ಮಾಡುವಾಗ ತುಂಬಾ ಜಾಗ್ರತೆ ವಹಿಸಬೇಕು. ಅನುಭವಸ್ಥ ನಾವಿಕರಿಲ್ಲದ ಪಕ್ಷದಲ್ಲಿ ಅಪಘಾತ ಖಂಡಿತ. ಅನೇಕ ಕಡೆ ಹವಳದ ದಂಡೆಗಳು ಸಮುದ್ರದ ಒಳಗೇ ಬೆಳೆದು ಸಮುದ್ರದ ಮಟ್ಟಕ್ಕೆ ಬಂದಿರುತ್ತದೆ. ಕೈಬೀಸಿ ಕರೆಯುವ ಸುಂದರ ದ್ವೀಪಗಳತ್ತ ಎಲ್ಲೆಂದರಲ್ಲಿ ದೋಣಿ ನಡೆಸಿದರೆ ಈ ಹವಳದ ಬಂಡೆಗಳಿಗೆ ದೋಣಿ ಢಿಕ್ಕಿ ಹೊಡೆಯುವುದು ಖಚಿತ. ಅದಕ್ಕಾಗಿ ಉದ್ದಕ್ಕೂ ಹವಳದ ದಂಡೆಗಳಿರುವೆಡೆಯೆಲ್ಲೆಲ್ಲಾ ಅರಣ್ಯ ಇಲಾಖೆಯವರು ಸಮುದ್ರದ ಒಳಗೇ ಬೋರ್ಡುಗಳನ್ನು ಹುಗಿದು ಇತ್ತ ಬರಬಾರದೆಂದು ನಿರ್ದೇಶಿಸಿದ್ದಾರೆ.

ವಂಡೂರು ರಾಷ್ಟ್ರೀಯ ಉದ್ಯಾನ ಅನೇಕ ಚಿಕ್ಕದ್ವೀಪಗಳ ಸಮುದಾಯ. ಈ ದ್ವೀಪಗಳು ಬೇರೆ ಬೇರೆ ದ್ವೀಪಗಳಂತೆ ಕಂಡರೂ ಅವು ಸಮುದ್ರದ ಮಟ್ಟದಲ್ಲೇ ಇರುವ ಹವಳದ ದಂಡೆಯ ಸಾಲುಗಳಿಂದ ಸಂಬಂಧಿಸಿ ಕೈಕೈ ಹಿಡಿದುಕೊಂಡಂತೆ ನಿಂತಿರುವ ದ್ವೀಪಗಳು. ಕೆಲವು ನೂರಾರು ಎಕರೆ ದೊಡ್ಡ ದ್ವೀಪಗಳಾದರೆ ಕೆಲವು ಕೆಲವೇ ಎಕರೆಗಳಷ್ಟು ಚಿಕ್ಕವು. ಬಹುಶಃ ಲಕ್ಷಾಂತರ ವರ್ಷಗಳ ಹಿಂದೆ ಭೂಮ್ಯಂತರ್ಗತ ಒತ್ತಡಗಳಿಂದ ಮೇಲೆದ್ದ ದೊಡ್ಡ ದ್ವೀಪ

This PDF was created using the Sonic PDF Creator.
To remove this watermark, please license this product at www.investintech.com

ನಿಧಾನವಾಗಿ ಸಾಗರದೊಳಗಡೆ ಮುಳುಗಿಯೋ ಅಥವಾ ಉಷ್ಣಯುಗದಲ್ಲಿ ಧ್ರುವ ಪ್ರದೇಶಗಳ ಮಂಜು ಕರಗಿ ಸಮುದ್ರ ಮಟ್ಟವೇ ಏರಿದ್ದರಿಂದಲೋ ದೊಡ್ಡ ಭೂಖಂಡದ ತಗ್ಗು ಪ್ರದೇಶಗಳೆಲ್ಲ ನೀರೊಳಗೆ ಮುಳುಗಿ ಎತ್ತರ ಪ್ರದೇಶಗಳೆಲ್ಲಾ ಚಿಕ್ಕ ಚಿಕ್ಕ ದ್ವೀಪಗಳಾಗಿರುವಂತೆ ತೋರುತ್ತದೆ.

ಈಗಲೂ ಸಮುದ್ರದ ನೀರು ಏಳೆಂಟು ಅಡಿ ಇಳಿದರೆ ಸಹಸ್ರಾರು ಎಕರೆ ಭೂಭಾಗ ಸಮುದ್ರದ ಮೇಲೆ ಬರುತ್ತದೆ. ಇಲ್ಲಿ ಇಷ್ಟು ಕಡಿಮೆ ಆಳದಲ್ಲಿ ಸಮುದ್ರದ ಕಲ್ಲಿನ ತಳ ಇರುವುದರಿಂದ ಮತ್ತು ವಿಶಾಲ ಸಮುದ್ರದ ಅಲೆಗಳ ಹೊಡೆತ ಇಲ್ಲದುದರಿಂದ ಇಲ್ಲಿ ಹವಳದ ದಂಡೆಗಳು ರೂಪುಗೊಳ್ಳಲು ಪ್ರಶಸ್ತ ಜಾಗವಾಗಿದೆ.

ವಂಡೂರ್ ಫಾರೆಸ್ಟ್ ಆಫೀಸಿನಲ್ಲಿ ನೀರೊಳಗೆ ಮುಳುಗಿ ಸಾಗರ ತಳವನ್ನು ಅಭ್ಯಾಸ ಮಾಡುವವರಿಗೆ ಅಗತ್ಯವಾದ ಮುಖವಾಡ ಇತ್ಯಾದಿಗಳನ್ನು ಇಟ್ಟಿದ್ದರು. ನಮಗೆ ಯಾರಿಗೂ ನೀರಲ್ಲಿ ಮುಳುಗುವ ಪೂರ್ವಾಭ್ಯಾಸ ಇಲ್ಲದುದ ರಿಂದ ನಾವು ಅದನ್ನು ಕೇಳಲಿಲ್ಲ.

ಅಂಡಮಾನಿನಲ್ಲಿ ಕೋರಾಲ್‌ಗಳನ್ನು ನೋಡಲು ನೀರಿನಲ್ಲಿ ಮುಳುಗ ಬೇಕೆಂದೇನೂ ಇಲ್ಲ. ಯಾವುದೇ ಸಮುದ್ರ ದಂಡೆಯಲ್ಲೂ ಸಮುದ್ರ ಇಳಿದಾಗ ಹೋದರೆ ಸಮುದ್ರಕ್ಕೆ ತಾಗಿಕೊಂಡ ಬಂಡೆಗಳ ಮೇಲೆ ನೂರಾರು ಬಣ್ಣ ಬಣ್ಣದ ಕೋರಾಲ್‌ಗಳು ಬೆಳೆದಿರುವುದನ್ನು ನೋಡಬಹುದು. ವಂಡೂರ್‌ನಲ್ಲಿ ಗಾಜಿನ ತಳದ ದೋಣಿಯೊಂದನ್ನು ಇವನ್ನು ವೀಕ್ಷಿಸಲೆಂದೇ ಇಟ್ಟಿದ್ದಾರೆ. ಹವಳದ ದಂಡೆಗಳ ಮೇಲೆ ಇದನ್ನು ಬಿಟ್ಟುಕೊಂಡು ಹೋದರೆ ಒಳಗೆ ಕುಳಿತಿರುವವರು ತಳದ ಗಾಜಿನ ಮುಖಾಂತರ ಕೋರಾಲ್‌ಗಳ ವರ್ಣ ವೈಭವವನ್ನು ನೋಡಬಹುದು.

ಕೋರಾಲ್‌ಗಳು ಜೇನು ಹಟ್ಟಿಗಳಂಥ ದೊಡ್ಡ ದೊಡ್ಡ ಬಂಡೆಗಳಾಗಿ ಬೆಳೆಯುವುದಲ್ಲದೆ ಮರ, ಪೊದೆ, ಬೀಸಣಿಗೆಗಳಂತೆ ನಾನಾ ರೂಪಗಳಲ್ಲಿ ಬೆಳೆದಿರುತ್ತದೆಂದು ಮೊದಲೇ ತಿಳಿಸಿದೆನಲ್ಲ. ಇವು ಆಕಾರದಲ್ಲಿ ಗಿಡಮರ ಗಳಂತಿರುತ್ತವೆಯೇ ವಿನಾ ಅವುಗಳಂತೆ ಬಗ್ಗುವುದಾಗಲೀ ಬಳುಕುವುದಾಗಲೀ ಇಲ್ಲ. ಬಗ್ಗಿಸಿದರೆ ಕಲ್ಲಿನಂತೆ ಛಿದ್ರವಾಗುವುವೇ ಹೊರತು ಬಾಗುವುದಿಲ್ಲ. ಇವನ್ನು ನೋಡಲು ಸಮುದ್ರದ ದಂಡೆಯಲ್ಲಿ ನಡೆದಾಡುವವರು ಅತ್ಯಂತ ಜಾಗರೂಕರಾಗಿರಬೇಕು. ಗಾಜಿನಷ್ಟು ಹರಿತವಾದ ಮತ್ತು ಅಷ್ಟೇ ಕಠೋರವಾದ ಇವುಗಳು ಪಾದವನ್ನು ಮೂಳೆಯವರೆಗೂ ಹಿಸಿದು ಹಾಕುತ್ತವೆ.

This PDF was created using the Sonic PDF Creator.
To remove this watermark, please license this product at www.investintech.com

ಸ್ಪೈನಿ ಕೋರಾಲ್‌ಗಳೆಂಬ ಹವಳಗಳಂತೂ ಮುಳ್ಳಿನ ಉಂಡೆಗಳಂತೆಯೇ ಇರುತ್ತವೆ. ಈ ಉಂಡೆಗಳ ಮೇಲೆ ಕಾಲಿಟ್ಟರೆ ಅಷ್ಟಗಲ ಮಾಂಸ ಕಿತ್ತು ಬರದೆ ನಾವು ಕಾಲನ್ನು ಮೇಲೆತ್ತಲಾಗುವುದೇ ಇಲ್ಲ. ಇಂಥದೊಂದರ ಮೇಲೆ ಕಾಲಿಟ್ಟು ನನ್ನ ಕಾನ್ಪುರ ಚಪ್ಪಲಿಯ ಅಟ್ಟೆಯೇ ಕಿತ್ತುಬಂತು. ಹಲವು ತುರುಚೆ ಹವಳಗಳೆಂದಿವೆ. ಈ ಹವಳದ ತುದಿಗಳು ವಿಷಯುಕ್ತವಾಗಿದ್ದು ಇವು ನಮ್ಮ ಚರ್ಮಕ್ಕೆ ತಾಗಿದರೆ ಭಯಂಕರ ಉರಿ ಮತ್ತು ನವೆ ಆರಂಭವಾಗುತ್ತದೆ.

ನಾನು ಚಂದ್ರು ಪೋರ್ಟ್‌ಬ್ಲೇರ್ ಬಳಿ ಸಮುದ್ರದ ಉಬ್ಬರ ಇಳಿದಾಗ ಅಲ್ಲಿ ಕಡಲ ದಂಡೆಯಲ್ಲಿದ್ದ ಹಲವು ಬಣ್ಣದ ಹವಳಗಳನ್ನು ಕೀಳಲು ಸಾಕಷ್ಟು ಪ್ರಯತ್ನ ಪಟ್ಟೆವು. ಚಿಕ್ಕ ಚಿಕ್ಕ ಗಿಡಗಳಂತಿದ್ದ ಇವುಗಳು ಬಂಡೆಗಳಿಗೆ ಎಷ್ಟೊಂದು ಬಲವಾಗಿ ಹತ್ತಿಕೊಂಡಿದ್ದವೆಂದರೆ ಅವು ಆ ಬಂಡೆಗಳ ಅವಿಭಾಜ್ಯ ಅಂಗಗಳಾಗಿ ಹೋಗಿದ್ದವು. ಉಳಿ ಸುತ್ತಿಗೆಗಳ ಸಹಾಯವಿಲ್ಲದೆ ಇವನ್ನು ತೆಗೆಯುವುದು ಸಾಧ್ಯವೇ ಇಲ್ಲ. ಹಾಗೂ ನಾನು ಚಂದ್ರು ಕಲ್ಲುಗಳನ್ನೇ ತೆಗೆದುಕೊಂಡು ಉಳಿ ಸುತ್ತಿಗೆಗಳಂತೆ ಬಳಸಿ ಯಮ ಸಾಹಸಪಟ್ಟು ಚಚ್ಚೀಚಚ್ಚೀ ಎರಡು ಕೆಂಪು ಮತ್ತು ಹಸುರು ಕೋರಾಲ್‌ಗಳನ್ನು ತೆಗೆದೆವು.

ಆದರೆ ಇವನ್ನು ನಮ್ಮ ರೂಮಿಗೆ ಒಯ್ದು ಇಟ್ಟ ಎರಡೇ ದಿನಗಳಲ್ಲಿ ಇವುಗಳ ಮನೋಹರ ವರ್ಣಗಳೆಲ್ಲಾ ನಶಿಸಿ ಕರ್ರಗಾದವು. ಜೊತೆಗೆ ಇವುಗಳೊಳಗಿನ ಸೂಕ್ಷ್ಮಜೀವಿಗಳು ಸತ್ತು ಕೊಳೆಯಲಾರಂಭಿಸಿದ್ದರಿಂದ ಈ ಕೋರಾಲ್‌ಗಳಿಂದ ಗಬ್ಬುನಾತ ಹೊಮ್ಮತೊಡಗಿತು. ಇವುಗಳನ್ನು ಮಂಚದಡಿ ಇಟ್ಟುಕೊಂಡು ಮಲಗುತ್ತಿದ್ದುದರಿಂದಲೋ ಏನೋ ಚಂದ್ರುಗೆ ಒಂದು ದಿನವೂ ಬೆಳಿಗ್ಗೆ ಮೊದಲು ಏಳಲಾಗದಿದ್ದುದು!

ಇವುಗಳನ್ನು ಮಾರುಕಟ್ಟೆಯಲ್ಲಿ ಮಾರುವವರು ಹೈಡ್ರೋಕ್ಲೋರಿಕ್ ಆಮ್ಲದಲ್ಲಿ ಮುಳುಗಿಸಿಟ್ಟು ಬ್ಲೀಚ್ ಮಾಡಿ ಇವುಗಳ ಬಣ್ಣ ಮತ್ತು ವಾಸನೆಗಳನ್ನು ತೆಗೆದು ಮಾರುತ್ತಾರೆ. ಚಂದ್ರುಗೆ ಎಲ್ಲರೂ ಈ ದುರ್ವಾಸನೆಯ ಕೋರಾಲ್‌ಗಳನ್ನು ಎಸೆಯಿರಿ ಎಂದರೆ ಅವರು ಪ್ರತಿಭಟಿಸಿ ತಾವು ಊರಿಗೆ ಹೋದ ಮೇಲೆ ಬ್ಲೀಚ್ ಮಾಡುತ್ತೇನೆಂದು ಹೇಳಿದರು. ಜಾಲಿಬಾಯ್ಸ್ ದ್ವೀಪದ ದಂಡೆಗಳಲ್ಲಿ ಸಮುದ್ರದ ಸಹಜಕ್ರಿಯೆಯಿಂದಲೇ ಬ್ಲೀಚ್ ಆದ ಬೆಳ್ಳಗಿನ ಹವಳದ ಬಳ್ಳಿಗಳು ಅಲೆಗಳ ಹೊಡೆತಕ್ಕೆ ತೇಲಿಬಂದು ದಂಡೆಯಲ್ಲಿ ಬಿದ್ದಿರುವುದನ್ನು ನೋಡಬಹುದಿತ್ತು.

This PDF was created using the Sonic PDF Creator.
To remove this watermark, please license this product at www.investintech.com

ವಂಡೂರ್ ಸಮುದಾಯದ ಪ್ರತಿಯೊಂದು ದ್ವೀಪವೂ ತೀರದಿಂದ ತೀರದ ವರೆಗೆ ಕಿಕ್ಕಿರಿದ ದಟ್ಟಕಾಡಿನಿಂದ ತುಂಬಿತ್ತು. ಈ ದ್ವೀಪಗಳಲ್ಲಿ ಕುಡಿಯುವ ನೀರಿನ ಅಭಾವವಿರುವುದರಿಂದಲೇ ಜನಗಳು ಮೊದಲು ಇಲ್ಲಿ ಬಿಡಾರ ಹೂಡಲು ಬಂದಿರಲಿಲ್ಲ. ಹಾಗಾಗಿ ಉಷ್ಣವಲಯದ ಕಾಡುಗಳ ನಿಜಸ್ವರೂಪವನ್ನು ಇಲ್ಲಿ ನೋಡಬಹುದಿತ್ತು. ಆದರೆ ನಮಗೆ ಯಾವುದಕ್ಕೂ ಸಮಯವೇ ಇರಲಿಲ್ಲ. ಮತ್ತೆ ಸಂಜೆ ನಾಲ್ಕು ಗಂಟೆಗೆ ಪೋರ್ಟ್‌ಬ್ಲೇರಿಗೆ ಹೋಗುವ ಬಸ್ಸು ಹಿಡಿಯ ಬೇಕಿತ್ತು. ಅಂಡಮಾನಿನಲ್ಲಿ ಗಡಿಯಾರವೇ ನಮ್ಮ ಬದ್ಧ ವೈರಿಯಾಗಿತ್ತು. ಈ ದ್ವೀಪಗಳನ್ನು ಸರಿಯಾಗಿ ಅಭ್ಯಾಸ ಮಾಡಲು ನನಗೆ ಐದು ವರ್ಷವಾದರೂ ಬೇಕಿತ್ತು. ಆ ನಿರ್ಜನ ದ್ವೀಪಗಳ ದಟ್ಟ ಕಾಡುಗಳೊಳಗೆ ಯಾವ ರೀತಿಯ ಪ್ರಾಣಿಗಳಾಗಲಿ ಪಕ್ಷಿಗಳಾಗಲಿ ಇವೆ? ಇರುವ ಸಸ್ಯವರ್ಗ ಎಂಥದು? ಇವುಗಳ ಪರಸ್ಪರ ಜೀವಜಾಲದ ಸಂಬಂಧಗಳೆಂಥತು? ಈ ಎಲ್ಲ ಪ್ರಶ್ನೆಗಳೂ ಉತ್ತರವಿಲ್ಲದೆ ನನ್ನಲ್ಲಿಯೇ ಉಳಿಯಿತು.

ಡುಂಮ್ಮುಕ್ಕಡುಂ ಡುಂಡುಂ ಡುಮ್ಮುಕ್ಕಡುಂ ಎಂದು ಒಂದೇ ಲಯದಲ್ಲಿ ಎಲ್ಲೋ ಚಂಡೆ ಬಾರಿಸುವ ಸದ್ದು! ರೆಡ್‌ಸ್ಕಿನ್ ದ್ವೀಪದ ಮರಳದಂಡೆ ಯೊಂದರಿಂದ ಗಾಳ ಎಸೆದು ಕುಳಿತಾಗ ದೂರದಿಂದ ನನಗೆ ಕೇಳುತ್ತಲೇ ಇತ್ತು ಈ ಸದ್ದು. ರಾಜೇಶ್ವರಿ ಉಷಾ ರಾಮದಾಸ್ ಎಲ್ಲರೂ ರೆಡ್‌ಸ್ಕಿನ್ ದ್ವೀಪದ ದಟ್ಟಡವಿಗಳೊಳಗೆ ಕಾಡನ್ನು ನೋಡಲು ಹೋಗಿದ್ದರು. ಪ್ರಶಾಂತ್ ಮತ್ತು ಮಲ್ಲಿಕ್ ಚಿಟ್ಟೆ ಹಿಡಿಯುವ ಬಲೆ ತಗೊಂಡು ಕೀಟ ಸಂಗ್ರಹಣೆಗೆ ತೊಡಗಿದ್ದರು. ನಾನು ಗಾಳ ಸುತ್ತಿಕೊಂಡು ಈ ಚಂಡೆಯ ಸದ್ದಿನ ಮೂಲ ಯಾವುದು ಹುಡುಕ ಹೊರಟೆ. ಸ್ವಲ್ಪ ದೂರದಲ್ಲೇ ಸಮುದ್ರ ದಂಡೆಯಿಂದ ಈ ಸದ್ದು ಬರುತ್ತಿದ್ದುದು ಅರಿವಿಗೆ ಬಂತು. ಸಮುದ್ರದ ದಂಡೆಯಲ್ಲಿ ನೀರಿಗೆ ಅಂಟಿಕೊಂಡಂತೆ ಹಲವಾರು ಗವಿಗಳು ಕಂಡವು. ಈ ಗವಿಗಳಿಂದಲೇ ಚಂಡೆ ಸದ್ದು ಬರುತ್ತಿದ್ದುದು. ಅದನ್ನು ನೋಡಿದ ತಕ್ಷಣ ಇವು ಆಮೆ ಮೊಟ್ಟೆಗಳಿಡುವ ಗೂಡು ಗಳೆಂದು ಅಂದಾಜಾಯ್ತು. ವಂಡೂರಿನ ಫಾರೆಸ್ಟ್ ರೇಂಜರ್ ನಮಗೆ ಇವುಗಳ ಬಗ್ಗೆ ತಿಳಿಸಿದ್ದರು. ಮಾಂಸಕ್ಕಾಗಿ ನಿರಂತರವಾಗಿ ಬೇಟೆಯಾಡುತ್ತಿದ್ದುದರಿಂದಲೂ ಮೊಟ್ಟೆಗಳನ್ನು ಮಾರಾಟಕ್ಕೆ ಕದಿಯುತ್ತಿದ್ದುದರಿಂದಲೂ ಅಂಡಮಾನಿನ ಆಮೆಗಳ

This PDF was created using the Sonic PDF Creator.
To remove this watermark, please license this product at www.investintech.com

ಸಂತತಿ ಕ್ಷೀಣಿಸುತ್ತಿತ್ತು. ಅವುಗಳನ್ನು ಸಂರಕ್ಷಿಸುವುದೂ ಈ ರಾಷ್ಟ್ರೀಯ ಉದ್ಯಾನದ ಉದ್ದೇಶಗಳಲ್ಲಿ ಒಂದೆಂದು ಹೇಳಿದ್ದರು.

ಕಡಲಾಮೆಗಳು ರಾತ್ರಿ ವೇಳೆ ಸಮುದ್ರದಿಂದ ಬಂದು ಈ ಗವಿಗಳ ಮರಳಿನಲ್ಲಿ ಗುಂಡಿತೋಡಿ ಮೊಟ್ಟೆಯಿಟ್ಟು ಮುಚ್ಚಿ ಹೋಗುತ್ತವೆ. ಮರಳಿನ ಶಾಖದಿಂದಲೇ ಈ ಆಮೆ ಮರಿಗಳು ಮೊಟ್ಟೆ ಒಡೆದುಕೊಂಡು ಆಚೆ ಬರುತ್ತವೆ. ಸಮುದ್ರದ ಉಬ್ಬರ ಆರಂಭವಾದಾಗ ಸಮುದ್ರದ ನೀರು ಒಳನುಗ್ಗುತ್ತದೆ. ಹಿಮ್ಮರಳುವ ಅಲೆಗಳೊಡನೆ ಮೊಟ್ಟೆಯೊಡೆದ ಮರಿಗಳೂ ಸಾಗರದ ಕಡೆಗೆ ಸಾಗುತ್ತವೆ. ವಂಡೂರ್ ರಾಷ್ಟ್ರೀಯ ಉದ್ಯಾನದಲ್ಲಿ ಆಳ ಸಮುದ್ರದ ಶಾರ್ಕುಗಳು ಬರುವುದಿಲ್ಲವಾದ್ದರಿಂದ ಈ ಮರಿಗಳು ಬದುಕಿ ಉಳಿಯುವ ಸಂಭವ ಹೆಚ್ಚು.

ಈ ಆಮೆಯ ಮೊಟ್ಟೆಗಳು ತುಂಬಾ ರುಚಿಕರವಾಗಿಯೂ ಹಸಿಯದನ್ನೇ ತಿಂದರೆ ಬಾದಾಮಿಯ ಸ್ವಾದ ಇರುತ್ತದೆಂದೂ, ಅದಕ್ಕಾಗಿ ಆಮೆ ಗವಿಗಳಲ್ಲಿನ ಮೊಟ್ಟೆಗಳನ್ನು ಮೀನುಗಾರರು ಕದಿಯುವುದನ್ನೇ ಉದ್ಯೋಗ ಮಾಡಿಕೊಂಡಿದ್ದಾರೆಂದೂ ರೇಂಜರ್ ನಮಗೆ ತಿಳಿಸಿದ್ದರು. ಈಗ ಅಂತರ್ರಾಷ್ಟ್ರೀಯ ಉದ್ಯಾನವಾದ್ದರಿಂದ ಇವೆಲ್ಲ ನಿಂತು ಆಮೆಗಳಿಗೆ ಸಂರಕ್ಷಣೆ ಒದಗಿತ್ತು. ನಾನು ಆಮೆಯ ಮೊಟ್ಟೆಯೋ ಮರಿಯೋ ಗವಿಯೊಳಗೆ ಕಾಣಬಹುದೆಂದು ಇಣುಕಿನೋಡಿದೆ. ಗವಿಯೊಳಗಿನ ನಸುಗತ್ತಲಲ್ಲಿ ಏನೂ ಸರಿಯಾಗಿ ಕಾಣಲಿಲ್ಲ. ಪ್ರತಿ ಅಲೆ ಬಂದು ಹೊಡೆದಾಗಲೂ ಗವಿಗಳ ಬಾಯಿಂದ ತಮಟೆ ಶಬ್ದ ಮಾತ್ರ ಛಂದೋಬದ್ಧವಾಗಿ ಬರುತ್ತಿತ್ತು.

ಚಿರಿಯಾಟಾಪುವಿನ ಬಳಿ ಒಂದು ಆಮೆಯ ಗವಿಯ ಬಳಿಯೇ ಗಾಳ ಹಾಕಿಕೊಂಡು ನಾನು ಚಂದ್ರು ಒಂದುದಿನ ಕುಳಿತಿದ್ದವು. ಆಗೊಮ್ಮೆ ಸಮುದ್ರದ ಉಬ್ಬರ ಆರಂಭವಾಯ್ತು. ಕಡಲಿನ ನೀರು ನೊರೆಗರೆಯುತ್ತಾ ಗುಹೆಯ ಕಡೆಗೆ ಏರಿಬರಲಾರಂಭಿಸಿತು. ಆಗ ನೊರೆಗರೆಯುವ ಅಲೆಗಳ ನಡುವೆ ಎರಡು ಆಮೆಗಳು ಈಜಿ ಬರುತ್ತಾ ಇರುವುದನ್ನು ಚಂದ್ರು ನನಗೆ ತೋರಿಸಿದರು. ನಾನು ನೋಡಿದಾಗ ಅಲೆಗಳ ನೊರೆಯ ನಡುವೆ ಇನ್ನೂ ಹಲವಾರು ಆಮೆಗಳು ಈಜಿ ಬರುತ್ತಿರುವುದನ್ನು ಗಮನಿಸಿದೆ. ಆದರೆ ದಡದಲ್ಲಿ ಕುಳಿತಿದ್ದ ನಮ್ಮಿಬ್ಬರನ್ನೂ ನೋಡಿದ್ದೇ ತಡ ಬೆನ್ನು ತಿರುಗಿಸಿ ಪರಾರಿಕಿತ್ತವು. ಆಮೇಲೆ ಒಂದೇ ಒಂದು ಆಮೆಯೂ ನಮ್ಮ ಕಣ್ಣಿಗೆ ಬೀಳಲಿಲ್ಲ.

This PDF was created using the Sonic PDF Creator.
To remove this watermark, please license this product at www.investintech.com

ಪೆಸಿಫಿಕ್ ಮಹಾಸಾಗರದ ಕೋರಾಲ್‌ಗಳ ಆಟಾಲ್‌ಗಳ ಬಗ್ಗೆ ಮೊದಲೇ ಪ್ರಸ್ತಾಪಿಸಿದ್ದೇನೆ. ಸುಮಾರು ಮೂರು ನಾಲ್ಕು ಸಾವಿರ ಮೈಲು ಉದ್ದಗಲದ ಈ ಮಹಾಸಾಗರದ ಹವಳದ ಆಟಾಲ್‌ಗಳು ಅನೇಕ ವಿಜ್ಞಾನಿಗಳ ಕುತೂಹಲ ಕೆರಳಿಸಿವೆ.

ಪೆಸಿಫಿಕ್ ಮತ್ತು ಹಿಂದೂ ಸಾಗರದ ಹವಳದ ದಂಡೆಗಳ ರಚನೆಯನ್ನು ಪ್ರಕೃತಿ ವಿಜ್ಞಾನಿಗಳು ಮೂರು ವರ್ಗಗಳಾಗಿ ವಿಭಾಗಿಸುತ್ತಾರೆ. ಒಂದು ಹವಳದ ಆಟಾಲ್‌ಗಳು, ಎರಡನೆಯದು ಬ್ಯಾರಿಯರ್ ರೀಫ್‌ಗಳು, ಮೂರನೆಯದು ಫ್ರಿಂಜಿಂಗ್ ರೀಫ್‌ಗಳು. ಈ ಹವಳದ ದಂಡೆಗಳ ಉದ್ಭವಕ್ಕೆ ಇಂದು ಅನೇಕ ಸಿದ್ಧಾಂತಗಳಿವೆ.

ಆಟಾಲ್‌ಗಳೆಂದರೆ ಸಾಗರದ ನಡುವೆ ಇರುವ ವೃತ್ತಾಕಾರದ ಸಮುದ್ರದ ದಂಡೆಗಳು, ಜ್ವಾಲಾಮುಖಿಯ ಬಾಯಿಯಂತೆ ಇವು ನೋಡಲು ಕಾಣುತ್ತವೆ. ಈ ಆಟಾಲ್‌ಗಳ ಹೊರಗೆ ಭಯಂಕರ ಪ್ರಕ್ಷುಬ್ಧ ಸಾಗರ ಇದ್ದರೂ ತಿಳಿನೀರಿನ ಕೊಳದಂತೆ ಪ್ರಶಾಂತವಾಗಿರುತ್ತದೆ. ಅನೇಕ ವಿಜ್ಞಾನಿಗಳು ಇವು ಜ್ವಾಲಾ ಮುಖಿಯ ಬಾಯಿಯ ಮೇಲೇ ರೂಪುಗೊಂಡು ಬೆಳೆದಿರುವ ಹವಳದ ದಂಡೆ ಗಳೆಂದು ಹೇಳುತ್ತಾರೆ. ಆದರೆ ಅನೇಕ ಆಟಾಲ್‌ಗಳು ಜ್ವಾಲಾಮುಖಿಯ ಬಾಯಿ ಎಂದು ಹೇಳಲಾರದಷ್ಟು ವಿಸ್ತಾರವಾಗಿವೆ.

ಪೆಸಿಫಿಕ್ ಸಾಗರದ ಸುವಾಡೀವಾ ಆಟಾಲ್ 44 ಮೈಲಿ ಸುತ್ತಳತೆ ಇದೆ. ರಿಮ್ಸ್ಕಿ ಆಟಾಲ್ 54 ಮೈಲಿ ಸುತ್ತಳತೆ ಇದೆ. ಹಿಂದೂ ಮಹಾಸಾಗರದ ಮಾಲ್ಡೀವಾ ಆಟಾಲ್ 88 ಮೈಲಿ ಸುತ್ತಳತೆ ಇದೆ. ಇವುಗಳಲ್ಲದೆ ಜ್ವಾಲಾಮುಖಿ ಗಳು ಬಾಯಿಯಂತೆಯೇ ಕಾಣುವ ಚಿಕ್ಕಪುಟ್ಟ ಆಟಾಲ್‌ಗಳಂತೂ ಲೆಕ್ಕವಿಲ್ಲ ದಷ್ಟಿವೆ. ಹವಳದ ದಂಡೆಗಳೇ ಸಮುದ್ರದ ಕೊರೆತವನ್ನು ತಪ್ಪಿಸಿಕೊಳ್ಳಲು ಈ ರೀತಿಯಾಗಿ ವೃತ್ತಾಕಾರವಾಗಿ ರೂಪುಗೊಳ್ಳುತ್ತವೆಂದೂ ಒಂದು ವಾದ ಇದೆ.

ಇನ್ನೊಂದು ಬಗೆಯ ಹವಳದ ದಂಡೆಗಳೆಂದರೆ ದ್ವೀಪಗಳ ಸುತ್ತ ಇರುವ ಬ್ಯಾರಿಯರ್ ರೀಫ್‌ಗಳು. ಇವು ಪೆಸಿಫಿಕ್ ಮಹಾಸಾಗರದಲ್ಲಿರುವ ಅನೇಕ ದ್ವೀಪಗಳ ಸುತ್ತ ಇವೆ. ದ್ವೀಪಗಳ ಸುತ್ತ ಕೋಟೆ ಕಟ್ಟಿದಂತೆ ದ್ವೀಪಕ್ಕೂ ಸಾಗರಕ್ಕೂ ನಡುವೆ ಇವು ರೂಪುಗೊಂಡಿರುತ್ತವೆ.

ಕೆಲವೆಡೆಗಳಲ್ಲಿ ದ್ವೀಪಗಳಿಗೂ ಈ ಬ್ಯಾರಿಯರ್ ರೀಫ್‌ಗಳಿಗೂ ನಡುವೆ ನಲ್ವತ್ತು ಮೈಲುಗಳಷ್ಟು ಅಂತರವಿರುತ್ತದೆ. ನಡುವಿನ ಸಮುದ್ರ ಆಟಾಲ್‌ಗಳ

This PDF was created using the Sonic PDF Creator.
To remove this watermark, please license this product at www.investintech.com